
ಸಂಪುಟ 22 ಸಂಚಿಕೆ 4
ಜನವರಿ 23, 2000 ಬೆಲೆ ರೂ. 3.00


ದುಡಿವ ಜನರ ಪ್ರಾಣಮಿತ್ರ ಪೆಕ್ಕ್ಯಾರಂಗ

ಅನಿರ್ದಿಷ್ಟ ಮುಷ್ಕರದೆಡೆಗೆ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರು





'ಜೀವಂತ ಬುದ್ಧ' ಓಡಿಬಂದದ್ದೇಕೆ?



ನೂರು ದಿನಗಳ ಕೃಷ್ಣರ ಸರ್ಕಾರ

ಭ್ರಮೆಗಳನ್ನೇ ಬಿತ್ತಿದ ಕೃಷ್ಣರವರ ನೂರುದಿನಗಳ ಆಡಳಿತ

'ಹೈಟೆಕ್' ಮುಖ್ಯಮಂತ್ರಿ ಎಸ್.ಎಂ.ಕೃಷ್ಣರ ಸರ್ಕಾರದೊಳಗೆ ನೂರು ದಿನಗಳು ಪೂರೈಸಿದ್ದೇ ಸಮಾಧಾನ! ನೂರು ದಿನಗಳು ಒಂದು ಸರ್ಕಾರದ ಸಾಧನೆಗಳನ್ನು ಸಮಗ್ರವಾಗಿ ಅಳೆಯಲು ಸಾಲದು ನಿಜ. ಆದರೆ ಸರ್ಕಾರ ಸಾಗುತ್ತಿರುವ, ಮಾರ್ಗದ ಸ್ಪಷ್ಟ ಸೂಚನೆ ಸಿಗಲು ಸಾಕು.

ಕೃಷ್ಣರವರು ಅಧಿಕಾರಕ್ಕೇರುತ್ತಿರುವಂತೆ ತಮ್ಮ ಆಡಳಿತದ ದಾರಿ 'ಸಿಇಓ ಮಾದರಿ' ಯೆಂದು ಆಂಧ್ರದ ಉದಾರೀಕರಣದ ಆರಾಧಕ ಚಂದ್ರಬಾಬು ನಾಯ್ಡುವನ್ನು ಅನುಕರಿಸಬಯಸಿದರು. ಮಾಹಿತಿ ತಂತ್ರಜ್ಞಾನ, ಕಂಪ್ಯೂಟರ್‌ಗಳ ಮೂಲಕ ಆಡಳಿತ ನಡೆಸ್ಲುವ, ಸುಧಾರಿಸುವ ಯೋಜನೆ ಪ್ರಕಟಿಸಿದರು. ರಾಷ್ಟ್ರೀಯ ಪಕ್ಷವಾಗಿ, ತಾನೊಂದೇ ಪರ್ಯಾಯವೆಂದೆಲ್ಲಾ ಹೇಳಿಕೊಳ್ಳುವ ಕಾಂಗ್ರೆಸ್ ಪಕ್ಷ ಪ್ರಾದೇಶಿಕ ಪಕ್ಷವೊಂದರ ಆಡಳಿತವನ್ನೇ ತನ್ನ ಮಾದರಿಯೆಂದು ಬಗೆಯುತ್ತಿರುವುದು ಗಂಭೀರವಾದ ಬೆಳವಣಿಗೆ. ಕಾಂಗ್ರೆಸ್‌ಗೆ, ಜನಮನ ಗೆಲ್ಲಬಲ್ಲ ತನ್ನದೇ ಆದ ಆರ್ಥಿಕ-ಸಾಮಾಜಿಕ ರಾಜಕೀಯ ಧೋರಣೆಗಳಿಲ್ಲದೇ, ತಡಕಾಡುತ್ತಿರುವುದರ ಒಂದು ಉದಾಹರಣೆ. ಇದೇ ಅವಧಿಯಲ್ಲಿ ರೈತ ಚಳುವಳಿಯ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಲಾಗುವುದು ಎಂಬ ಒಂದು ಸ್ವಾಗತಾರ್ಹ ನಿರ್ಧಾರ ಬಿಟ್ಟರೆ (ತನ್ನ ಇಬ್ಬರು ಮಂತ್ರಿಗಳಿಗೆ ಅರೆಸ್ಟ್ ವಾರೆಂಟ್ ಬಂದ ನಂತರ ಜ್ಞಾನೋದಯವಾಯಿತೇ ಎಂಬ ಶಂಕೆಯಿದೆ) ಉಳಿದಂತೆ ಹೇಳಿಕೊಳ್ಳುವಂತಹ ಜನಪರ ನಿಲುವು ತಳೆದಿಲ್ಲ. ಕೇಂದ್ರದ ಉದಾರೀಕರಣ-ಜಾಗತೀಕರಣದ ದಿವಾಳಿ ನೀತಿಗಳನ್ನು ಪ್ರತಿರೋಧಿಸದೇ, ಅವುಗಳನ್ನೇ ಜಾರಿಗೊಳಿಸುವ ನಿರ್ಧಾರವನ್ನು ಮುಖ್ಯಮಂತ್ರಿಗಳು ಪುನರುಚ್ಚರಿಸುತ್ತಲೇ ಬಂದಿದ್ದಾರೆ. ರಾಜ್ಯದಲ್ಲಿ ಬಳ್ಳಾರಿ ಜಿಲ್ಲೆಯ ಉಕ್ಕು, ವಿದ್ಯುತ್, ಕೈಗಾರಿಕೆಗಳಂತಹ ಇತರ ಉದ್ದಿಮೆಗಳು, ನೀರಾವರಿ ಯೋಜನೆಯಂತಹ ಮೂಲಭೂತ ಅಭಿವೃದ್ಧಿಯ ಬಗೆ ನೀಡಿರುವ ಭರವಸೆಗಳು ಕೇವಲ ಬಣ್ಣದ ಮಾತುಗಳಾಗಿ ಗಾಳಿಯಲ್ಲಿ ತೇಲುತ್ತಿವೆ. ಅವುಗಳ ಜಾರಿಗೆ ಅಗತ್ಯವಾದ ಸಂಪನ್ಮೂಲ ಕ್ರೋಢೀಕರಣ ಮಾಡಲಾಗಿದೆಯೇ? ಇದಕ್ಕೆ ನಿಖರ ಉತ್ತರವಿಲ್ಲ. ಇನ್ನೊಂದೆಡೆ ಅಭಿವೃದ್ಧಿಯೆಂದರೆ ರಸ್ತೆ -ಸೇತುವೆ ನಿರ್ಮಾಣವೆಂದೂ, ಅದಕ್ಕಾಗಿ ವಿದೇಶಿ ಸಾಲ-ಎತ್ತುವುದು ಮತ್ತು ಎಲ್ ಅಂಡ್ ಟಿ ಯಂತಹ ಬಹುರಾಷ್ಟ್ರೀಯ ಕಂಪನಿಗಳಿಗೆ ಕಾಂಟ್ರಾಕ್ಟ್ ನೀಡುವುದು ಎಂದಾಗಿದೆ.

ಸಂಪಾದಕೀಯ

ಆಸ್ಪತ್ರೆ, ನೀರು, ಪೂರೈಕೆ, ರಸ್ತೆ-ಸೇತುವೆಗಳು, ಪಾರ್ಕ್‌ಗಳ ನಿರ್ವಹಣೆ ಖಾಸಗಿಯವರಿಗೆ ವಹಿಸಲಾಗುತ್ತಿದೆ. ವಿದೇಶಿ ಸಾಲ ಪಡೆಯುವುದೇ ಒಂದು ಸಾಧನೆಯೆಂದು, ಅಭಿವೃದ್ಧಿ ಮಾನದಂಡವೆಂದೂ ನಂಬಿಸಲಾಗುತ್ತಿದೆ. ಕೋಜೆಂಟ್ರಿಕ್ಸ್ ಬದಲು ಎನ್ರಾನ್ ತರುವ ಸಂಚು ನಡೆದಿದೆ. ಇವೆಲ್ಲಕ್ಕೂ ಮೇರು ಕಿರೀಟವೆಂಬಂತೆ ಬೆಂಗಳೂರನ್ನು ಸಿಂಗಪೂರವನ್ನಾಗಿಸುವ ಕನಸುಗಳನ್ನು ಬಿತ್ತಲಾಗುತ್ತಿದೆ. ಈ ಬಣ್ಣದ ಭ್ರಮೆಯ ಬಲೂನುಗಳು ಉಲ್ಬಣಗೊಳ್ಳುತ್ತಿರುವ ಸಮಸ್ಯೆಗಳ ಬಿಸಿಗೆ ಒಡೆದು ಹೋಗಲಿವೆಯೆಂಬ ಪರಿವೆ ಕೃಷ್ಣರಿಗೆ ಇದ್ದಂತಿಲ್ಲ. ಇನ್ನು ಹಳ್ಳಿಗಳ ಅಭಿವೃದ್ಧಿ ಮಾತುಗಳಲ್ಲಿಯೂ ಇಲ್ಲ.

ಮುಖ್ಯಮಂತ್ರಿಗಳು ಹೇಳಿಕೊಂಡಂತೆ ಆಕಳಿಸಿ, ಅಡ್ಡ ಹಾದಿ ಹಿಡಿದ ಆಡಳಿತಕ್ಕೆ ಚುರುಕ ಮುಟ್ಟಿಸಲಾಗಿಲ್ಲ. ಅಧಿಕಾರವನ್ನು ಜನತೆಯ ಕೈಗೆ ನೀಡಲು ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ ಮಾತು ದೂರವುಳಿಯಿತು. ಬದಲಾಗಿ ಹೆಚ್ಚು ಹೆಚ್ಚಾಗಿ ಅಧಿಕಾರಶಾಹಿ ಮೇಲುಗೈ ಪಡೆಯುವ ಜನಪ್ರತಿನಿಧಿಗಳು ಸ್ಥಾನದಲ್ಲಿ 'ಟಾಸ್ಕ್ ಫೋರ್ಸ್'ಗಳೆಂಬ 'ಸೂಪರ್ ಸರ್ಕಾರ'ವನ್ನು ಕಾಣತೊಡಗಿದ್ದೇವೆ. ಈ ಟಾಸ್ಕ್ ಫೋರ್ಸ್‌ಗಳ ನೇತೃತ್ವವೂ ಸಹ ದೊಡ್ಡ ಕಂಪನಿಗಳ ಧಣಿಗಳಿಗೇ ಅಥವಾ ಅವರ ಬಾಲಬಡುಕರಿಗೆ ನೀಡಲಾಗಿದೆ. ಈ ಅಧಿಕಾರಶಾಹಿಯೆದುರು ಸರ್ಕಾರದ ಮಂತ್ರಿಗಳೇ ಕೈ ಹಿಸುಕುವ ನಾಮಕಾವಸ್ಥೆ ಸ್ಥಿತಿ ಅನುಭವಿಸುತ್ತಿದ್ದಾರೆ. ಜನಸಾಮಾನ್ಯರಿಗೆ ಈ ಆಡಳಿತದ ಫಲ ಸಿಕ್ಕಿಲ್ಲ. ಪಡಿತರ ಆಹಾರ ವಸ್ತುಗಳು ಸುಲಭ ದರದಲ್ಲಿ ವಿತರಣೆ, ಸೂರು, ನೀರು ನಾಗರೀಕ ಸೌಲಭ್ಯಗಳಿಗೆ ಜನ ಕಾದುಕೊಂಡೇ ಇದ್ದಾರೆ. ಭೂ ಹಂಚಿಕೆ, ದುಡಿಮೆ ಅವಕಾಶ ಹೆಚ್ಚಳವಾಗದೇ ಕೊಳ್ಳುವ ಶಕ್ತಿಯೂ ಉಳಿಯಲಾರದು, ಬೆಳೆಯಲಾರದು.

ಈ ನಡುವೆ ಎದ್ದು ಬಂದ ಬಹಳ ಮುಖ್ಯವಾದ ಪ್ರಶ್ನೆ ಕೃಷ್ಣಾ ಮೇಲ್ದಂಡೆಗೆ ಯೋಜನೆ. ಈ ವಿಷಯದಲ್ಲಿ ಇನ್ನೂ ಹೆಚ್ಚು ಕಾಲಹರಣ ಮಾಡದೇ, ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು, ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಅಫಿಡವಿಟ್‌ನ್ನು ವಾಪಸು ಪಡೆಯುವಂತೆ ಮಾಡಬೇಕು, ಸರ್ವಸಮ್ಮತ ಪರಿಹಾರ ಸೂತ್ರಕ್ಕೆ ನಿಷ್ಪಕ್ಷ ಪಾತ್ರ ಮಧ್ಯಸ್ಥಿಕೆಗೆ ಒತ್ತಾಯಿಸಬೇಕು ಮತ್ತು ಬಚಾವತ್ ಅವಾರ್ಡಿನ ಬಿ' ಹಂತದ ನೀರಿನ ಹಂಚಿಕೆಯ ಬಗ್ಗೆ ಈಗಲೇ ಆಯೋಗ ರಚಿಸಲು ಒತ್ತಾಯಿಸಬೇಕು. ಇದು ಬಿಟ್ಟು ಕೇಂದ್ರವೇ ಎಲ್ಲವನ್ನು ಮಾಡುತ್ತದೆ ಎಂಬ ಭ್ರಮೆ ಹುಟ್ಟಿಸುವುದು ರಾಜ್ಯದ ಜನತೆಯ ಹಿತಕ್ಕೆ ಅಪಾಯಕಾರಿ.

ಇನ್ನೂ ಎಂದೋ ನಡೆಯಬೇಕಾಗಿದ್ದ ಪಂಚಾಯತ್ ಚುನಾವಣೆಗಳು ಮೀನಮೇಷದ ಎಣಿಕೆಯಲ್ಲಿ ಹೊಯ್ದಾಡುತ್ತಿವೆ. ಜನತೆಗೆ ಕೈಗೆ ನಿಜವಾದ ಅಧಿಕಾರ ನೀಡಲು ಕಾಂಗ್ರೆಸ್ ಯಾವಾಗಲೂ ಸಿದ್ಧವಿಲ್ಲ. ಇರುವ ಸೀಮಿತ ಅವಕಾಶಗಳನ್ನು ನೀಡಲು ಸಹ ರಾಜಕೀಯ ಇಚ್ಛಾ ಶಕ್ತಿಯ ಕೊರತೆ ಕಾಣುತ್ತಿದೆ. ಈ ಸರಕಾರದ ಮಂತ್ರಿಗಳು ಅಧಿಕಾರಿಗಳು, ಭ್ರಷ್ಟಾಚಾರದಲ್ಲಿ ಭಾಗಿಯಾದ ಪ್ರಕರಣಗಳು ಇನ್ನೂ ಬಹಿರಂಗಗೊಂಡಿಲ್ಲ. ಉದಾರೀಕರಣದಲ್ಲಿ ತಿಂದುಂಡಾಡಿದವನೇ ಜಾಣ ಎಂಬ ಹೊಸ ನಾಣ್ನುಡಿ ಹುಟ್ಟಿರುವಾಗ, ಈ ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರ ರಹಿತವಾಗಿ ಇರುತ್ತದೆ ಎಂದು ಭಾವಿಸುವುದು ಮುಗ್ಧತನವಾದೀತು.

ಒಟ್ಟಾರೆ ಕೃಷ್ಣರವರ ಸರಕಾರ ಬಿಜೆಪಿಯ ಅಥವಾ ಅವರಿವರ ಹಾದಿಗಳನ್ನು ಅನುಸರಿಸುವುದನ್ನು ಬಿಡಬೇಕು. ದೇಶದಲ್ಲಿ - ರಾಜ್ಯದಲ್ಲಿ ಕೋಮುವಾದೀ ಶಕ್ತಿಗಳು, ಇಲ್ಲದ ವಿವಾದಗಳನ್ನೆಬ್ಬಿಸಿ ಕೇಕೆ ಹಾಕಿ ಗಲಭೆ- ಹಿಂಸಾಚಾರ ಹಬ್ಬಿಸಲು ಹವಣಿಸುತ್ತಿವೆ. ಸಾಮ್ರಾಜ್ಯಶಾಹಿಗಳ್ನು ಹೊಂಚು ಹಾಕಿ ದೇಶವನ್ನು ಕಬಳಿಸಲು ಕಾಯುತ್ತಿದ್ದಾರೆ. ಈ ಸರ್ಕಾರ ಜಾಗ್ರತವಾಗಿರುವುದು, ಆ ಶಕ್ತಿಗಳನ್ನು ಸರ್ಕಾರದ ಹಾಗೂ ಜನತೆಯ ಬಲದೊಂದಿಗೆ ಎದುರಿಸುವುದು ಅತ್ಯಗತ್ಯ.

ಕಾಂಗ್ರೆಸ್ ಪಕ್ಷ ಪಾಠ ಕಲಿಯಬೇಕಾಗಿದೆ

ಕಾಂ. ಪ್ರಕಾಶ್ ಕಾರಟ್

ಕೇಂದ್ರದ ಬಿಜೆಪಿ ಸರ್ಕಾರ ಅನುಸರಿಸುತ್ತಿರುವ ಉದಾರೀಕರಣದ ಆರ್ಥಿಕ ನೀತಿ, ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣವನ್ನು ಬೆಂಬಲಿಸುವ ನಿರ್ಧಾರ ಕೈಗೊಂಡ ಕಾಂಗ್ರೆಸ್ ಇನ್ನೂ ಪಾಠ ಕಲಿತಿರುವಂತೆ ಕಾಣದು ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋ ಸದಸ್ಯ ಕಾಂ. ಪ್ರಕಾಶ ಕಾರಟ್ ನುಡಿದರು. ಅವರು ಜನವರಿ 5, 2000 ರಂದು ತುಮಕೂರಿನ ವುಡ್‌ಲ್ಯಾಂಡ್ಸ್ ಸಭಾಂಗಣದಲ್ಲಿ 'ಪ್ರಸ್ತುತ ಪರಿಸ್ಥಿತಿಯಲ್ಲಿ ದೇಶದ ಮುಂದಿರುವ ಸವಾಲುಗಳು' ಎಂಬ ವಿಷಯದ ಬಗ್ಗೆ ಮಾತನಾಡುತ್ತಿದ್ದರು. ಸಿದ್ದರಬೆಟ್ಟದ ಶ್ರೀ ಶೈಲ ಮಲ್ಲಿಕಾರ್ಜುನ ಸಮುದಾಯ ಭವನದಲ್ಲಿ ನಡೆಯುತ್ತಿರುವ ರಾಜ್ಯಮಟ್ಟದ ಶಿಬಿರದಲ್ಲಿ ಪಾಲ್ಗೊಳ್ಳಲು ಆಗಮಿಸಿದ ಕಾರಟ್ ಅವರು ತುಮಕೂರಿಗೆ ಭೇಟಿ ನೀಡಿದ್ದರು.

ಬಿಜೆಪಿ ಹಾಗೂ ಕಾಂಗ್ರೆಸ್‌ಗೆ ಅಂತರ ಬಹಳ ಕಡಿಮೆ. ಇನ್ಸೂರೆನ್ಸ್ ಖಾಸಗೀಕರಣಗೊಳಿಸುವ ಒಂದು ಅಪಾಯಕಾರಿ ಹಾಗೂ ದೇಶದ ಸಾರ್ವಭೌಮತೆಯನ್ನು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಒತ್ತೆಯಿಡುವ ಮಸೂದೆಗೆ ಕಾಂಗ್ರೆಸ್ ಬೆಂಬಲ ನೀಡುವ ಮೂಲಕ ದೊಡ್ಡ ದ್ರೋಹವೆಸಗಿದೆಯೆಂದು ಆರೋಪಿಸಿದ ಕಾರಟ್ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಅನುಭವಿಸಿದ ಹೀನಾಯ ಸೋಲಿಗೆ ಆ ಪಕ್ಷ ಅನುಸರಿಸಿದ ಜನ ವಿರೋಧಿ ಆರ್ಥಿಕ ನೀತಿಗಳೇ ಕಾರಣವೆಂದು ನುಡಿದರು. ತಾನು ಸ್ವದೇಶಿ ಎಂದು ಕೊಚ್ಚಿಕೊಳ್ಳುವ ಕೇಂದ್ರದ ವಾಜಪೇಯಿ ಸರ್ಕಾರ ಅತ್ಯಂತ ವೇಗವಾಗಿ ಉದಾರೀಕರಣ ನೀತಿಯನ್ನು ಜಾರಿ ಮಾಡುತ್ತಿದೆ. ಅಮೇರಿಕಾ ನೇತೃತ್ವದ ವಿಶ್ವ ವ್ಯಾಪಾರ ಸಂಸ್ಥೆ ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಒತ್ತಡಕ್ಕೆ ವಾಜಪೇಯಿ ಸರ್ಕಾರ ತಲೆಬಾಗುತ್ತಿರುವುದಕ್ಕೆ ಕಾರಣವೆಂದು ಕಾರಟ್ ಆರೋಪಿಸಿದರು.

ಉದಾರೀಕರಣದಿಂದಾಗಿ ಮುಖ್ಯವಾಗಿ ನಮ್ಮ ದೇಶದ ಸಣ್ಣ ಕೈಗಾರಿಕೆಗಳು ಅಪಾಯ ಎದುರಿಸುತ್ತಿದೆ. ಇದರಿಂದಾಗಿ ಬಿಜೆಪಿಯನ್ನು ಬೆಂಬಲಿಸಿದ ಈ ಸಣ್ಣ ಕೈಗಾರಿಕೆಗಳ ಮಾಲೀಕರು ಹಾಗೂ ವ್ಯಾಪಾರಸ್ಥರೂ ಅಪಾಯದ ಅಂಚಿನಲ್ಲಿದ್ದಾರೆಂದು ಕಾರಟ್ ನುಡಿದರು. ಬಹುತೇಕ ಜನರಿಗೆ ಉದ್ಯೋಗ ನೀಡುತ್ತಿದ್ದ ಸಣ್ಣ ಕೈಗಾರಿಕೆಗಳು ಮುಚ್ಚುವುದರಿಂದ ಭೀಕರ ನಿರುದ್ಯೋಗ ಹಾಗೂ ಬಡತನ ಹಿಂದೆಂದಿಗಿಂತಲೂ ಹೆಚ್ಚಾಗಲಿದೆ ಎಂದು ನುಡಿದ ಕಾರಟ್ ಇಂತಹ ಜನವಿರೋಧಿ ಹಾಗೂ ದೇಶ ವಿರೋಧಿ ಸರ್ಕಾರದೆದುರು ಹೋರಾಟಗಳು ಮೂಡಿ ಬರಲಿವೆ ಎಂದರು" ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದ ಸಾರ್ವಜನಿಕ ಉದ್ದಿಮೆಯಾದ ಗ್ಯಾಸ್ ಅಥಾರಿಟಿಯ ಶೇರುಗಳನ್ನು 70 ರೂ.ಗಳಿಗೆ ಎನ್ರಾನ್ ಕಂಪನಿಗೆ ಸರ್ಕಾರ ಮಾರುತ್ತಿದೆ ಎಂದು ಆರೋಪಿಸಿದ ಕಾರಟ್ ಸ್ವದೇಶಿ ಮುಖವಾಡ ಧರಿಸಿದ ಸರ್ಕಾರ ಬಹುರಾಷ್ಟ್ರೀಯ ಕಂಪನಿಗಳ ಕೈಗೊಂಬೆಯಾಗಿದೆಯೆಂದರು.

ವಿಶ್ವಬ್ಯಾಂಕ್, ವಿಶ್ವ ವ್ಯಾಪಾರ ಸಂಸ್ಥೆಗಳ ನಿರ್ದೇಶನದಂತೆ ಕೃಷಿ ಹಾಗೂ ಆಹಾರ ಧಾನ್ಯಗಳಿಗೆ ನೀಡುತ್ತಿದ್ದ ಸಬ್ಸಿಡಿಯನ್ನು ಕೇಂದ್ರ ಸರ್ಕಾರ ಕಡಿತಗೊಳಿಸಿದೆ. ಅಮೆರಿಕಾ ರಾಷ್ಟ್ರ ತನ್ನ ರೈತರಿಗೆ 60 ಸಾವಿರ ಡಾಲರ್ ಸಬ್ಸಿಡಿ ನೀಡುತ್ತಿದ್ದು, ಅದೇ ದೇಶ ನಮ್ಮ ದೇಶದ ರೈತರಿಗೆ ಸಬ್ಸಿಡಿ ನೀಡಬಾರದೆನ್ನುತ್ತಿದೆ. ಇದನ್ನು ಹೇಳಲು ಅಮೆರಿಕಾ ಯಾರು? ಮತ್ತು ಅದನ್ನು ಜಾರಿ ಮಾಡಲು ವಾಜಪೇಯಿ ಯಾರು? ಎಂದು ಕಾರಟ್‌ರವರು ಪ್ರಶ್ನಿಸಿದರು. ವಿಶ್ವಕ್ಕೆ ಅತಿ ಹೆಚ್ಚು ಬಡವರನ್ನು ಕಾಣಿಕೆ ಕೊಟ್ಟಿರುವ ಹೆಗ್ಗಳಿಕೆ ನಮ್ಮ ದೇಶದ್ದು, ಶೇ 40 ಕ್ಕಿಂತ ಹೆಚ್ಚು ಜನ ಬಡತನ ರೇಖೆಗಿಂತ ಕೆಳಗಿದ್ದಾರೆ. ಕೇಂದ್ರ ಸರ್ಕಾರದ ನೀತಿ ಇದನ್ನು ಇನ್ನೂ ಹೆಚ್ಚಿಸಲಿದೆಯೆಂದರು.

ಕೃಷಿಗೆ ನೀಡುವ ಸಬ್ಸಿಡಿ(ರಸಗೊಬ್ಬರ, ವಿದ್ಯುತ್) ಕಡಿತದಿಂದ ರೈತರು ನಷ್ಟ ಅನುಭವಿಸಲಿದ್ದಾರೆ. ವಿಶ್ವ ಮಾರುಕಟ್ಟೆಗೆ ಅಗತ್ಯವಾದ ಹಣ್ಣು ಹೂವು ಬೆಳೆದು ಲಾಭಗಳಿಸಲು ಹೇಳಲಾಗುತ್ತಿದೆ. ಆಹಾರಕ್ಕಾಗಿ ವಿದೇಶಕ್ಕೆ ಕೈಚಾಚುವ ಮಟ್ಟಕ್ಕೆ ನಮ್ಮನ್ನು ದೂಡಲಾಗುತ್ತಿದೆ. ಇದರ ವಿರುದ್ಧ ಪ್ರಬಲ ಹೋರಾಟ ಬೆಳೆದು ಬರಬೇಕೆಂದು ಕಾರಟ್ ತಿಳಿಸಿದರು. ಸಾರ್ವಜನಿಕ ವಿತರಣಾ ವ್ಯವಸ್ಥೆಯಿಂದಾಗಿ ಬಡವರು ಕಡಿಮೆ ಬೆಲೆಗೆ ಅಕ್ಕಿ, ಗೋಧಿ, ಸಕ್ಕರೆ ಪಡೆಯುತ್ತಿದ್ದರು. ಸಬ್ಸಿಡಿ ಕಡಿತದಿಂದ ಅವುಗಳ ಬೆಲೆ ಮಾರುಕಟ್ಟೆಯ ಬೆಲೆಯ ಮಟ್ಟಕ್ಕೆ ಹೋಗಿ ಗುಣಮಟ್ಟ ಕಳಪೆಯಾಗಿದೆ. ಬಡವರನ್ನು ಕೇಳುವವರಾರು ಎಂದು ಕಾರಟ್ ಪ್ರಶ್ನಿಸಿದರು.

ಅಮೆರಿಕಾ ಬಾಲ: ಕೇಂದ್ರ ಸರ್ಕಾರ ಅಮೆರಿಕಾದ ಬಾಲದಂತೆ ವರ್ತಿಸುತ್ತಿದೆ. ಪಾಕಿಸ್ತಾನವನ್ನು ಭಯೋತ್ಪಾದಕ ರಾಷ್ಟ್ರವೆಂದು ಘೋಷಿಸಲು ಕೇಂದ್ರ ಸರ್ಕಾರ ಅಮೆರಿಕಾವನ್ನು ಒತ್ತಾಯಿಸುತ್ತಿದೆ. ಒಂದು ರಾಷ್ಟ್ರ ಭಯೋತ್ಪಾದಕ, ಒಂದು ಒಳ್ಳೆಯದು ಎಂದು ಘೋಷಿಸುವ ಅಧಿಕಾರವನ್ನು ಅಮೆರಿಕಾಕ್ಕೆ ಕೊಟ್ಟವರಾರು ಎಂದು ಪ್ರಶ್ನಿಸಿದ ಕಾರಟ್ ಇರಾಕ್, ಕೋಸಾವೋ ಮೇಲೆ ಬಾಂಬ್ ಮಾಡಿರುವ ಅಮೆರಿಕ ಮೊದಲ ಭಯೋತ್ಪಾದಕ ರಾಷ್ಟ್ರವೆಂದರು.

ಮಾರ್ಚ್‌ನಲ್ಲಿ ಬೃಹತ್ ಮತ ಪ್ರದರ್ಶನ: ಬರುವ ಮಾರ್ಚ್‌ನಲ್ಲಿ ನವದೆಹಲಿಗೆ ಅಧ್ಯಕ್ಷ ಬಿಲ್‌ಕ್ಲಿಂಟನ್ ಭಾರತಕ್ಕೆ ಬರಲಿದ್ದಾರೆ. ಕೇಂದ್ರ ಸರ್ಕಾರ ತುಂಬಾ ಗೋಗೆರೆದು ಅವರನ್ನು ಬರಮಾಡಿಕೊಳ್ಳುತ್ತಿದೆ. ಈ ಸಂದರ್ಭದಲ್ಲಿ ಸಾವಿರಾರು ದೇಶಪ್ರೇಮಿ ಜನ ಸಾಮಾನ್ಯರು ಸಾವಿರಾರು ಸಂಖ್ಯೆಯಲ್ಲಿ ನೆರೆದು ಜನರ ಬೇಡಿಕೆ ಪಟ್ಟಿ ಸಲ್ಲಿಸಲಿದ್ದಾರೆ. ಈ ಪ್ರತಿಭಟನಾ ರ್‍ಯಾಲಿಯಲ್ಲಿ ತುಮಕೂರಿನ ಜನರೂ ಪಾಲ್ಗೊಳ್ಳಬೇಕೆಂದು ಅವರು ಕರೆ ನೀಡಿದರು.

ಮತಾಂತರದ ಹೆಸರಿನಲ್ಲಿ ಕ್ರಿಶ್ಚಿಯನ್ ಜನರ ಮೇಲೆ ಬಿಜೆಪಿ ಪಕ್ಷದ ಅಂಗವಾದ ಆರ್.ಎಸ್.ಎಸ್.ಹಲ್ಲೆ ನಡೆಸುತ್ತಿದೆ. ಇದಕ್ಕೆ ಕೇಂದ್ರ ಸರ್ಕಾರದ ಬೆಂಬಲವಿದೆ ಎಂದು ಕಾರಟ್ ಮತಾಂತರ ಅಷ್ಟೊಂದು ಇದ್ದರೆ, ಕ್ರಿಶ್ಚಿಯನ್‌ರ ಜನಸಂಖ್ಯೆ, 2.20 ಏಕಿದೆ ಎಂದು ಪ್ರಶ್ನಿಸಿದರು. ಬೇರೆ ಧರ್ಮದವರ ಕಡೆ ನೋಡುವ ಮೊದಲು ಹಿಂದೂ ಧರ್ಮದೊಳಗಡೆಯಿರುವ ಶೋಷಿತರ ಬಗ್ಗೆ ಬಿಜೆಪಿ ಮತ್ತು ಪರಿವಾರ ಗಮನ ಹರಿಸಲಿ ಎಂದು ಕಾರಟ್ ನುಡಿದರು.

ಅಲ್ಪಸಂಖ್ಯಾತರನ್ನು ಓಲೈಸಲಾಗುತ್ತಿದೆ ಎಂದು ನಮ್ಮ ಮೇಲೆ ಆರೋಪವಿದೆ, ಆದರೆ ಎಷ್ಟು ಮುಸ್ಲಿಮರು ಉನ್ನತ ವಿದ್ಯಾಭ್ಯಾಸ ಪಡೆದಿದ್ದಾರೆ, ಬಡತನದಲ್ಲಿ ತೊಳಲುತ್ತಿರುವವರು ಸಂಖ್ಯೆಯೆಷ್ಟು, ಇದು ಬಿಜೆಪಿಗೆ ಕಾಣಿಸದೇ ಎಂದು ಪ್ರಶ್ನಿಸಿದ ಕಾರಟ್, ನಮಗೆ ಜಾತಿ-ಧರ್ಮದ ಪ್ರಶ್ನೆಯಿಲ್ಲ. ಅದು ವೈಯಕ್ತಿಕ ವಿಚಾರ, ಆದರೆ ಎಲ್ಲಾ ಜಾತಿ ಧರ್ಮದೊಳಗಿನ ಶೋಷಿತ ಜನರನ್ನು ಒಗ್ಗೂಡಿಸಿ ಉತ್ತಮ ಜೀವನಕ್ಕಾಗಿ ಹೋರಾಟ ಮಾಡುವುದು ನಮ್ಮ ಪಕ್ಷದ ಗುರಿಯಾಗಿದೆ, ಈ ಹೋರಾಟಕ್ಕೆ ತಾವೆಲ್ಲ ಬೆಂಬಲಿಸಬೇಕು ಎಂದು ಕಾರಟ್ ಮನವಿ ಮಾಡಿದರು.

ಸಭೆಯ ಅಧ್ಯಕ್ಷತೆಯನ್ನು ಮಾಜಿ ಶಾಸಕ ಜಿ.ವಿ.ಶ್ರೀರಾಮರೆಡ್ಡಿ ವಹಿಸಿದ್ದರು. ಆರಂಭದಲ್ಲಿ ಈ.ಬಸವರಾಜು ಸ್ವಾಗತಿಸಿ ಕೊನೆಯಲ್ಲಿ ಬಿ.ಉಮೇಶ್ ವಂದಿಸಿದರು. ವೇದಿಕೆಯಲ್ಲಿ ಜಿಲ್ಲಾ ಕಾರ್ಯದರ್ಶಿ ಮುಜೀಬ್ ಉಪಸ್ಥಿತರಿದ್ದರು. ಕಾರಟ್ ಅವರ ಭಾಷಣದ ಅನುವಾದವನ್ನು ಕೆ.ಎನ್.ಉಮೇಶ್ ನಿರ್ವಹಿಸಿದರು. ಎಲ್.ಐ.ಸಿ. ಮತ್ತು ಜಿ.ಐ.ಸಿ. ನೌಕರರ ಪರವಾಗಿ ಕಾಂ. ಕಾರಟ್‌ರವರಿಗೆ ಶಾಲು ಹೊದಿಸಿ, ಗಂಧದ ಹಾರ ಹಾಕಿ ಗೌರವಿಸಲಾಯಿತು.

ವರದಿ: ಮುಜೀಬ್

ಅಲ್ಲಿ ರಾಷ್ಟ್ರೀಯ ಹಿತಾಸಕ್ತಿಗಳ ಬಲಿ - ಇಲ್ಲಿ ಕೋಮುವಾದಿ ಅಜೆಂಡಾ

ಕೇಂದ್ರದಲ್ಲಿನ ಬಿಜೆಪಿ ಸರಕಾರ ವಿಮಾನ ಅಪಹರಣ ಪ್ರಕರಣದಲ್ಲಿ ರಾಷ್ಟ್ರೀಯ ಹಿತಾಕ್ತಿಗಳನ್ನು ಗಮನದಲ್ಲಿಟ್ಟುಕೊಳ್ಳದೆ ಪೆದ್ದುತನದಿಂದ ವರ್ತಿಸುತ್ತಿರುವಾಗಲೇ ಆ ಪಕ್ಷದ ನಿಯಂತ್ರಣದಲ್ಲಿರುವ ರಾಜ್ಯ ಸರ್ಕಾರಗಳು ಇತ್ತೀಚಿನ ಕೆಲವು ದಿನಗಳಲ್ಲಿ ಕೈಗೊಂಡ ಕ್ರಮಗಳು ಆ ಪಕ್ಷಕ್ಕೆ ಎನ್.ಡಿ.ಎ. ಅಜೆಂಡಾ ಜಪಕ್ಕೆ ಮಾತ್ರ, ತನ್ನ ಬಚ್ಚಿಟ್ಟ ಅಜೆಂಡಾವನ್ನು ಅದಿನ್ನೂ ಬಿಟ್ಟುಕೊಟ್ಟಿಲ್ಲ, ಬದಲಾಗಿ ಅದನ್ನು ಜಾರಿಗೆ ತರಲು ಸಾಧ್ಯವಾದುದನ್ನೆಲ್ಲಾ ಮಾಡುತ್ತಿವೆ ಎಂಬುದನ್ನು ಮತ್ತೆ-ಮತ್ತೆ ಪ್ರದರ್ಶಿಸಿದೆ. ಗುಜರಾತ್ ಸರ್ಕಾರದ ಕ್ರಮ ಇದಕ್ಕೆ ಇತ್ತೀಚಿನ ಉದಾಹರಣೆ. ಆರ್.ಎಸ್. ಎಸ್. ಚಟುವಟಿಕೆಗಳಲ್ಲಿ ರಾಜ್ಯ ಸರ್ಕಾರಿ ನೌಕರರು ಭಾಗವಹಿಸಲು ಇರುವ ನಿಷೇಧವನ್ನು ತೆಗೆಯುವ ಪ್ರಕಟಣೆಯನ್ನು ಗುಜರಾತ್ ಸರ್ಕಾರ ಜಾರಿ ಮಾಡಿದೆ. ಇದನ್ನು ರಾಜ್ಯದಲ್ಲಿ ಆಡಳಿತದೊಳಗೆ ನುಗ್ಗಿ ಇಡೀ ಆಡಳಿತವನ್ನು ಕೋಮುಗ್ರಸ್ತ ಗೊಳಿಸುವ ಒಂದು ಪ್ರಯತ್ನವಲ್ಲದೆ ಇನ್ನೇನೆಂದು ಹೇಳಲು ಸಾಧ್ಯ?

ಕೇಂದ್ರ ಸರ್ಕಾರ ಈ ಬಗ್ಗೆ ಗುಜರಾತ್ ಸರ್ಕಾರಕ್ಕೆ ಛೀಮಾರಿ ಹಾಕಿಲ್ಲ ಎಂಬುದನ್ನು ಗಮನಿಸಬೇಕು. ಬದಲಾಗಿ ಆರ್.ಎಸ್. ಎಸ್. ಚಟುವಟಿಕೆಗಳಲ್ಲಿ ನೌಕರರ ಭಾಗವಹಿಸುವಿಕೆಗೆ ಕೇಂದ್ರದ ನಿಷೇಧ ಮುಂದುವರಿಯುತ್ತದೆ ಎಂದು ಹೇಳಿ ಪರೋಕ್ಷವಾಗಿ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರದ ಕ್ರಮವನ್ನು ಅನುಮೋದಿಸಿದಂತಾಗಿದೆ.

ಇನ್ನೊಂದೆಡೆ ...

ಮುಕ್ತಾಯಗೊಂಡ ಉತ್ತರ ಪ್ರದೇಶ ರಾಜ್ಯ ವಿಧಾನಸಭೆಯ ಅಧಿವೇಶನದಲ್ಲಿ ಪ್ರತಿಪಕ್ಷಗಳ ಪ್ರತಿಭಟನೆಗಳನ್ನು ಲೆಕ್ಕಿಸದೆ ಅಲ್ಲಿಯ ಬಿಜೆಪಿ ನೇತೃತ್ವದ ಸರಕಾರ ಇನ್ನು ಮುಂದೆ ರಾಜ್ಯ ಸರಕಾರದ ಅನುಮತಿ ಪಡೆಯದೆ ಯಾವುದೇ ಆರಾಧನಾ ಸ್ಥಳ ಕಟ್ಟುವಂತಿಲ್ಲ ಎಂಬ ಕಾನೂನುಮಾಡಿದೆ. ಈ ಪ್ರಯತ್ನ ಅಲ್ಪಸಂಖ್ಯಾತರ ವಿರುದ್ಧ ಎಂಬುದು ಸುಸ್ಪಷ್ಟ. ಇದು ಸಂವಿಧಾನ ನೀಡಿದ ಧಾರ್ಮಿಕ ಸ್ವಾತಂತ್ರ್ಯದ ಹಕ್ಕಿಗೆ ವಿರುದ್ಧವಾದುದು ಮಾತ್ರವಲ್ಲ, "ಇತ್ತೀಚೆಗೆ ಅಲ್ಲಿಯ ಮುಖ್ಯಮಂತ್ರಿಗಳು ಆರ್.ಎಸ್. ಎಸ್. ಕಾರ್ಯಕರ್ತರು ರಾಜ್ಯ ಸರ್ಕಾರಿ ಅಧಿಕಾರಿಗಳು ಏನು ಮಾಡಬೇಕೆಂದು ಬಯಸುತ್ತಾರೋ ಅದನ್ನು ಗಮನದಲ್ಲಿಟ್ಟು ಕೊಳ್ಳಬೇಕು

ಹೊಸ ಧಣಿಗಳು ಮಾತನಾಡುತ್ತಿದ್ದಾರೆ! ಕೇಳಿ!!

ಇದು 'ಇಂಡಿಯನ್ ಎಕ್ಸ್‌ಪ್ರೆಸ್' 'ಕನ್ನಡ ಪ್ರಭ' ಪತ್ರಿಕೆಗಳು ತಮ್ಮ ಓದುಗರಿಗೆ ಮುಖಪುಟದಲ್ಲಿ ನೀಡಿದ ಆಜ್ಞೆ. ಅನೇಕ ಕಾರಣಗಳಿಗಾಗಿ ಇಂದು ಬಹುವಾಗಿ ಸುದ್ದಿಯಲ್ಲಿರುವ ಇನ್‌ಫೋಸಿಸ್ ಎಂಬ ಕಂಪನಿಯ ಮಾಲೀಕ ನಾರಾಯಣಮೂರ್ತಿ ಎಂಬುವರ ಭಾಷಣವೊಂದನ್ನು ಪ್ರಕಟಿಸುತ್ತಾ ಈ ಪತ್ರಿಕೆಗಳು ಈ ಆಜ್ಞೆಯನ್ನು ಜನರಿಗೆ ನೀಡಿವೆ.

ಇಂದು ಎಲ್ಲೆಲ್ಲಿ ನೋಡಿದರೂ ಈಗ ಕೈಗಾರಿಕಾ ಧಣಿಗಳ ಹಾರಾಟ ಆರ್ಭಟಗಳು. ಕೇಂದ್ರ ಸರ್ಕಾರಕ್ಕೆ ದೇಶದ ವಿವಿಧ ಭಾಗಗಳಿಂದ ಬಂದ ಸಂಸತ್ ಸದಸ್ಯರು ಮಂತ್ರಿಗಳು, ಯೋಜನಾ ಆಯೋಗ, ದೊಡ್ಡ ಅಧಿಕಾರಶಾಹಿ ಸಮೂಹ, ಅರ್ಥಶಾಸ್ತ್ರಜ್ಞರು, ಸಮಾಜ ಶಾಸ್ತ್ರಜ್ಞರು ಎಲ್ಲಾ ಲಭ್ಯವಿದ್ದರೂ ಈಗ ದೇಶದ ಶಿಕ್ಷಣ ನೀತಿ, ಆರೋಗ್ಯ ನೀತಿ, ಬ್ಯಾಂಕ್ ನೀತಿ, ಸಾರ್ವಜನಿಕ ಉದ್ಯಮಗಳ ನೀತಿ ಯಾವುದನ್ನು ತೀರ್ಮಾನಿಸಬೇಕಾದರೂ ಕೈಗಾರಿಕಾ ಧಣಿಗಳ ಆದೇಶ, ಟಿಪ್ಪಣಿಗಳೇ ಬೇಕು. ದೇಶದಲ್ಲಿ ನೀತಿ, ಧೋರಣೆಗಳ ನಿರೂಪಣೆಗಳಿಗೆ ಹಿಂದಿದ್ದ ಸಂವಿಧಾನ ಬದ್ಧವಾದ ಸಂಸತ್ತಿಗೆ ಅದೀನವಾದ ಸಮಿತಿಗಳು, ಸಂಸ್ಥೆಗಳಿಗೆ ಬದಲಾಗಿ ಇಂದು ಕೈಗಾರಿಕಾ ಮಾಲೀಕರು ರಾರಾಜಿಸುತ್ತಿದ್ದಾರೆ. ಅವರು ಹೇಳಿದ್ದೇ ವೇದವಾಕ್ಯವಾಗಿದೆ ವಾಜಪೇಯಿ ಸರಕಾರಕ್ಕೆ.

ಕರ್ನಾಟಕ ರಾಜ್ಯ ಸರ್ಕಾರವೂ ಅದರಲ್ಲಿಯೂ ಹೈಟೆಕ್ ಮುಖ್ಯಮಂತ್ರಿ ಎಂ.ಎಸ್.ಕೃಷ್ಣ ಅಧಿಕಾರಕ್ಕೆ ಬಂದ ಮೇಲೆ ಅದೇ ದಾರಿಯನ್ನು ಹಿಡಿದಿದೆ. ರಾಜ್ಯದ ಹಳ್ಳಿಗಾಡಿನ ಜೀವನದ ಒಂಚಿತ್ತೂ ಅನುಭವವಿಲ್ಲದ, ಸಾವಿರಾರು ಜನ ಕೆಲಸಗಾರರನ್ನು ಹತ್ತಾರು ವರ್ಷಗಳಿಂದ ನಿಭಾಯಿಸಿದ ಒಬ್ಬ ಸಾಮಾನ್ಯ ಕೈಗಾರಿಕೋದ್ಯಮಿಗೆ ಇರುವ ಅನುಭವವೂ ಇಲ್ಲದ ಕೇವಲ ಒಂದೆರಡು ವರ್ಷಗಳಲ್ಲಿ ಪ್ರವರ್ಧಮಾನಕ್ಕೆ ಬಂದ 'ಇನ್‌ಫೋಸಿಸ್' ನಂತಹ ಕಂಪನಿಗಳ ಧಣಿಗಳ ಕೈಗೆ ರಾಜ್ಯ ಸರ್ಕಾರದ ಚುಕ್ಕಾಣಿಯನ್ನೇ ಸಮರ್ಪಿಸುವಂತೆ ಮುಖ್ಯಮಂತ್ರಿಗಳು ಮಾತನಾಡುತ್ತಿದ್ದಾರೆ. 'ಇನ್‌ಫೋಸಿಸ್' ಕಂಪನಿಯ ಅಧ್ಯಕ್ಷ ರಾಜ್ಯ ಸರ್ಕಾರದ ಒಂದು ಸಮಿತಿಗೆ ಅಧ್ಯಕ್ಷರಾದರೆ ಮತ್ತೊಂದು ಸಮಿತಿಗೆ ಅದರ ಮ್ಯಾನೇಜಿಂಗ್ ಡೈರೆಕ್ಟರ್ ಅಧ್ಯಕ್ಷ. ಈ ಕಂಪನಿಗೆ ಇಷ್ಟು ಪ್ರಾಮುಖ್ಯತೆ ನೀಡಲು ಕಾರಣವೇನು? ಒಂದೇ ಕಾರಣ. ಇದ್ದಕ್ಕಿದ್ದಂತೆ ಈ ಕಂಪನಿ ಹಾಗೂ ಅದರ ಯಜಮಾನರು ಧಿಡೀರ್ ಶ್ರೀಮಂತರಾಗಿದ್ದಾರೆ. ಅಮೆರಿಕನ್ ಶೇರು ಮಾರುಕಟ್ಟೆಗೂ ಪ್ರವೇಶ ಮಾಡಿದ್ದಾರೆ ಎಂಬುದಷ್ಟೇ. ಹೇಗೆ ಈ ಹಣ ಸಂಪಾದನೆ ಮಾಡಿದರು ಅದರಿಂದ ರಾಜ್ಯಕ್ಕೆ ಆದ ಲಾಭವೇನು? ಇದು ಅವರಿಗೆ ಸಮಾಜದ ಯಾವ ರಂಗದಲ್ಲಿ ಏನು ಮತ್ತು ಎಷ್ಟು ಅನುಭವ ತಂದುಕೊಟ್ಟಿದೆ ಎನ್ನುವುದು ಪ್ರತ್ಯೇಕ ಪ್ರಶ್ನೆ. ಆದರೆ ಒಬ್ಬ ಪ್ರಸಿದ್ಧ ಕ್ಯಾನ್ಸರ್ ಅಥವಾ ಹೃದ್ರೋಗದ ವೈದ್ಯ ಎಂದ ಮಾತ್ರಕ್ಕೆ ಅವರನ್ನು ಯಾರಾದರೂ ರಸ್ತೆ ಹೇಗೆ ಮಾಡುವುದು, ಸೇತುವೆ ಹೇಗೆ ಕಟ್ಟುವುದು ಯಾವ ಬೆಳೆ ಬೆಳೆಯಬೇಕು ಎಂಬುದನ್ನೆಲ್ಲಾ ಕೇಳುತ್ತಾರೆಯೇ? ಹೋಗಲಿ ಅದೇ ವೈದ್ಯರ ಹತ್ತಿರದ ಮಿತ್ರರೂ ಕೂಡ ಅವರ ಮನೆಗಳನ್ನು ಕಟ್ಟುವ ನೀಲನಕಾಶೆ, ಅಂದಾಜುಗಳನ್ನು ತಯಾರಿಸುವ ಕೆಲಸ ವಹಿಸುತ್ತಾರೆಯೇ?

ಕೇಂದ್ರ, ಸರ್ಕಾರ ರಾಜ್ಯ ಸರ್ಕಾರಗಳು

ಕೈಗಾರಿಕಾ ಧಣಿಗಳಿಗೆ ವ್ಯಾಪಾಕ ಪ್ರಚಾರ ನೀಡಿ ಅವರನ್ನು ಹೀರೋಗಳನ್ನಾಗಿ ಬಿಂಬಿಸಲಾಗುತ್ತಿದೆ.

ಹೀಗೆ ಒಂದು ಕಡೆ ಸರ್ಕಾರಗಳು ಕೋಟ್ಯಾಧಿಪತಿಗಳನ್ನು ತಲೆಯ ಮೇಲೆ ಹೊತ್ತು ಮೆರೆಸಲಾರಂಭಿಸಿರುವುದು ಮತ್ತೊಂದು ಕಡೆ ಪತ್ರಿಕೆಗಳ ಹೊಗಳಿಕೆ ಎರಡೂ ತಲೆಗೇರಿ ಭಾರತದ ಎಲ್ಲಾ ಸಮಸ್ಯೆಗಳಿಗೂ ಚಿಕಿತ್ಸೆ ನೀಡಬಲ್ಲ ಸರ್ವಜ್ಞರಂತೆ ಮಾತನಾಡ ಲಾರಂಭಿಸಿದ್ದಾರೆ.

ಹಣದ ಧೈಲಿಯ ಈ ಧಣಿಗಳು ತಮ್ಮ ಖಾಸಗೀ ಕ್ಲಬ್ಬುಗಳಲ್ಲಿ ಹರಟೆ ಹೊಡೆಯುತ್ತಾ ಇಂತಹ ಮಾತುಗಳನ್ನು ಉದುರಿಸಿದ್ದರೆ ಅದು ಅವರ ಅಭಿಪ್ರಾಯವೆಂದು ಅಲಕ್ಷಿಸಬಹುದಿತ್ತು. ಆದರೆ ಜನರು ಆರಿಸಿದ ಸರ್ಕಾರದ ವಿವಿಧ ಸಮಿತಿಗಳ ಅಧ್ಯಕ್ಷರ್ಯುಗಳಾದವರ ಅಭಿಪ್ರಾಯಗಳೇನು? ಅವರು ಏನು ಮಾತನಾಡುತ್ತಾರೆನ್ನುವುದು ಸಾರ್ವಜನಿಕ ಜೀವನಕ್ಕೆ ಮುಖ್ಯವಾಗುತ್ತದೆ. ಅದರಲ್ಲಿಯೂ ದೇಶಾದ್ಯಂತ ಹಲವು ಪಟ್ಟಣಗಳಿಂದ ಮುದ್ರಣವಾಗುತ್ತಿರುವ ಪತ್ರಿಕೆಗಳ ಮಾಲೆಯೊಂದರಿಂದ 'ಇನ್‌ಫೋಸಿಸ್' ಧಣಿಗೆ ಹಲವು ಹೊಸ ಯೋಚನೆಗಳಿವೆ ಕೇಳಿ ಎಂಬ ಆಜ್ಞಾ ರೂಪದಲ್ಲಿ ಬಂದಾಗ ಯೋಚನೆಗಳ ಹೂರಣವೇನು ಎದು ವಿಶ್ಲೇಷಿಸುವುದು ಮುಖ್ಯವಾಗುತ್ತದೆ.

ಇನ್‌ಫೋಸಿಸ್ ಈ ಧಣಿ ಹೇಳುತ್ತಾನೆ "ನಾವು ಎರಡು ಭಾರತದಲ್ಲಿದ್ದೇವೆ. ಒಂದು, ನಗರದ ಕೈಗಾರೀಕರಣಗೊಂಡ ಇಂಡಿಯ ಮತ್ತೊಂದು ಗ್ರಾಮೀಣ ನಿಸ್ಸಾಹಯಕ ಇಂಡಿಯ'. ಈ ಮಾತುಗಳನ್ನೊಪ್ಪುವುದೇ ಕಷ್ಟ. ನಗರಗಳಲ್ಲಿರುವವರೆಲ್ಲಾ ಕೈಗಾರಿಕೋದ್ಯಮಿಗಳಲ್ಲ ಸುಖವಾಗಿ ಜೀವಿಸುವವರಲ್ಲ. ಹಳ್ಳಿಗಳಿಂದ ಬಂದು ನೂರಾರು ಸ್ಲಂಗಳಲ್ಲಿರುವವರಷ್ಟೇ ಕೆಲವೊಮ್ಮೆ ಅದಕ್ಕೂ ಹೆಚ್ಚಿನ ಬಡವರು ಮತ್ತು ಹಳ್ಳಿಗಳಲ್ಲಿಯೂ ಇಂದು ಮಾರುತಿ, ಟೊಯೊಟಾ, ಹಿರೋಹೊಂಡಾ, ಸುಜುಕಿಗಳ ಒಡೆಯರು ಫ್ರಿಜ್, ಹವಾನಿಯಂತ್ರಣದ ಭೋಗಗಳನ್ನು ಅನುಭವಿಸುತ್ತಿರುವ ಸಾಕಷ್ಟು ಜನರಿದ್ದಾರೆ. ಅವರು ಗ್ರಾಮೀಣ ಪ್ರದೇಶದ ಸಾಮಾನ್ಯ ಜನರನ್ನು ನಿಸ್ಸಾಯಕರನ್ನಾಗಿ ಮಾಡುವ ಧಣಿಗಳಾಗಿದ್ದಾರೆ. ಆದ್ದರಿಂದ ಇದು ಭಾರತದ ಬಗೆಗಿನ ಆಳವಾದ ತಿಳುವಳಿಕೆಯ ಮಾತಲ್ಲ. ಮೇಲು ಮೇಲಿನ ಸಿಪ್ಪೆಯ ಹೊರಗಿನ ಮಾತು ಎಂಬುದು ಇದರಿಂದಲೇ ಸ್ಪಷ್ಟವಾಗುತ್ತದೆ. ಆದರೆ ಇದರಲ್ಲಿಯೂ ಅಂಶಿಕ ಸತ್ಯವಿದೆ ಎಂದು ಭಾವಿಸಿದರೂ - ಅಂದರೆ ಭಾರತದ ಬಡಜನರ ಅತ್ಯಂತ ದೊಡ್ಡ ಸಂಖ್ಯೆ ಗ್ರಾಮೀಣ ಭಾರತದಲ್ಲಿಯೇ ಇದ್ದಾರೆ ಎಂದು ಅರ್ಥೈಸಿಕೊಂಡರೂ-ಅದಕ್ಕೆ ಈ ವಿಜ್ಞಾನಿ ಒದಗಿಸುವ ಪರಿಹಾರವೇನು?

ಈ ಗ್ರಾಮಾಂತರ ಭಾರತಕ್ಕೆ ಬೇಕಾದ

ಜಿ.ಎನ್.ನಾಗರಾಜ್


... in the State were provided with housing facilities. UNI

... asked for modern equipment to counter Pakistan's shelling in Kargil.

... sources said, but ... ved for almost 45 minutes. The report runs in to 17 volumes and is about 2,300 pages in all.
▶ Picture, P 9

Infosys Boss has some ideas. Listen

Jan 7: How can we create ... Valleys in India? ... government monopol... the private sector a ... hand in education and pop...

Murthy in a passionate speech at the "Genesis Global convention" at the 87th Indian Science Congress here on Thursday. "Let our politicians and bureaucrats realise," said Murthy, "that we live in two Indias: an urban, industrialised India, and a rural, hapless India."

And what was desperately needed, he said, was a reversal of the "country's greatest tragedy, that impedes the progress of the urban entrepreneurs who can create wealth without realising ... cannot be ...

'Acknowledge that there are two Indias and that poverty cannot be solved unless the competent are helped to create wealth faster'.

... rapid growth of English instruction; don't feel shy of learning from other countries; for needy, deserving students, set up an EDFC, the Educational Development Finance Corporation ... among the ideas ... Technolog... Narayan...

are encouraged to create wealth faster and faster."

Murthy unfolded precise targets for 2008 and ways to get there but also admitted that he was ...

country today, less than ... telephone lines per 1,000 people, less than half a million internet connections, less than half a million PC sales every year, Murthy said only population control, literacy campaigns, and bureaucratic, economic reforms, could change these figures drastically. Only then, he said, could "information technology permeate every sphere of life and create Singapores in cities like P... and Bangalore."

He suggested that for ... happen, the government ... to get out of many ... government has ... hands already, ... for it in ...

ಬೆಳೆಯುವಂತೆ ಮಾಡುವುದಲ್ಲ. ಅದಕ್ಕೆ ಬದಲಾಗಿ ನಾರಾಯಣ ಮೂರ್ತಿಯವರು ಒದಗಿಸುವ ಪರಿಹಾರವಿದು - ನಗರ ಪ್ರದೇಶದಲ್ಲಿರುವ ಉದ್ಯಮಿಗಳಿಗೆ ಯಾವುದೇ ತಡೆ ಹಾಕದೆ ಸಂಪತ್ತನ್ನು ಗಳಿಸಲು 'ಸಮರ್ಥ' ಜನರಿಗೆ ವೇಗವಾಗಿ ಮತ್ತಷ್ಟು ವೇಗವಾಗಿ ಸಂಪತ್ತನ್ನು ಗಳಿಸಲು ಅವಕಾಶ ನೀಡಬೇಕು.

ಆಗಮಾತ್ರ ಬಡತನ ಹರಿಯುತ್ತದೆ. ಬಡತನ ಹರಿಯುತ್ತದೆ ಎಂಬುದೇನೋ ನಿಜ ಆದರೆ ಯಾರದ್ದು ಎಂಬುದಷ್ಟೇ ಪ್ರಶ್ನೆ. ಈ ಶ್ರೀಮಂತ ಧಣಿಗಳ 'ಬಡತನ' ಹರಿಯುತ್ತದೆ. ಅವರು ಮತ್ತಷ್ಟು ಇನ್ನಷ್ಟು ಶ್ರೀಮಂತರಾಗುತ್ತಾರೆ. ಇದೇ ತಾನೇ ಸ್ವತಂತ್ರ ಭಾರತದಲ್ಲಿ ಇಲ್ಲಿಯವರೆಗೂ ಆಗಿರುವುದು ಅದರಿಂದ ತಾನೇ ಅವರೇ ಹೇಳಿದ ಎರಡು ಭಾರತಗಳ ಸೃಷ್ಟಿಯಾಗಿರುವುದು?

ಈ ಅಭಿಪ್ರಾಯದಿಂದ ಇನ್ನೊಂದು ಪ್ರಶ್ನೆಯೂ ಏಳುತ್ತದೆ 'ಸಮರ್ಥ'ರೆಂದರೆ ಯಾರು ಎಂದು? ಭಾರತ ಸ್ವಾತಂತ್ರ್ಯವಾದ ನಂತರ ಇದ್ದಬದ್ದ ಅವಕಾಶಗಳನ್ನೆಲ್ಲಾ ದಕ್ಕಿಸಿಕೊಂಡು ಅಗ್ಗವಾದ ಹಾಗೂ ಉತ್ತಮ ಶಿಕ್ಷಣ ಪಡೆದು ಅದನ್ನು ಭಾರತದ ಜನರ ಸೇವೆಗೆ ಬಳಸದೆ ನಾರಾಯಣಮೂರ್ತಿಯವರಂತೆ ವಿದೇಶಿ ಕಂಪನಿಗಳ ಸೇವೆಗೆ (ಸಾಫ್ಟ್‌ವೇರ್ ಉದ್ಯಮ - ಮಾಹಿತಿ ತಂತ್ರಜ್ಞಾನ ಇಂದಿನ ನಿಜ ಸ್ವರೂಪದ ಬಗ್ಗೆ ಐಕ್ಯರಂಗ 46 ರ ಸಂಚಿಕೆಯುಲ್ಲಿ ಬಂದ ಶರತ್‌ಚಂದ್ರರ ಲೇಖನವನ್ನು ನೋಡಿ) ಅಡವಿಟ್ಟು ಅಥವಾ ವಿದೇಶಕ್ಕೆ ಪಲಾಯನ ಮಾಡಿ ದುಡ್ಡು ದೋಚುವವರೂ ಮಾತ್ರವೇ ಈ ಸಮರ್ಥರ ಪಟ್ಟಿಯಲ್ಲಿ ಬರುತ್ತಾರೆಯೇ? ಹೇಗೋ ಮಾಡಿ ರೊಕ್ಕ ಗಳಿಸಿದವರು ಮಾತ್ರವೇ ಅಥವಾ ಸರ್ಕಾರ, ಬ್ಯಾಂಕ್‌ಗಳು ಮುಂತಾದವುಗಳ ಮೇಲೆ ಇರುವ ಹಿಡಿತದಿಂದ ಸಾಲ ಸೌಲಭ್ಯಗಳನ್ನು ಕಂಟ್ರಾಕ್ಟ್‌ಗಳನ್ನು ದಕ್ಕಿಸಿಕೊಂಡವರೇ? ನಗರ, ಗ್ರಾಮಗಳಲ್ಲಿರುವ ಅಸಂಖ್ಯ ಬಡಜನರಿಗೆ ಸರಿಯಾದ ವಿದ್ಯಾಭ್ಯಾಸ ಹಾಗೂ ಅದರ ವಿನಿಯೋಗಕ್ಕೆ ಬೇಕಾದ ಉದ್ಯೋಗ ಅಥವಾ ಇತರ ಅನುಕೂಲಗಳು ಲಭ್ಯವಾದರೆ ಏನು ಸಾಧಿಸಬಹುದೆಂದು ಅದೆಷ್ಟು ಬಾರಿ ಸಾಧಿಸಲಾಗಿಲ್ಲ?

ಮತ್ತೆ ಈ ಹೊಸ ಧಣಿ ಸಮರ್ಥರಿಗೆ ಅಡ್ಡಿಯುಂಟು ಮಾಡದೆ ಇರುವುದೆಂದರೆ ಏನೆಂಬುದನ್ನು ಅವರು ಹೇಳುತ್ತಾರೆ. ಸರ್ಕಾರಿ ವಲಯದ ಗುತ್ತೇದಾರಿಯನ್ನು ತೊಡೆದುಹಾಕಿ,

ಉದ್ದಿಮೆಯಲ್ಲಿ ಖಾಸಗಿ ಬಂಡವಾಳ ಸ್ವೇಚ್ಛೆಯಾಗಿ ಹರಿದಾಡಲು ಅವಕಾಶ ನೀಡಿ - ಸರ್ಕಾರ ಎಲ್ಲದರಿಂದ ಹಿಂದೆಗೆಯಲಿ.

ಎಂದರೆ ಸರ್ಕಾರದ ಸಾರ್ವಜನಿಕ ಸೇವೆಯೇ ದೊಡ್ಡ ಅಡ್ಡಿ ಸರ್ಕಾರಿ ಕಾಲೇಜುಗಳು, ಆಸ್ಪತ್ರೆಗಳಿರುವವರೆಗೂ ಖಾಸಗೀಯವರು ಜನರಿಂದ ಕೊಳ್ಳೆ ಹೊಡೆಯುವ ಸಾಮರ್ಥ್ಯ ಪ್ರದರ್ಶಿಸುವುದಕ್ಕೆ ದೊಡ್ಡ ಅಡ್ಡಿ. ಬ್ಯಾಂಕುಗಳು ಸರ್ಕಾರಿ ನಿಯಂತ್ರಣದಲ್ಲಿದ್ದರಂತೂ ಇನ್ನೂ ದೊಡ್ಡ ಅಡ್ಡಿ. ಲಕ್ಷ ಕೋಟಿ ಗಟ್ಟಲೇ ಸಾರ್ವಜನಿಕರ ಹಣವನ್ನು ನುಂಗಿ ನೀರು ಕುಡಿದು ಗುಮ್ಮನಗುಸುಕರಂತೆ ತೆಪ್ಪಗಿದ್ದು, ಬಿಡುವುದಕ್ಕಾಗುವುದಿಲ್ಲ. ಹೀಗೆ ಶಾಲೆ, ಆಸ್ಪತ್ರೆ, ಬ್ಯಾಂಕ್‌ಗಳು ಪೂರ್ಣ ಖಾಸಗೀ ನಿಯಂತ್ರಣಕ್ಕೆ ಒಳಗಾದರೆ ಗ್ರಾಮೀಣ ಭಾರತದ ಅಭಿವೃದ್ಧಿ ಹೇಗೆ ಸಾಧ್ಯ? ಬಡತನದ ನಿರ್ಮೂಲನೆ ಹೇಗೆ ಸಾಧ್ಯ ಎಂಬುದನ್ನು ನಾರಾಯಣಮೂರ್ತಿಯವರಾಗಲೀ ಅವರ ಹೊಗಳು ಭಟ್ಟರಲ್ಲಿ ಯಾರಾದರಾಗಲೀ ವಿವರಿಸಬಲ್ಲರೇ?

ಮತ್ತೊಂದು ಮುತ್ತಿನಂತ ಮಾತನ್ನು ಉದುರಿಸಿದ್ದಾರೆ. ಇನ್‌ಫೋಸಿಸ್ ಧಣಿಗಳು - ರಾಜ್ಯ ಸರ್ಕಾರ ಯಾವುದೇ ಅಡ್ಡಿಯನ್ನುಂಟು ಮಾಡದೆ ಇಂಗ್ಲೀಷ್ ಮಾಧ್ಯಮ ಶಾಲೆಗಳ ವೇಗವಾದ ಬೆಳವಣಿಗೆಗೆ ಅವಕಾಶ ಮಾಡಿಕೊಡಬೇಕು. "ಇಂಗ್ಲೀಷ್ ಶಿಕ್ಷಣ ಮಾಧ್ಯಮವಿಲ್ಲದಿದ್ದರೆ ಸಿಲಿಕಾನ್ ವ್ಯಾಲಿಗಳೂ ಇರುವುದಿಲ್ಲ" ಎನ್ನುತಾರೆ ಅವರು. (ಸಿಲಿಕಾನ್‌ವ್ಯಾಲಿ ಎಂದರೆ ಎಲೆಕ್ಟ್ರಾನಿಕ್ ಉದ್ಯಮ ಕೇಂದ್ರೀಕೃತವಾದ ಪ್ರದೇಶ ಎಂದ) ಮೊದಲೇ ಶೇ 40-50 ರಷ್ಟು ನಿರಕ್ಷರಿಗಳಿರುವ ಈ ನಾಡಿನಲ್ಲಿ ಇಂಗ್ಲೀಷ್ ಮಾಧ್ಯಮದ ವೇಗವಾದ ಬೆಳವಣಿಗೆ ಎಂದರೆ ಏನರ್ಥ. ಆಗ ಸಾಕ್ಷರತೆಯಲ್ಲಿ ಎಷ್ಟು ರೀತಿಯ ಅಂತರಗಳುಂಟಾಗುತ್ತವೆ ಎಂಬುದನ್ನು ನೋಡೋಣ. ಯಾವ ಭಾಷೆಯ ಓದು ಬರಹ, ಬಾರದ ಸಂಪೂರ್ಣ ನಿರಕ್ಷರತೆ, ಇಂಗ್ಲೀಷ್ ಬಾರದ ನಿರಕ್ಷರತೆ, ಕಂಪ್ಯೂಟರ್ ಬಾರದ ನಿರಕ್ಷರತೆ ಹೀಗೆ ಹಲವಾರು ಕಂದರಗಳು ನಿರ್ಮಾಣ. ಇದೇ ನಾರಾಯಣ ಮೂರ್ತಿಯವರ ಉಪದೇಶ ಅಥವಾ ಆದೇಶ. ಮತ್ತೊಂದು ಪ್ರಶ್ನೆ ಕಂಪ್ಯೂಟರ್ ಇಂಗ್ಲೀಷ್ ಬಿಟ್ಟು ಬೇರೇ ದೇಶಿ ಭಾಷೆಗಳಲ್ಲಿ ಮಾತನಾಡುವುದಿಲ್ಲವೇ? ಅದನ್ನು ಬೆಳೆಸಿದರೆ ಲಕ್ಷಾಂತರ ಕನ್ನಡಿಗರಿಗೆ ಕಂಪ್ಯೂಟರ್ ಬಳಕೆಯಿಂದ ಪ್ರಯೋಜನವಾಗುವುದಿಲ್ಲ? ಕಂಪ್ಯೂಟರ್ ಮೂಲಕ ವ್ಯಾಪಾರ, ಪತ್ರ ವ್ಯವಹಾರ, ವಿಚಾರ ವಿನಿಮಯ ಬೆಳೆಯಲು ಅವಕಾಶವಾಗುವುದಿಲ್ಲವೇ? ಕೇವಲಇಂಗ್ಲೀಷ್ ಬರಬಹುದಾದ ಕೆಲವೇ ಜನರಿಗೆ ಕಂಪ್ಯೂಟರ್ ಬಳಕೆಯನ್ನು ಸೀಮಿತಗೊಳಿಸಿ ಉಳಿದ ಅಸಂಖ್ಯ ಜನರಿಗೆ ಅದರ ಪ್ರಯೋಜನವನ್ನು ವಂಚಿಸುವುದು ಆ ಮೂಲಕ ಗ್ರಾಮಾಂತರ ಭಾರತ, ನಗರ ಭಾರತಗಳ ಬಡವರನ್ನು ಕೆಲವೇ ಜನ ಸುಲಿಯಲು ಮತ್ತಷ್ಟು ಅವಕಾಶ ಕಲ್ಪಿಸುವುದೇ ನಿಮ್ಮ ಉದ್ದೇಶವಲ್ಲವೇ ಎಂಬ ಪ್ರಶ್ನೆಯನ್ನು ನಾವೆಲ್ಲರೂ ನಾರಾಯಣಮೂರ್ತಿ ಭಟ್ಟಂಗಿ ಬಳಗಕ್ಕೆ ಹಾಕಬೇಕಾಗಿದೆ. ಅವರ ವಿಚಾರಗಳನ್ನು ಕೇಳಲು ನಾವು ನಿರಾಕರಿಸುವುದಿಲ್ಲ. ಆದರೆ ನಮ್ಮ ವಿಚಾರ ಗಳನ್ನು ಕೇಳಲು, ಕೋಟಿಗಟ್ಟಲೆ ಜನಸಾಮಾನ್ಯರ ಪ್ರಶ್ನೆಗಳಿಗೆ ಉತ್ತರನೀಡಲು ಅವರು ಸಿದ್ಧರಿರುವರೇ?

ಕಾಂಗ್ರೆಸ್ ಪಕ್ಷಕ್ಕೆ ವಿರೋಧವಾಗಿ ಸಂಯುಕ್ತ ರಂಗದ ರಚನೆ, ಪರ್ಯಾಯ ಸರ್ಕಾರದ ಪ್ರಸ್ತಾಪ, ಕಮ್ಯುನಿಸ್ಟ್ ಪಕ್ಷದ ಪ್ರತ್ಯೇಕ ಪ್ರಣಾಳಿಕೆ ಹಾಗೂ ಚುನಾವಣಾ ಪ್ರಚಾರದ ಕುರಿತು ಕಳೆದ ಸಂಚಿಕೆಯಲ್ಲಿ ಓದಿದ್ದೀರಿ. ಈ ಸಂಚಿಕೆಯಲ್ಲಿ ಜ್ಯೋತಿ ಬಸು ಮತ್ತಿನ್ನಿತರ ಎಡ ಮುಖಂಡರುಗಳು ಚುನಾವಣೆಯಲ್ಲಿ ಕಾಂಗ್ರೆಸ್‌ನ ವಿರುದ್ಧ ಜಯಗಳಿಸಿದ ವಿವರಗಳನ್ನು ಓದಿ....

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರಾವಾಹಿ: 21

ಕಮ್ಯುನಿಸ್ಟರ ವಿಜಯ ದುಂಧುಬಿ....

24 ಪರಗಣ ಜಿಲ್ಲೆಯ ಬಾರಾನಗರ ವಿಧಾನಸಭೆ ಕ್ಷೇತ್ರದಿಂದ ಸ್ಪರ್ಧಿಸುವಂತೆ ಪಕ್ಷ ನನಗೆ ಸೂಚಿಸಿತು. ಬಾರಾ ನಗರ ನನಗೆ ಹೊಸ ಪ್ರದೇಶವಾಗಿತ್ತು. ಅಲ್ಲಿ ಪಕ್ಷದ ಸಂಘಟನೆ ದುರ್ಬಲವಾಗಿತ್ತು. ಹಾಗೂ ಅಲ್ಲಿನ ನಿವಾಸಿಗಳು ತುಂಬ ಸಂಪ್ರದಾಯವಾದಿಗಳಾಗಿದ್ದರು.

ಆದರೆ ಚುನಾವಣೆ ಪ್ರಚಾರದ ವೇಳೆ ಸ್ಥಳೀಯ ಜನರು ಸ್ವಯಂಸ್ಫೂರ್ತಿಯಿಂದ ಬಂದು ಸಭೆಗಳಲ್ಲಿ ಭಾಗವಹಿಸಿದರು. ಚಿಕ್ಕ ಹಾಗೂ ದೊಡ್ಡ ಸಭೆ, ರ‍್ಯಾಲಿಗಳು ನಡೆದವು. ಒಟ್ಟಾರೆ ಹೇಳುವುದಾದರೆ ಪ್ರತಿಕ್ರಿಯೆ ಅದ್ಭುತವಾಗಿತ್ತು.

1952 ಜನವರಿ 18 ರಂದು ಬಾರಾ ನಗರದಲ್ಲಿ ಮತದಾನ ನಡೆಯಿತು. ನನಗೆ 13, 968 ಮತಗಳು ಸಿಕ್ಕವು. ಕಾಂಗ್ರೆಸ್ ಪಕ್ಷದ ಹರೇಂದ್ರ ನಾಥ್ ಚೌಧರಿ 8,539 ಮತ ಪಡೆದರು. ಆರ್.ಎಸ್.ಪಿ., ಕೆಎಂಪಿಪಿ, ಸಮಾಜವಾದಿ ಪಕ್ಷ ಮತ್ತು ಇಬ್ಬರು ಪಕ್ಷೇತರ ಅಭ್ಯರ್ಥಿಗಳು ಠೇವಣಿ ಕಳೆದುಕೊಂಡರು. ಚುನಾವಣೆಯಲ್ಲಿ ಸೋತ ಹರೇಂದ್ರನಾಥ ಚೌಧರಿ ಡಾ. ರಾಯ್ ಸಂಪುಟದಲ್ಲಿ ಸಚಿವರಾಗಿದ್ದರು.

ಮಣ್ಣು ಮುಕ್ಕಿದ ಮಂತ್ರಿಗಳು

ಚುನಾವಣೆಯಲ್ಲಿ ಕಾಂಗ್ರೆಸ್ ಸರಕಾರದ ಏಳು ಸಚಿವರು ಸೋತರು. ಲೇಬರ್ ಪಕ್ಷದ ಮಾಜಿ ನಾಯಕ, ಆ ನಂತರ ಕಾಂಗ್ರೆಸ್ ಮಂತ್ರಿಯಾದ ನಿಹರೇಂದು ದತ್ತ ಮಜುಂದಾರ್ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿ ಸುಧೀರ್ ಚಂದ್ರ ಭಂಡಾರಿ ಇವರ ಕೈಯಲ್ಲಿ ಸೋಲುಂಡರು. ಇನ್ನೊಬ್ಬ ಮಂತ್ರಿ ವಿಮಲ್ ಚಂದ್ರ ಸಿನ್ಹ ನಮ್ಮ ಅಭ್ಯರ್ಥಿ ಪ್ರಭಾತ್ ರಾಯ್ ಎದುರು ಸೋತರು. ನನ್ನೆದುರು ಸೋತ ಚೌಧರಿ ಕೂಡ ಮಂತ್ರಿಯೇ.

ನಮ್ಮ ಪಕ್ಷದ ಬಂಕಿಮ್ ಮುಖರ್ಜಿ ಕಾರ್ಮಿಕ ಸಚಿವ ಕಾಳಿಪಾದ ಮುಖರ್ಜಿಯವರನ್ನು 7000 ಕ್ಕೂ ಹೆಚ್ಚು ಮತಗಳ ಅಂತರದಿಂದ ಸೋಲಿಸಿದರು. ಹೂಗ್ಲಿ ಜಿಲ್ಲೆಯ ಗೋಘಾಟ್ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿ ರಾಧಾಕೃಷ್ಣ ಪಾಲ್ ಆಹಾರ ಮಂತ್ರಿ ಪ್ರಫುಲ್ಲ ಚಂದ್ರ ಸೇನ್‌ರನ್ನು 21,000 ಮತಗಳಿಂದ ಪರಾಭವ ಗೊಳಿಸಿದರು. ಕಾಂಗ್ರೆಸ್ ಟಿಕೆಟ್ ಮೇಲೆ ಸ್ಪರ್ಧಿಸಿದ್ದ ಮಹಾರಾಜ ಉದಯ ಚಂದ್ ಮೆಹ್ತಾಬ್ ಕಮ್ಯುನಿಸ್ಟ್ ಅಭ್ಯರ್ಥಿ ವಿನಯ್ ಚೌಧರಿಯವರಿಂದ ಸೋಲುಂಡರು.

ಚೌಬಜಾರ್ ಕ್ಷೇತ್ರದಲ್ಲಿ ಕಾಂಗ್ರೆಸ್ ಹುರಿಯಾಳು ಡಾ. ಬಿ.ಸಿ.ರಾಯ್ ವಿರುದ್ಧ ರಂಗ ಫಾರ್ವರ್ಡ್ ಬ್ಲಾಕ್ (ಮಾರ್ಕ್ಸ್‌ವಾದಿ) ನಾಯಕ ಸತ್ಯಪ್ರಿಯ ಬ್ಯಾನರ್ಜಿ ಅವರನ್ನು ಕಣಕ್ಕಿಳಿಸಿತ್ತು. ಡಾ. ರಾಯ್ 14,910 ಮತವನ್ನು ಹಾಗೂ ಸತ್ಯಪ್ರಿಯ ಬಾಬು 9,799 ಮತಗಳನ್ನು ಪಡೆದರು. ಹೀಗೆ ಡಾ. ರಾಯ್ ಗೆಲುವಿನ ಅಂತರವೇನೂ ಭಾರೀಯಾಗಿರಲಿಲ್ಲ. ಡಾ. ರಾಯ್ ಅವರ ಗೆಲುವಿಗಾಗಿ ಕಾಂಗ್ರೆಸ್ ಪಕ್ಷ ಹಣಬಲ ಮತ್ತು ಅಧಿಕಾರ ಯಂತ್ರವನ್ನು ಬಳಸಿದ್ದೇ ಅಲ್ಲದೆ ಗೂಂಡಾಗಿರಿಗೂ ಇಳಿದಿತ್ತು ಎನ್ನುವುದನ್ನು ನಾವು ಮರೆಯಲಾಗದು.

ಪ್ರಥಮ ಅಸೆಂಬ್ಲಿ ಚುನಾವಣೆಗಳಲ್ಲಿ ಕಮ್ಯುನಿಸ್ಟ್ ಪಕ್ಷ 71 ಕ್ಷೇತ್ರಗಳಲ್ಲಿ ಸ್ಪರ್ಧಿಸಿ 28 ರಲ್ಲಿ ಜಯಶಾಲಿಯಾಯಿತು. ಅದೇ ರೀತಿ ಲೋಕಸಭೆಯ ಒಂಬತ್ತು ಸ್ಥಾನಗಳಲ್ಲಿ ಸ್ಪರ್ಧಿಸಿ ಐದರಲ್ಲಿ ಗೆದ್ದಿತು. ಆ ದಿನಗಳಲ್ಲಿ ಇದ್ದ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡರೆ ಇದು ಮಹತ್ವದ ಯಶಸ್ವಿಯಾಗಿತ್ತು. ವಿಧಾನಸಭೆಯಲ್ಲಿ ನಾವು ಏಕೈಕ ದೊಡ್ಡ ಪ್ರತಿಪಕ್ಷವಾಗಿ ಹೊರಹೊಮ್ಮಿದೆವು.

ಭಯೋತ್ಪಾದನೆ ಮತ್ತು ದಬ್ಬಾಳಿಕೆಯಿಂದ ಕಮ್ಯುನಿಸ್ಟ್ ಪಕ್ಷವನ್ನು ಮುಗಿಸಿಬಿಡಬಹುದು ಎಂದು ಕಾಂಗ್ರೆಸ್ ಪಕ್ಷ ಭಾವಿಸಿತ್ತು. 1948-50 ರ ಅವಧಿಯಲ್ಲಿ ಕಮ್ಯುನಿಸ್ಟ್ ಪಕ್ಷ ಕೆಲವು ಲೋಪಗಳನ್ನು ಎಸಗಿದರೂ ಜನತೆ ನಮ್ಮ ಕೈಬಿಟ್ಟಿಲ್ಲ ಎನ್ನುವುದನ್ನು ಈ ಚುನಾವಣೆಯ ಫಲಿತಾಂಶ ಸ್ಪುಟಪಡಿಸಿತು.

ಪೆರೋಲ್ ಮೇಲೆ ಬಿಡುಗಡೆಯಾಗಿದ್ದ ರಾಜಕೀಯ ಕೈದಿಗಳನ್ನು ಕಾಂಗ್ರೆಸ್ ಸರಕಾರ ಚುನಾವಣೆಯ ಬೆನ್ನಲ್ಲೇ ಮರಳಿ ಜೈಲಿಗೆ ಹಾಕಿತು. ಆದರೆ ಸ್ವಲ್ಪವೇ ಸಮಯದಲ್ಲಿ, ವಿಚಾರಣೆಗಳಿಲ್ಲದೆ ಬಂಧಿಗಳಾಗಿದ್ದವರನ್ನು ಜನರ ಒತ್ತಡದಿಂದಾಗಿ ಸರಕಾರ ಬಿಡುಗಡೆ ಮಾಡಬೇಕಾಯಿತು.

ಕಲ್ಕತ್ತ (ಆಗ್ನೇಯ) ಕ್ಷೇತ್ರದಲ್ಲಿ ಸಾಧನ್ ಗುಪ್ತ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಯಾಗಿದ್ದರು ಡಾ. ಶ್ಯಾಮ್‌ಪ್ರಕಾಶ್ ಮುಖರ್ಜಿ(ಜನಸಂಘ) ಮತ್ತು ಮೃಗಾಂಕ ಮೋಹನ ಸುರ್ (ಕಾಂಗ್ರೆಸ್) ಇತರ ಅಭ್ಯರ್ಥಿಗಳಾಗಿದ್ದರು. ಈ ಕ್ಷೇತ್ರವನ್ನು ಜನಸಂಘ ಗೆದ್ದಿತು. 1953 ರಲ್ಲಿ ಡಾ.ಮುಖರ್ಜಿ ನಿಧನದ ನಂತರ ಈ ಕ್ಷೇತ್ರದಲ್ಲಿ ನಡೆದ ಉಪಚುನಾವಣೆಯಲ್ಲಿ ಸಾಧನ ಗುಪ್ತರನ್ನೇ ನಾವು ಕಣಕ್ಕಿಳಿಸಿದೆವು. ಖ್ಯಾತ ವಕೀಲ ರಾಧಾ ವಿನೋದ್ ಪಾಲ್ ಕಾಂಗ್ರೆಸ್ ಹುರಿಯಾಳು ಆದರು. ನೇರ ಹಣಾಹಣಿಯಲ್ಲಿ ಸಾಧನ್‌ಗುಪ್ತ ಭಾರಿ ಬಹುಮತದಿಂದ ಲೋಕಸಭೆಗೆ ಗೆದ್ದುಬಂದರು.

ಈ ರೀತಿಯಾಗಿ ಪ್ರಥಮ ಲೋಕಸಭೆಯಲ್ಲಿ ಪಶ್ಚಿಮ ಬಂಗಾಳದಿಂದ ಆರು ಕಮ್ಯುನಿಸ್ಟ್ ಸದಸ್ಯರು ಪ್ರತಿನಿಧಿಸಿದರು. ಅವರೆಂದರೆ ಹಿರೇನ್ ಮುಖರ್ಜಿ, ತುಷಾರ್ ಚಟರ್ಜಿ, ಕಮಲ್ ಬೋಸ್, ರೇಣು ಚಕ್ರವರ್ತಿ, ನಿಕುಂಜ ಚೌಧರಿ ಮತ್ತು ಸಾಧನ್ ಗುಪ್ತ. ಡಾ. ಮೇಘನಾಥ ಸಹಾ ಮತ್ತು ಆರ್.ಎಸ್.ಪಿ. ನಾಯಕ ತ್ರಿದಿಬ್ ಚೌಧರಿಗೆ ನಾವು ಸಕ್ರಿಯ ಬೆಂಬ ನೀಡಿದೆವು.

ಗೆಲುವಿನ ಅಂತರ ಹೆಚ್ಚಿತು......

ಈ ಸಂದರ್ಭದಲ್ಲಿ ಒಂದು ಪ್ರಕರಣವನ್ನು ಪ್ರಸ್ತಾಪಿಸಲೇಬೇಕು. ಮಹೆ ಸ್ಥಳ ವಿಧಾನಸಭಾ ಕ್ಷೇತ್ರದಿಂದ ನಮ್ಮ ಅಭ್ಯರ್ಥಿ ಸುಧೀರ್ ಭಂಡಾರಿ ನೂರಾರು ಮತಗಳ ಅಂತರದಿಂದ ಗೆದ್ದಿದ್ದು ಅವರ ಆಯ್ಕೆಯನ್ನು ರದ್ದು ಪಡಿಸಲಾಯಿತು. 1953 ರಲ್ಲಿ ಅಲ್ಲಿ ಉಪಚುನಾವಣೆ ನಡೆಯಿತು. ಈ ಚುನಾವಣೆಯಲ್ಲೂ ಅದೇ ಅಭ್ಯರ್ಥಿಗಳು ಸೆಣೆಸಿದ್ದರು.

ಆದರೆ ಈ ಬಾರಿ ಸುಧೀರ್ ಭಂಡಾರಿ ಹತ್ತು ಸಾವಿರಕ್ಕೂ ಹೆಚ್ಚು ಮತಗಳ ಅಂತರದಿಂದ ನಿಹರೇಂದು ದತ್ತ ಮಜುಂದಾರ್‌ರನ್ನು ಸೋಲಿಸಿದರು.

ರಾಷ್ಟ್ರೀಯ ಪಕ್ಷದ ಮಾನ್ಯತೆ

ಪ್ರಥಮ ಸಾರ್ವತ್ರಿಕ ಚುನಾವಣೆಗಳ ನಂತರ ಕಮ್ಯುನಿಸ್ಟ್ ಪಕ್ಷಕ್ಕೆ ಒಂದು ರಾಷ್ಟ್ರೀಯ ಪಕ್ಷವಾಗಿ ಮಾನ್ಯತೆ ಸಿಕ್ಕಿತು. ಹಾಗೂ ನಮ್ಮ ಪಕ್ಷ ಪ್ರತಿಪಕ್ಷದಲ್ಲಿ ಏಕೈಕ ದೊಡ್ಡ ಗುಂಪಾಗಿ ಹೊರಹೊಮ್ಮಿತು. ಆದರೆ ಪ್ರತಿಪಕ್ಷದ ಯಾವುದೇ ಗುಂಪು ಲೋಕಸಭೆಯ ಒಟ್ಟು ಸದಸ್ಯ ಬಲದ ಶೇಕಡ 10 ರಷ್ಟು ಸ್ಥಾನ ಹೊಂದಿಲ್ಲದ್ದರಿಂದ ಪ್ರತಿಪಕ್ಷದ ಯಾವುದೇ ಗುಂಪಿಗೆ ಪ್ರತಿಪಕ್ಷದ ಮಾನ್ಯತೆ ಸಿಗಲಿಲ್ಲ.

ಕಾಮ್ರೇಡ್ ಎ.ಕೆ.ಗೋಪಾಲನ್ ಕಮ್ಯುನಿಸ್ಟ್ ಸಂಸದೀಯ ಪಕ್ಷದ ನಾಯಕರಾಗಿ ಅವಿರೋಧವಾಗಿ ಆಯ್ಕೆಯಾದರು. ಹಿರೇನ್ ಮುಖರ್ಜಿ ಮತ್ತು ರೇಣು ಚಕ್ರವರ್ತಿ ಉಪನಾಯಕರಾದರು. ಕಮಲ್ ಬೋಸ್ ಮುಖ್ಯ ಸಚೇತಕರಾಗಿ ಆಯ್ಕೆಯಾದರು. ಕಮ್ಯುನಿಸ್ಟ್ ಪಕ್ಷ ಪ್ರಮುಖ ಪ್ರತಿಪಕ್ಷ ಗುಂಪು ಎಂದು ಸ್ಪೀಕರ್ ಮಾನ್ಯತೆ ನೀಡಿದರು. ಕಾಂ. ಎ.ಕೆ.ಜಿ. 1977 ರಲ್ಲಿ ನಿಧನರಾಗುವವರೆಗೂ ಲೋಕಸಭೆಯಲ್ಲಿ ಕಮ್ಯುನಿಸ್ಟ್ ಗುಂಪಿನ ನಾಯಕರಾಗಿ ಉಳಿದರು.

ಪಶ್ಚಿಮ ಬಂಗಾಳ ವಿಧಾನಸಭೆಯಲ್ಲಿ ನಾವು 28 ಸ್ಥಾನಗಳಲ್ಲಿ ಗೆದ್ದಿದ್ದೆವು. ನಮ್ಮ ಬೆಂಬಲದಿಂದ ಇಬ್ಬರು ಪಕ್ಷೇತರರು ಗೆದ್ದಿದ್ದರು. ಕಾಂಗ್ರೆಸ್ ಶಾಸಕರ ಸಂಖ್ಯೆ 162. ಫಾರ್ವರ್ಡ್ ಬ್ಲಾಕ್, ಕೆಎಂಪಿಪಿ, ಹಿಂದೂ ಮಹಸಭಾ, ಜನಸಂಘ ಮತ್ತು ಪಕ್ಷೇತರರು ಹೀಗೆ ಎಲ್ಲರೂ ಸೇರಿ ಪ್ರತಿಪಕ್ಷ ಬಲ 76 ಆಗಿತ್ತು. ಪ್ರತಿಪಕ್ಷದಲ್ಲಿ ನಮ್ಮದೇ ಅತಿದೊಡ್ಡ ಪಕ್ಷವಾಗಿತ್ತು ಮತ್ತು ಸಹಜವಾಗಿಯೇ ಪ್ರಮುಖ ಪ್ರತಿಪಕ್ಷದ ಮಾನ್ಯತೆ ಸಿಗುವ ನಿರೀಕ್ಷೆಯಿತ್ತು.

1952 ರಲ್ಲಿ ಪ್ರಾಂತೀಯ ಸಮಿತಿ ಚುನಾವಣೆ ನಂತರದ ಪರಿಸ್ಥಿತಿಯ ಬಗ್ಗೆ ಚರ್ಚಿಸಿತು. ನಾವು ನಮ್ಮ ಪ್ರಮುಖ ಯಶಸ್ಸುಗಳನ್ನು ಪಟ್ಟಿ ಮಾಡಿದೆವು; ಅದೇ ರೀತಿ ಕೆಲವು ಲೋಪದೋಷಗಳನ್ನು ಗುರುತಿಸಿದೆವು. ಗ್ರಾಮೀಣ ಪ್ರದೇಶಗಳಲ್ಲಿ ನಮ್ಮ ಬಲ ಎಷ್ಟಿರಬೇಕಿತ್ತೋ ಅಷ್ಟು ಪ್ರಭಾವಶಾಲಿ ಆಗಿಲ್ಲ ಎಂಬುದು ಮುಖ್ಯ ದೌರ್ಬಲ್ಯವಾಗಿತ್ತು. ನಾವು ನಗರ ಮತ್ತು ಕೈಗಾರಿಕೆ ವಲಯಗಳಲ್ಲಿ ಯಶಸ್ಸು ಸಾಧಿಸಿದ್ದೆವು. ಈ ದೌರ್ಬಲ್ಯವನ್ನು ನಿವಾರಿಸಲು ಕೆಲವು ನಿರ್ದಿಷ್ಟ ನಿರ್ಧಾರಗಳನ್ನು ಕೈಗೊಂಡೆವು. ನಮ್ಮ ಚಳುವಳಿಗಳಲ್ಲಿ ಹೆಚ್ಚೆಚ್ಚು ಜನರು ಪಾಲ್ಗೊಳ್ಳುವಂತೆ ಮಾಡಬೇಕು ಹಾಗೂ ಚುನಾವಣೆಯ ಯಶಸ್ಸನ್ನು ಕ್ರೋಢೀಕರಿಸಬೇಕು ಎಂಬುದಕ್ಕೆ ಒತ್ತು ನೀಡಿದೆವು....

ಪ್ರಥಮ ಸಾರ್ವತ್ರಿಕ ಚುನಾವಣೆಯ ಮಹತ್ವ ಮತ್ತು ಪ್ರಾಮುಖ್ಯವನ್ನು ನಿರ್ಲಕ್ಷಿಸಲಾಗದು. ನಾವು ನಿರಂತರ ಹೋರಾಟ ಕಾರ್ಯಕ್ರಮಗಳನ್ನು ನಡೆಸಬೇಕಾಗಿತ್ತು. ಕಾಂಗ್ರೆಸ್ ಆದರೋ ಭಾರಿ ಪ್ರಮಾಣದಲ್ಲಿ ಹಣವನ್ನು ವ್ಯಯಿಸಿತು. ಅಧಿಕಾರ ಯಂತ್ರವನ್ನು ಬಳಸಿತು. ಅಷ್ಟೇ ಅಲ್ಲದೆ ಅಪಾರ ಪ್ರಮಾಣದಲ್ಲಿ ರಿಗ್ಗಿಂಗ್ ಕೂಡ ನಡೆಯಿತು. ನಮ್ಮ ಪಕ್ಷ ಕಾನೂನುಬದ್ಧ ಎಂದು ಹೈಕೋರ್ಟ್ ತೀರ್ಪು ನೀಡಿದ್ದರೂ ನಾವು ಇಂಚಿಂಚಿಗೂ ಹೋರಾಟ ಮಾಡಬೇಕಿತ್ತು. ಎಷ್ಟರ ಮಟ್ಟಿಗೆ ಎಂದರೆ ಇನ್ನೂ ನಮ್ಮದು ಕಾನೂನೂಬಾಹಿರ ಪಕ್ಷವೇನೋ ಎಂಬಂತಿತ್ತು. ಆಗಾಗ ಪಕ್ಷದ ನಿಲುವಿನಲ್ಲಿ ಸ್ವಲ್ಪ ಲೋಪದೋಷಗಳಿದ್ದರೂ ಜನರು ನಮ್ಮ ಕೈಬಿಟ್ಟಿಲ್ಲ ಎನ್ನುವುದನ್ನು ಚುನಾವಣೆಗಳು ಮತ್ತೊಮ್ಮೆ ಸಾಬೀತುಪಡಿಸಿದವು. ರಾಜಕೀಯ ಕೈದಿಗಳ ಬಿಡುಗಡೆ ಆರಂಭವಾಯಿತು, ಬಂಧನದ ವಾರಂಟ್‌ಗಳನ್ನು ವಾಪಸ್ ಪಡೆಯಲಾಯಿತು.

ಪಕ್ಷದ ನಾಯಕರೆಲ್ಲರು ಈಗ ಹೊರಗೆ ಬಂದಿದ್ದರಿಂದ ಪಕ್ಷದ ಮಾಮೂಲಿ ಕೆಲಸ ಕಾರ್ಯಗಳು ಆರಂಭವಾದವು. ಪ್ರಾಂತೀಯ ಸಮಿತಿ ಮತ್ತು ಕಾರ್ಯದರ್ಶಿ ಮಂಡಳಿ ನಿಯಮಿತವಾಗಿ ಸಭೆ ಸೇರತೊಡಗಿದವು. ಜಿಲ್ಲಾ ಸಮಿತಿಗಳು ಕೂಡ ಸಕ್ರಿಯವಾದವು.

ಶಾಸಕರ ಸಭೆಯಲ್ಲಿ ನನ್ನನ್ನು ಶಾಸಕ ಪಕ್ಷದ ನಾಯಕನ್ನಾಗಿ ಆಯ್ಕೆ ಮಾಡಲಾಯಿತು. ಮೋನಿಕುಂತಲ ಉಪನಾಯಕರಾದರು. ಹಾಗೂ ಬೀರೇನ್ ಬ್ಯಾನರ್ಜಿ ಮುಖ್ಯ ಸಚೇತಕರಾಗಿ ಆಯ್ಕೆಯಾದರು.

ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಪಕ್ಷದ ಕೆಲಸಗಳಿಗೆ ನೆರವಾಗಲು ತಂಡವೊಂದನ್ನು ರಚಿಸಲಾಯಿತು. ಶಾಸಕರ ಕಾರ್ಯನಿರ್ವಹಣೆ ಮತ್ತು ದಕ್ಷತೆಯನ್ನು ಸುಧಾರಿಸುವುದು ಇದರ ಉದ್ದೇಶವಾಗಿತ್ತು. ದಿನೇಶ್ ರಾಯ್ ರಂಥ ಸಂಗಾತಿಗಳು ತುಂಬಾ ದೀರ್ಘಕಾಲ ಈ ಕೆಲಸದಲ್ಲಿ ಸಕ್ರಿಯವಾಗಿ ಭಾಗವಹಿಸಿದರು.

ಡಾ.ಬಿ.ಸಿ.ರಾಯ್ ನೇತೃತ್ವದ ಹೊಸ ಕಾಂಗ್ರೆಸ್ ಮಂತ್ರಿಮಂಡಲ ಅಧಿಕಾರ ಸ್ವೀಕರಿಸಿತು.

ವಿಧಾನಸಭೆಯಲ್ಲಿ ನಾವು ಅನುಸರಿಸಬೇಕಾದ ತಂತ್ರವನ್ನು ಪಕ್ಷದ ಒಳಗೆ ಚರ್ಚಿಸಲಾಯಿತು. ಕಾಂಗ್ರೆಸ್ ಸರಕಾರ ಮತ್ತು ಅದರ ಜನವಿರೋಧಿ ನೀತಿಗಳ ವಿರುದ್ಧ ರಾಜಿಯಿಲ್ಲದ ಹೋರಾಟ ನಡೆಸಬೇಕು, ಚಳುವಳಿಯೊಂದನ್ನು ರೂಪಿಸಬೇಕು ಎಂದು ನಿರ್ಧರಿಸಿದೆವು. ಅನೇಕ ವಿಷಯಗಳ ಮೇಲೆ ಇತರ ಪಕ್ಷಗಳ ಜತೆ ಒಪ್ಪಂದಕ್ಕೆ ಬರಲು ಕೂಡ ನಾವು ಯತ್ನಿಸಿದೆವು. ಫಲಿತಾಂಶವೂ ಸಿಕ್ಕಿತು. ನಾವು ಪ್ರತಿಪಕ್ಷಗಳನ್ನು ಒಂದೆಡೆ ತಂದೆವು. ಕಾಂಗ್ರೆಸ್ ಸರಕಾರದ ಜನವಿರೋಧಿ ಮಸೂದೆಗಳು ಮತ್ತು ಪ್ರಸ್ತಾವಗಳ ವಿರುದ್ಧ ಒಂದಾಗಿ ಹೋರಾಟ ನಡೆಸಿದೆವು.

ಆಹಾರ ಬಿಕ್ಕಟ್ಟು ಮತ್ತು ರಾಜಕೀಯ ಬಂಧಿಗಳ ಬಿಡುಗಡೆ ಇವುಗಳಿಗೆ ನಾವು ಆದ್ಯತೆ ನೀಡಿದೆವು. 1952 ಜೂನ್ 18 ರಂದು ಅಸೆಂಬ್ಲಿಯ ಪ್ರಥಮ ಅಧಿವೇಶನ ಆರಂಭವಾಯಿತು. ಮರುದಿನ ಸ್ಪೀಕರ್, ಉಪಸ್ಪೀಕರ್ ಆಯ್ಕೆಯ ಪ್ರಕ್ರಿಯೆ ನಡೆಯಿತು. ಪ್ರತಿಪಕ್ಷಕ್ಕೆ ಗೆಲ್ಲುವ ಅವಕಾಶ ಇಲ್ಲ ಎಂದು ಗೊತ್ತಿದ್ದರೂ ಎರಡೂ ಸ್ಥಾನಗಳಿಗೆ ಪ್ರತಿಪಕ್ಷ ಅಭ್ಯರ್ಥಿಗಳನ್ನು ನಿಲ್ಲಿಸಿದೆವು. ಆದರೆ ಎರಡೂ ಸ್ಥಾನ ಕಾಂಗ್ರೆಸ್ ಪಾಲಾದವು.

ಹೊಸ ಸ್ವರೂಪ

ಹೊಸ ವಿಧಾನಸಭೆಯ ರೂಪ ಮತ್ತು ಸ್ವರೂಪ ಹಿಂದಿನದಕ್ಕಿಂತ ಪೂರ್ಣ ಭಿನ್ನವಾಗಿತ್ತು. ಹಿಂದಿನ ಅಸೆಂಬ್ಲಿಯ ಬಹಳಷ್ಟು ಕಾಂಗ್ರೆಸ್ ಸದಸ್ಯರು ದೊಡ್ಡ ಕೈಗಾರಿಕೋದ್ಯಮಿಗಳು ಮತ್ತು ಜಮೀನುದಾರರಾಗಿದ್ದರು. ವಕೀಲರು ಹಾಗೂ ವೈದ್ಯರೂ ಇದ್ದರು. ಕಾಂಗ್ರೆಸ್ ಪಕ್ಷ ಮೂಲತಃ ವೃತ್ತಿಪರರು ಮತ್ತು ಕೈಗಾರಿಕೋದ್ಯಮಿಗಳಿಂದ ನಡೆಯುವ ಪಕ್ಷ ಎಂದು ಇದರ ಅರ್ಥ.

ಅದರಲ್ಲಿ ಬಹುತೇಕ ಜನರು 1952 ರ ಚುನಾವಣೆಯಲ್ಲಿ ಸೋತರು, ಆದರೆ ಗ್ರಾಮಾಂತರ ಪ್ರದೇಶಗಳಿಂದ ಆಯ್ಕೆಯಾದ ಕಾಂಗ್ರೆಸ್ ಅಭ್ಯರ್ಥಿಗಳು ಮುಖ್ಯವಾಗಿ ದೊಡ್ಡ ಜಮೀನುದಾರರಾಗಿದ್ದರು. ಪೈಕ್‌ಪಾರಾದ ಬಿಮಲ್ ಸಿನ್ಹಾ ಮತ್ತು ವರ್ಧಮಾನ್‌ನ ಮಹಾರಾಜರಂಥವರು ಸೋತರು. ಆದರೆ ಮಹಿಸದಾಲ್‌ನ ರಾಜ, ನರಜಲ್‌ನ ರಾಣಿ, ಜಲಪ್ಯಾಗುರಿಯ ರಾಣಿ ಕಾಂಗ್ರೆಸ್ ಟಿಕೆಟ್ ಮೇಲೆ ಗೆದ್ದರು. ಕಾಂಗ್ರೆಸ್ ಶಾಸಕ ಪಕ್ಷದಲ್ಲಿ ಕೈಗಾರಿಕೋದ್ಯಮಿಗಳು ಮತ್ತು ವ್ಯಾಪಾರಿಗಳು ಇದ್ದರೂ ಜಮೀನುದಾರರು ತುಂಬಾ ಪ್ರಭಾವಿಶಾಲಿಯಾಗಿದ್ದರು.

ಜನತೆಯ ಆಶೋತ್ತರಗಳ ಪ್ರತಿನಿಧಿಗಳು...

ವಿಧಾನಸಭೆಗೆ ಆಯ್ಕೆಯಾದ ನಾವುಗಳು ಜನತೆಯ ಆಶೋತ್ತರಗಳನ್ನು ಪ್ರತಿನಿಧಿಸುತ್ತಿದ್ದೆವು.

(ಮುಂದುವರಿಯುವುದು)

ರಾಷ್ಟ್ರೀಯ ಹಿತಾಸಕ್ತಿಗಳ ಬಲಿ..........................

ಪುಟ 2 ರಿಂದ

ಎಂದು ನಿರ್ದೇಶನ ನೀಡಿರುವ ಬೆನ್ನಲ್ಲಿ ಈ ಕಾನೂನು ಬಂದಿದೆ.


ಇನ್ನೊಂದು ಆತಂಕದ ಸಂಗತಿಯೆಂದರೆ ಆರ್.ಎಸ್.ಎಸ್. ಮುಖಂಡ ಪ್ರೊ. ರಾಜೇಂದ್ರ ಸಿಂಗ್ ವಿಮಾನ ಅಪಹರಣದ ಬೆನ್ನಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯ ಬಿಜೆಪಿ-ನೇತೃತ್ವದ ಕೇಂದ್ರ ಸರ್ಕಾರ ಇದನ್ನು ನಿರ್ವಹಿಸಿದ ರೀತಿಯನ್ನು ಟೀಕಿಸುತ್ತಾ ಆರ್.ಎಸ್.ಎಸ್. ನ ಹಿಂದೀ ಪತ್ರಿಕೆ 'ಪಾಂಚಜನ್ಯ' ಕ್ಕೆ ನೀಡಿದ ಸಂದರ್ಶನದಲ್ಲಿ ಪ್ರೊಫೆಸರ್ ಸಿಂಗ್ ದುರಾದೃಷ್ಟವಶಾತ್ ಈ ಇಡೀ ಪ್ರಕರಣಕ್ಕೆ ಹಿಂದೂ-ಮುಸ್ಲಿಂ ಬಣ್ಣ ಕೊಟ್ಟಿದ್ದಾರೆ. ಹಿಂದೂಗಳು ಈ ಇಡೀ ಪ್ರಕರಣದಲ್ಲಿ ಹೇಡಿಗಳಂತೆ ವರ್ತಿಸಿದ್ದಾರೆ ಎಂದು ಚಿತ್ರಿಸುವ ...

ನೀಡಿದರೆ, ಭಯೋತ್ಪಾದನೆಯ ಸಮಸ್ಯೆಯನ್ನು ಕೋಮುವಾದಿ ಕಣ್ಣೋಟದಿಂದಲೇ ನೋಡಿದ್ದಾರೆ. ಅವರ ಪ್ರಕಾರ, ಈ ಪಿಡುಗಿನ ಹಿಂದೆ ಇರುವವರು ಹಿಂದೂವೇತರ ಕೋಮಿನವರು.

ಈ ಎಲ್ಲಾ ಪ್ರಜಾಪ್ರಭುತ್ವವಾದಿ ಹಾಗೂ ಧರ್ಮನಿರಪೇಕ್ಷ ಶಕ್ತಿಗಳು ಬಿಜೆಪಿ ನೇತೃತ್ವದ ಸರಕಾರಗಳ ಇಂತಹ ರಾಷ್ಟ್ರೀಯ ಐಕ್ಯತೆ ಮತ್ತು ನಮ್ಮ ರಾಜಕೀಯ ವ್ಯವಸ್ಥೆಯ ಧರ್ಮನಿರಪೇಕ್ಷ ಹಂದರಕ್ಕೆ ಗಂಭೀರ ಅಪಾಯವೊಡ್ಡುವ ಪ್ರಯತ್ನಗಳನ್ನು ಗಮನಿಸಬೇಕು, ಬಿಜೆಪಿ-ಆರ್.ಎಸ್.ಎಸ್. ಆಟವನ್ನು ವಿಫಲ ಗೊಳಿಸಲು ಐಕ್ಯತೆಯಿಂದ ಹೆಜ್ಜೆ ಇಡಬೇಕು ಎಂದು ಸಿಪಿಐ(ಎಂ)

ಇಂಡಿಯನ್ ಏರ್‌ಲೈನ್ಸ್ ಅಪಹರಣ

ಸರ್ಕಾರದ ವಿಫಲತೆಯಿಂದ ಶರಣಾಗತಿ



- ಸುರ್ಜಿತ್

ಕಳೆದ ವರ್ಷಾಂತ್ಯದ ಎಂಟು ದಿನಗಳಲ್ಲಿ ಇಡೀ ದೇಶವನ್ನು ಆತಂಕಕ್ಕೊಳಗಾಗಿಸಿದ್ದ ಇಂಡಿಯನ್ ಏರ್‌ಲೈನ್ಸ್ ವಿಮಾನ ಅಪಹರಣ, ಅದನ್ನು ಭಾರತ ಸರ್ಕಾರ ನಿಭಾಯಿಸಿದ ರೀತಿ ಹಾಗೂ ಮುಂದಿನ ಪರಿಣಾಮಗಳ ಬಗ್ಗೆ ಈಗ ದೇಶಾದ್ಯಂತ ಚರ್ಚೆ ನಡೆದಿದೆ. ಆಳುವ ಕೂಟದ ನೇತೃತ್ವದಲ್ಲಿರುವ ಬಿಜೆಪಿಯಲ್ಲೂ, ಅದರ ಪರಿವಾರದಲ್ಲೂ ಈ ಬಗ್ಗೆ ಗೊಂದಲಗಳಿದ್ದಂತೆ ಕಾಣುತ್ತಿದೆ. ಈ ವಿಷಯದಲ್ಲಿ ಪ್ರಧಾನ ಮಂತ್ರಿಗಳು ಕರೆದ ಎರಡು ಸರ್ವಪಕ್ಷ ಸಭೆಗಳಲ್ಲಿ ಭಾಗವಹಿಸಿದ್ದ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್‌ರವರು ಇದು ಸರಕಾರದ ವಿಫಲತೆಯಿಂದಾಗಿ ಉಂಟಾದ ಶರಣಾಗತಿ ಎಂದು ಹೇಳುತ್ತಾರೆ. ಅವರ ವಿಶ್ಲೇಷಣೆ ಇಲ್ಲಿದೆ.

ವಿಮಾನ ಅಪಹರಣ ಪ್ರಶ್ನೆಯನ್ನು ಎದುರಿಸಿದ ರೀತಿಯ ಬಗ್ಗೆ ಟೀಕೆ ಹೆಚ್ಚುತ್ತಿದ್ದಂತೆ ಬಿಜೆಪಿ ನೇತೃತ್ವದ ಸರಕಾರ ತನ್ನನ್ನು ಸಮರ್ಥಿಸಿಕೊಳ್ಳಲು ಪ್ರಯತ್ನ ಮಾಡುತ್ತಿದೆ. ಆದರೆ ಇದು ಅಸಮರ್ಥನೀಯವಾದುದನ್ನು ಸಮರ್ಥಿಸಿಕೊಳ್ಳುವ ವ್ಯರ್ಥ ಪ್ರಯತ್ನ. ಬಂಧಿತ ಮೌಲಾನಾ ಮಸೂದ್ ಅಝರ್‌ನ್ನು ಬಿಡುಗಡೆ ಮಾಡಬೇಕು ಎಂಬ ಒತ್ತಾಯಕ್ಕೆ ದೃಢವಾಗಿ 'ಇಲ್ಲ' ಎಂದು ನಮ್ಮ ಪ್ರಧಾನಿಗಳು ಹೇಳಿದಾಗ ಅದನ್ನು ನಂಬಿದ್ದ ಜನಗಳಿಗೆ ನಿರಾಸೆಯಾಗಿದೆ, ತಮಗೆ ಕೈಕೊಟ್ಟರು ಎಂಬ ಭಾವನೆ ಉಂಟಾಗಿದೆ. ಈ ಸಮಸ್ಯೆಯನ್ನು ಪರಿಹರಿಸುವ ಸರಕಾರದ ಪ್ರಯತ್ನಗಳಿಗೆ ತಮ್ಮೆಲ್ಲಾ ಬೆಂಬಲವನ್ನು ನೀಡಿದ್ದ ಪ್ರತಿಪಕ್ಷಗಳೂ ತಪ್ಪಾಗಿದೆ ಎಂದು ಈಗ ಕೂಗಾಡಲು ಸಾಕಷ್ಟು ಕಾರಣಗಳಿವೆ. ಅಲ್ಲಿ ಕಾಶ್ಮೀರದಲ್ಲಿ ಸೆಣಸಾಡುತ್ತಿರುವ ಭದ್ರತಾ ಪಡೆಗಳು ಮತ್ತು ಜನಸಾಮಾನ್ಯರಿಗಂತೂ ಇದು ಒಂದು ಪ್ರತಿಕೂಲ ಸಂದೇಶ.

ಇಂಡಿಯನ್ ಏರ್‌ಲೈನ್ಸ್ ವಿಮಾನ ಅಪಹರಣದ ಬಿಕ್ಕಟ್ಟು ಈಗ ಪರಿಹಾರಗೊಂಡಿದೆ. ಕ್ರಿಸ್‌ಮಸ್ ಮುನ್ನಾದಿನ ಆರಂಭವಾದ ಒತ್ತೆಯಾಳುಗಳ ಒಂದು ವಾರದ ನರಕಯಾತನೆ ಕೊನೆಗೊಂಡು ಒಬ್ಬ ಪ್ರಯಾಣಿಕ ಬಿಟ್ಟು ಇತರರೆಲ್ಲರೂ ಸುರಕ್ಷಿತವಾಗಿ ಮರಳಿದಾಗ ಇಡೀ ದೇಶ ಸಮಾಧಾನದ ನಿಟ್ಟುಸಿರು ಬಿಟ್ಟಿದೆ.

ಅಂತೂ ಈ ಬಿಕ್ಕಟ್ಟು ಪರಿಹಾರವಾಯಿತಲ್ಲ ಎಂಬ ಭಾವನೆ ಸಾಕಷ್ಟು ಬಲವಾಗಿದ್ದರೂ ಈ ಬಗ್ಗೆ ಸಂತೋಷ ಎಂಬುದು ಮಾತ್ರ ಇಲ್ಲ. ಏಕೆಂದರೆ ಇದಕ್ಕೆ ಭಾರೀ ಬೆಲೆ ತೆರಬೇಕಾಗಿ ಬಂದಿದೆ. ಮೂವರು ಪ್ರಮುಖ ಉಗ್ರಗಾಮಿಗಳನ್ನು ಒತ್ತೆಯಾಳುಗಳ ಬದಲಿಗೆ ಅಪಹರಣಕಾರರಿಗೆ ಒಪ್ಪಿಸಬೇಕಾಗಿ ಬಂದಿದೆ. ಈ ಬಿಕ್ಕಟ್ಟು ಪರಿಹರಿಸುವಲ್ಲಿ ವಾಜಪೇಯಿ ಸರಕಾರ ತೋರ್ಪಡಿಸಿದ ಅಸಮರ್ಥತೆ ಅದರ ವಿಫಲತೆಗಳ ಪಟ್ಟಿಗೆ ಇನ್ನೊಂದು ಸೇರ್ಪಡೆ. ಈ ಸರ್ಕಾರದ ದೌರ್ಬಲ್ಯಗಳನ್ನು, ಸೂಕ್ಷ್ಮ ವಿಷಯಗಳನ್ನು ಎದುರಿಸುವಲ್ಲಿ ಅದರ ಅನುಭವಹೀನ ನಿಲುವನ್ನು ಬಯಲು ಮಾಡಿದೆ. ಮೌಲಾನಾ ಮಸೂದ್ ಅಝರ್, ಮುಸ್ತಾಕ್ ಝರ್ಗಾರ್ ಮತ್ತು ಸೈಯದ್ ಅಹ್ಮದ್ ಉಮರ್ ಶೇಖ್‌ರ ಬಿಡುಗಡೆ ಕಾಶ್ಮೀರ ಕಣಿವೆಯಲ್ಲಿ ಉಗ್ರಗಾಮಿ ಚಟುವಟಿಕೆಗಳ ವಿರುದ್ಧ ಹೋರಾಟದಲ್ಲಿ ವಾಜಪೇಯಿ ಸರಕಾರದ ಶರಣಾಗತಿಯ ಒಂದು ಸಂಕೇತ. ಎರಡು ದಿನಗಳ ನಂತರವೇ ಕಾಶ್ಮೀರದ ಕಣಿವೆಯಲ್ಲಿ 16 ಮಂದಿಯ ಹತ್ಯೆ 30 ಮಂದಿಗೆ ಗಾಯ ಈ ದಿಕ್ಕಿನಲ್ಲಿ ಒಂದು ಅಪಾಯಕಾರಿ ಸಂಕೇತ.

ಡಿಸೆಂಬರ್ 27, 1999 ರಂದು ವಿಮಾನ ಅಪಹರಣ ಸಮಸ್ಯೆಯನ್ನು ಚರ್ಚಿಸಲು ಸರ್ವಪಕ್ಷ ಸಭೆಯಲ್ಲಿ ಒಂದು ಘೋಷಣೆ ಅಂಗೀಕರಿಸಲಾಗಿತ್ತು. ಆದರೆ ಸರಕಾರ ಅಂತಿಮವಾಗಿ ಅಪಹರಣಕಾರರೊಂದಿಗೆ ಮಾಡಿಕೊಂಡ ಚೌಕಾಸಿ ಈ ಘೋಷಣೆಗೆ ವಿರುದ್ಧವಾಗಿದೆ. ಸರಕಾರ ಏನೇ ನಿರ್ಧರಿಸಿದರೂ ಅದು ಎರಡು ಅಂಶಗಳನ್ನು ಆಧರಿಸಿರಬೇಕು. ಪ್ರಯಾಣಿಕರ ಸುರಕ್ಷಿತತೆ - ಮತ್ತು ದೇಶದ ಹಿತಾಸಕ್ತಿ ಎಂದು ಆ ಘೋಷಣೆ ಹೇಳಿತ್ತು. ಈ ಸಭೆಯಲ್ಲಿ ಅದುವರೆಗೆ ಸರಕಾರ ಬಿಕ್ಕಟ್ಟನ್ನು ಎದುರಿಸಿದ ರೀತಿ ಪ್ರತಿಪಕ್ಷಗಳ ಮುಖಂಡರ ತೀವ್ರ ಟೀಕೆಗೆ ಒಳಗಾಯಿತು. ಈ ಅಪಹರಣ ಒಂದು ಪ್ರತ್ಯೇಕ ಘಟನೆ ಎಂಬಂತೆ ಕಾಣಬಾರದು, ಕಾಶ್ಮೀರದಲ್ಲಿ ಪಾಕಿಸ್ತಾನದ ಒಟ್ಟಾರೆ ಕಾರ್ಯತಂತ್ರದ ಹಿನ್ನೆಲೆಯಲ್ಲಿ ಇದನ್ನು ನೋಡಬೇಕು ಎಂದು ನಾವು ಹೇಳಿದೆವು. ಆದ್ದರಿಂದ ಲಾಹೋರ್‌ನಲ್ಲಿ ಅಪಹೃತ ವಿಮಾನ ಇಳಿಯಲು ಪಾಕಿಸ್ತಾನ ಅನುಮತಿ ನೀಡದಿರುವುದನ್ನು ಯಾವುದೇ ರೀತಿಯಲ್ಲಿ ಅಪಹರಣದ ವಿರುದ್ಧ ಕ್ರಮ ಎಂದು ತಿಳಿಯುವುದು ಸಾಧ್ಯವಿಲ್ಲ. ವಿಮಾನ ಇಳಿಯಲು ಅನುಮತಿ ನೀಡಿದ್ದರೆ ಅದು ಅವರನ್ನು ಸಂಪೂರ್ಣ ಬಯಲುಗೊಳಿಸಿ ಅವರ ಮೇಲೆ ನೇರ ಜವಾಬ್ದಾರಿ ತರಬಹುದಿತ್ತು. ಆದ್ದರಿಂದ ಯಾವುದೇ ಅವ್ಯವಸ್ಥೆಯನ್ನು ತಪ್ಪಿಸಲು ವಿಮಾನವನ್ನು ಜಾಣ್ಮೆಯಿಂದ ಪಾಕಿಸ್ತಾನದ ಪ್ರದೇಶದಿಂದ ಬೇರೆ ದಿಕ್ಕಿಗೆ ತಿರುಗಿಸಲಾಯಿತು.

ಪಾಕಿಸ್ತಾನಿ ಆಳರಸರ ಆಟ

ಕಾಶ್ಮೀರ ಕಣಿವೆಯಲ್ಲಿ ತಮ್ಮ ಮಧ್ಯ ಪ್ರವೇಶವನ್ನು ತೀವ್ರಗೊಳಿಸುವಲ್ಲಿ ಪಾಕಿಸ್ತಾನೀ ಆಳುವ ಮಂದಿ ಜಾಗರೂಕತೆಯಿಂದ ರೂಪಿಸಿರುವ ಯೋಜನೆಯ ಭಾಗವಾಗಿ ಈ ಪ್ರಕರಣವನ್ನು ಕಾಣಬೇಕು. **ಕಳೆದ ವರ್ಷ ಕಾರ್ಗಿಲ್‌ನಲ್ಲಿ ನಿಯಂತ್ರಣ ರೇಖೆಯ ಈಚೆಗೆ ದೊಡ್ಡ ಪ್ರಮಾಣದ ನುಸುಳಿಕೆಗೆ ಹಾಗೂ ಅದೇ ವೇಳೆಗೆ ಕಾಶ್ಮೀರ ಕಣಿವೆಯಲ್ಲಿ ಸಶಸ್ತ್ರ ಉಗ್ರಗಾಮಿಗಳನ್ನು ಭಾರಿ ಸಂಖ್ಯೆಯಲ್ಲಿ ಕಳಿಸಿದ್ದು ಇದೇ ಆಟದ ಭಾಗವಾಗಿ. ಪಾಕಿಸ್ತಾನದ ಹೊಸ ಆಳರಸರು ಕಾಶ್ಮೀರ ಪ್ರಶ್ನೆಯ ಚರ್ಚೆಯಿಲ್ಲದೆ ಭಾರತ-ಪಾಕಿಸ್ತಾನ ಮಾತುಕತೆ ಸಾಧ್ಯವಿಲ್ಲ ಎಂದು ಬಹಳ ಸ್ಪಷ್ಟಪಡಿಸಿದ್ದಾರೆ. ವಿಮಾನ ಅಪಹರಣ ಇದರ ಇನ್ನೊಂದು ಕೊಂಡಿ.**

ಪಾಕಿಸ್ತಾನೀ ಆಳುವ ಮಂದಿಯ ಈ ಇಡೀ ಆಟದ ಉದ್ದೇಶ ಕಾಶ್ಮೀರ ಪ್ರಶ್ನೆಯನ್ನು ಅಂತರ್ರಾಷ್ಟ್ರೀಯಗೊಳಿಸುವುದು. ಕಾರ್ಗಿಲ್ ಕಾಶ್ಮೀರದ ಮೇಲೆ ಅಂತರ್ರಾಷ್ಟ್ರೀಯ ಗಮನ ಸೆಳೆಯುವಂತೆ ಮಾಡಿತು, ಅಮೆರಿಕನ್ ಅಧ್ಯಕ್ಷ ಬಿಲ್ ಕ್ಲಿಂಟನ್‌ರಿಂದ 'ವೈಯಕ್ತಿ ಆಸಕ್ತಿ' ತೋರಿಸುವ ಭರವಸೆ ಪಡೆಯುವಲ್ಲಿ ಆಳರಸರು ಯಶಸ್ವಿಯಾದರು. **ಕಾಶ್ಮೀರ ಕಣಿವೆಯೊಳಗೆ ಕಳಿಸಲ್ಪಟ್ಟ ಉಗ್ರಗಾಮಿಗಳು ತಮಗೆ ವಹಿಸಿದ ಕೆಲಸಗಳನ್ನು ಮಾಡುತ್ತಿದ್ದಾರೆ. ಅವರೀಗ ತಮ್ಮ ಕಾರ್ಯತಂತ್ರವನ್ನು ತುಸು ಬದಲಿಸಿದ್ದಾರೆ. ಮೊದಲು 'ಮೃದು ಗುರಿ' ಎಂದರೆ ಸುಭದ್ರತಾ ವ್ಯವಸ್ಥೆ ಹೊಂದದ ಜನಸಾಮಾನ್ಯರು ಮತ್ತಿತರರ ಮೇಲೆ ಗುರಿಯಿಟ್ಟಿದ್ದರೆ ಈಗ ಅವರು ಹಾಗೆ ಮಾಡುತ್ತಿಲ್ಲ. ಅವರೀಗ ಪೋಲೀಸ್, ಮಿಲಿಟರಿ, ಅರೆ ಮಿಲಿಟರಿ ನೆಲೆಗಳ ಮೇಲೆ ಗುರಿಯಿಡುತ್ತಿದ್ದಾರೆ.** ಈ ಮೂಲಕ ಅವರು ಎರಡು ಉದ್ದೇಶ ಈಡೇರಿಸಿಕೊಳ್ಳುತ್ತಿದ್ದಾರೆ. ಒಂದು, ಉಗ್ರಗಾಮಿಗಳ ವಿರುದ್ಧ ಕಾರ್ಯಾಚರಣೆ ನಡೆಸುವ ಪಡೆಗಳಲ್ಲಿ ಹತಾಶೆ ತರುವುದು ಹಾಗೂ ಎರಡು, ಜನಸಾಮಾನ್ಯರಲ್ಲಿ ಭೀತಿ ಉಂಟು ಮಾಡುವುದು. ಇದರ ಮೇಲೆ ಈಗ ಈ ಅಪಹರಣ ಪ್ರಕರಣ. **ಮೂವರು ಹರ್ಕತ್ ಮುಖಂಡರ ಬಿಡುಗಡೆ ಕಾಶ್ಮೀರ ಕಣಿವೆಯಲ್ಲಿ ಉಗ್ರಗಾಮಿಗಳ ಚಟುವಟಿಕೆಗಳಿಗೆ ಹೊಸ ಹುಮ್ಮಸ್ಸನ್ನು ಒದಗಿಸಿದೆ. ಅಪಹರಣಕಾರರು ಬಯಸಿದ್ದೂ ಇದನ್ನೇ.**

ತಾಲಿಬಾನ್ ಪಾತ್ರ

ಮೊದಮೊದಲು ಈ ಬಿಕ್ಕಟ್ಟನ್ನು ಪರಿಹರಿಸುವಲ್ಲಿ ಭಾರತ ಸರ್ಕಾರದ ಮಾನ್ಯತೆ ಪಡೆಯದ ಅಫಘಾನಿಸ್ತಾನದ ತಾಲಿಬಾನ್ ಆಡಳಿತದ ಪ್ರಯತ್ನಗಳನ್ನು ಮುಕ್ತ ಕಂಠದಿಂದ ಪ್ರಶಂಸಿಸಿದ ವಾಜಪೇಯಿ ಸರಕಾರ ಈಗ ಅದನ್ನು ಸರಿಪಡಿಸಿಕೊಳ್ಳುವ ಪ್ರಯತ್ನ ನಡೆಸಿದೆ. ಸರಕಾರೀ ವಲಯಗಳಲ್ಲಿ ಈ ಬಗ್ಗೆ ಪುನರಾಲೋಚನೆ ಆರಂಭವಾದಂತಿದೆ. ಸರ್ವಪಕ್ಷ ಸಭೆಯಲ್ಲಿ ನಾವು ಮಾತ್ರವಲ್ಲ ಇತರ ಹಲವರು ಕೂಡಾ ಈ ಮೂಲಭೂತವಾದಿ ಶಕ್ತಿಗಳನ್ನು ಕುರಿತಂತೆ ಯಾವುದೇ ಅವಸರದ ತೀರ್ಮಾನಕ್ಕೆ ಬರಬಾರದು ಎಂದು ಹೇಳಿದ್ದರು.

ಅಫಘಾನಿಸ್ತಾನದಲ್ಲಿ ನಜಿಬುಲ್ಲಾ ಸರಕಾರದ ವಿರುದ್ಧ ನಿಂತ ಇತರ **ಹೆಚ್ಚಿನ ಮೂಲಭೂತವಾದಿ ಶಕ್ತಿಗಳಂತೆ ತಾಲಿಬಾನ್ ಕೂಡಾ ಪಾಕಿಸ್ತಾನದಲ್ಲಿ ಹುಟ್ಟಿ ಪೋಷಣೆ ಪಡೆದ ಒಂದು ಶಕ್ತಿ.** ಆ ದೇಶದ ಧಾರ್ಮಿಕ ಶಾಲೆಗಳಲ್ಲಿ ಸೈದ್ಧಾಂತಿಕ ಶಿಕ್ಷಣ ಪಡೆದವರು ಇವರು. ಜತೆಗೆ ಮಿಲಿಟರಿ ತರಬೇತಿಯೂ ಸಿಕ್ಕಿತು. ಅಮೆರಿಕನ್ ಸಾಮ್ರಾಜ್ಯಶಾಹಿಯಿಂದ ಈ ಸಂಘಟನೆಗೆ ಸಂಪೂರ್ಣ ಬೆಂಬಲವೂ ಸಿಕ್ಕಿತು. ಸಮಯ ಬಂದಾಗ ತಾಲಿಬಾನ್ ಉಗ್ರಗಾಮಿಗಳು ಅಫಘಾನಿಸ್ತಾನದ ರಾಜಧಾನಿ ಕಾಬೂಲ್‌ನಿಂದ ರಬ್ಬಾನೀ ಆಡಳಿತವನ್ನು ಹೊರದಬ್ಬಿದಷ್ಟೇ ಅಲ್ಲ, ಅಫಘಾನಿಸ್ತಾನದ ಬಹುಜನಾಂಗೀಯ ಸಂಸ್ಕೃತಿಯನ್ನೇ ನಾಶ ಮಾಡಲು ಪ್ರಯತ್ನಿಸುತ್ತಿದ್ದಾರೆ. ಮಹಿಳಾ ಶಿಕ್ಷಣದ ಮೇಲೆ ಸಂಪೂರ್ಣ ನಿಷೇಧ, ಅವರನ್ನು ಮನೆಗೆ ಹಾಗೂ ಬುರ್ಖಾಗಳೊಳಗೆ ಸೀಮಿತಗೊಳಿಸಬೇಕು ಎಂಬ ಡಿಕ್ರಿಯನ್ನು ಹೊರಡಿಸಿದ ವ್ಯವಸ್ಥೆಯಿದು. ಅದು ಹಳಸಲು ಮತ್ತು ಮಧ್ಯಕಾಲೀನ ಕಾನೂನುಗಳನ್ನು ತಂದು ಅಫಘಾನಿಸ್ತಾನವನ್ನು ಕರಾಳ ಯುಗದತ್ತ ಹಿಂದಕ್ಕೊಯ್ಯಲು ಪ್ರಯತ್ನಿಸುತ್ತಿದೆ.

ತಾಲಿಬಾನ್ ಕಡು ಮೂಲಭೂತವಾದಿಗಳಿಂದ ಕೂಡಿರುವ ಒಂದು ನಿರ್ದಯ, ಕಠೋರ ಶಕ್ತಿ ಎಂದು ಈಗಾಗಲೇ ತೋರಿಸಿಕೊಂಡಿದೆ. ಇಂತಹ ಒಂದು ಆಡಳಿತದ ಭಯದಿಂದ ಹಲವು ಅಫ್ಘಾನರು ಭಾರತದಲ್ಲಿ ಆಶ್ರಯ ಪಡೆದಿದ್ದಾರೆ. ಹೀಗೆ ಸ್ವಭಾವತಃ ಸೈದ್ಧಾಂತಿಕವಾಗಿ, ರಾಜಕೀಯವಾಗಿ

ಪುಟ 8 ಕ್ಕೆ

ಶೋಚನೀಯ ವಿಫಲತೆಯನ್ನು ಮುಚ್ಚಿಕೊಳ್ಳಲು ಅಡ್ವಾಣಿ ಕಸರತ್ತು

ವಿಮಾನ ಅಪಹರಣದ ಘಟನೆಯನ್ನು ಸರಕಾರ ನಿರ್ವಹಿಸಿದ ವಿಧಾನದಿಂದಾಗಿ ಬಿಜೆಪಿಯ ಪ್ರತಿಷ್ಠೆಗೆ ಕುಂದುಂಟಾಗಿದೆ ಎಂದು ಕೇಂದ್ರ ಗೃಹಮಂತ್ರಿ ಹೇಳಿದ್ದಾರೆ. ಒಂದೇ ವಾರದಲ್ಲಿ ಎರಡು ಬಾರಿ ಹೇಳಿದ್ದಾರೆ. ಸಂಘ ಪರಿವಾರದಲ್ಲಿ ಉಂಟಾಗಿರುವ ಅಸಂತೃಪ್ತಿ, ಮುಜುಗರಕ್ಕೆ ಮುಲಾಮು ಹಚ್ಚಲು ಹೇಳಿರುವ ಮಾತಿದು ಎಂಬುದು ಸ್ಪಷ್ಟ. ಪಾಕಿಸ್ತಾನ ಮತ್ತು ಭಯೋತ್ಪಾದಕತೆಯ ವಿರುದ್ಧ ಕಠಿಣ ನಿಲುವು ತಳೆಯುತ್ತೇವೆ ಎಂಬ ಬಡಾಯಿಯಲ್ಲಿ ಬೆಳೆದವರು ತಾನೇ ಆ ಜನ!

ಬಿಜೆಪಿ ನೇತೃತ್ವದ ಸರ್ಕಾರದ ದೂರದೃಷ್ಟಿಯಿಲ್ಲದ ಕಣ್ಣೋಟ ಬಟಾಬಯಲಾಗುತ್ತಿರುವಾಗ ಅಡ್ವಾಣಿ ಈ ಕಸರತ್ತಿಗಿಳಿದಿದ್ದಾರೆ. ಅಮೆರಿಕಾದೊಂದಿಗೆ ಸಂಬಂಧಗಳು ಹಿಂದೆಂದೂ ಕಾಣದ ರೀತಿಯಲ್ಲಿ ಸುಧಾರಿಸಿಕೊಂಡಿದೆ ಎಂದು ಬೆನ್ನು ತಟ್ಟಿಕೊಳ್ಳುತ್ತಿದ್ದ ವಾಜಪೇಯಿ ಸರಕಾರ ವಿಮಾನ ಅಪಹರಣದ ವಿಷಯದಲ್ಲಿ ಅಮೆರಿಕನ್ ಆಡಳಿತ ಒಂದು ದೃಢ, ಕಠಿಣ ನಿಲುವು ತಳೆಯುತ್ತದೆ ಎಂದು ನಿರೀಕ್ಷಿಸಿತ್ತು. ಆದ್ದರಿಂದ ಪಾಕಿಸ್ತಾನವನ್ನು ಭಯೋತ್ಪಾದಕ ರಾಷ್ಟ್ರ ಎಂದು ಸಾರಬೇಕು ಎಂದು ತಾನು ಅಮೆರಿಕಾವನ್ನು ಕೇಳುವುದಾಗಿ ಪ್ರಧಾನಿ ವಾಜಪೇಯಿ ಸಾರಿದರು-ಇದು ಎಂತಹ ಮೊದ್ದು ನಿರೀಕ್ಷೆ ಎಂದು ಅರಿಯಲು ಹೆಚ್ಚೇನು ಸಮಯ ಬೇಕಾಗಲಿಲ್ಲ. ಈ ಮೂಲಕ ವಾಜಪೇಯಿ ಸರಕಾರದ ನೀತಿ ಎಂತಹ ತಪ್ಪು ದಾರಿಯಲ್ಲಿದೆ ಎಂದೂ ಬಯಲಿಗೆ ಬರುವಂತಾಯಿತು. ಅಲ್ಲಿ ವಿಮಾನ ಅಪಹರಣದ ಅಂಕಿ-ಅಂಶಗಳು ಒಂದೊಂದಾಗಿ ಪ್ರದರ್ಶನವಾಗುತ್ತಿದ್ದಾಗ ಇಡೀ ಬಿಜೆಪಿ ನಾಯಕತ್ವ ಚೆನ್ನೈನಲ್ಲಿ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿತ್ತು. ಇಡೀ ಪಾಶ್ಚಿಮಾತ್ಯ ಜಗತ್ತು, ಅಮೆರಿಕಾ ಮತ್ತು ಬ್ರಿಟನ್ ಕೂಡಾ ಹೇಗೆ ನಮ್ಮ ಸಹಾಯಕ್ಕೆ ಬರಲಿಲ್ಲ, ಪಾಕಿಸ್ತಾನವನ್ನು ಮೃದುವಾಗಿ ಕೂಡಾ ಟೀಕಿಸಲು ಅವರು ಹೇಗೆ ಸಿದ್ಧರಿಲ್ಲ ಎಂಬುದು ಈ ನಾಯಕಮಣಿಗಳಿಗೆ ತಮ್ಮ ಕಣ್ಣೆದುರೇ ಕಾಣುತ್ತಿತ್ತು.



'ನಮ್ಮದು ಮೃದು ಪ್ರಭುತ್ವ, ಇಲ್ಲಿ ಕಠಿಣ ನಿಲುವು ಸಾಧ್ಯವಿಲ್ಲ' ಎಂದೆಲ್ಲಾ ಹೇಳುತ್ತಾ ತಮ್ಮ ವಿಫಲತೆಯನ್ನು ಮುಚ್ಚಿಕೊಳ್ಳಲು ಬಿಜೆಪಿ ಮುಖಂಡರು ಹೆಣಗುತ್ತಿದ್ದಾರೆ. ಅಲ್ಪಸಂಖ್ಯಾತರ ನಡುವೆ ಉಗ್ರವಾದಕ್ಕೆ ಪೋಷಣೆ ಸಿಕ್ಕಿರುವುದು ತನ್ನ ಕೋಮುವಾದಿ ರಾಜಕೀಯದಿಂದಲೇ ಎಂದು ಅರಿಯುವ ಸಾಮರ್ಥ್ಯವೂ ಬಿಜೆಪಿಗಿಲ್ಲ. ಅಲ್ಪಸಂಖ್ಯಾತರಿಗೆ ಮೂಲಭೂತ ಹಕ್ಕುಗಳ ರಕ್ಷಣೆಯ ಭರವಸೆ ದೊರೆಯುದೇ ಇರುವವರೆಗೆ ಅವರ ನಡುವೆ ಮೂಲಭೂತವಾದಿ ಸಂಘಟನೆಗಳು ಪ್ರಭಾವ ಹೆಚ್ಚುತ್ತಲೇ ಇರುತ್ತದೆ. ಪಾಕಿಸ್ತಾನ ಅದರ ದುರುಪಯೋಗ ಪಡೆಯುತ್ತಲೇ ಇರುತ್ತದೆ. ಇದೇ ಅಡ್ವಾಣಿಯವರ ಕೈಕೆಳಗಿರುವ ಕೇಂದ್ರ ಗೃಹ ಮಂತ್ರಾಲಯ ಜಮ್ಮು-ಕಾಶ್ಮೀರದಲ್ಲಿ ಪರಿಸ್ಥಿತಿಯನ್ನು ಎದುರಿಸುವಲ್ಲಿ ಸೋತಿರುವುದು ಈಗ ಜಗಜ್ಜಾಹೀರಾಗಿದೆ. ಸರಕಾರವೇ ಮುಂದಾಗಿ ಕ್ರಮ ಕೈಗೊಳ್ಳುತ್ತಿದೆ. ಉಗ್ರಗಾಮಿಗಳು ಧಾಳಿ ಮಾಡಲೂ ಅವಕಾಶ ನೀಡುವುದಿಲ್ಲ ಎಂಬ ಅವರ ಬಡಾಯಿ ಚೂರುಚೂರಾಗಿದೆ. ಏಕೆಂದರೆ ಅಲ್ಲಿ ಪ್ರತಿದಿನ ಸೇನಾಪಡೆಗಳು, ಪೋಲೀಸ್ ಪಡೆಗಳ ಮೇಲೆ ಉಗ್ರಗಾಮಿಗಳ ಧಾಳಿಗಳ ಸುದ್ದಿಗಳು ಬರುತ್ತಲೇ ಇವೆ.

ಉಗ್ರಗಾಮಿ ಹಾಗೂ ಪ್ರತ್ಯೇಕತಾವಾದಿ ಶಕ್ತಿಗಳು ಉಂಟು ಮಾಡಿರುವ ಸಮಸ್ಯೆಗಳಿಂದ ನಮ್ಮನ್ನು ಅಮೆರಿಕಾದ ಸಹಾಯವೂ ಪಾರು ಮಾಡದು, 'ಕಠಿಣ ಪ್ರಯತ್ನ' ಎಂಬುದು ಕೂಡಾ ಪಾರು ಮಾಡದು. ಈಗ ಬೇಕಾಗಿರುವುದು ಇವೆರಡೂ ಅಲ್ಲ. ಒಂದೆಡೆ ಉಗ್ರಗಾಮಿತ್ವವನ್ನು ರಾಜಕೀಯವಾಗಿ ಜನಗಳಿಂದ ದೂರ ಮಾಡಬಲ್ಲ ಧೋರಣೆಗಳನ್ನು ರೂಪಿಸುವ, ಅದೇ ವೇಳೆಗೆ ಇನ್ನೊಂದೆಡೆ ಹಿಂಸಾಚಾರ ಕೃತ್ಯಗಳನ್ನು ಪರಿಣಾಮಕಾರಿಯಾಗಿ ಎದುರಿಸುವ ಒಂದು ಸರಕಾರ ಈಗ ಬೇಕಾಗಿದೆ. ಆರ್.ಎಸ್.ಎಸ್. ನ ಕುರುಡು ದೃಷ್ಟಿಯ ಮುಖಂಡತ್ವದ ನೇತೃತ್ವದಲ್ಲಿ ಇಂತಹ ಸರಕಾರ ಸಾಧ್ಯವಿಲ್ಲ. ಬಿಜೆಪಿ ಪ್ರತಿಷ್ಠೆಗೆ ಕುಂದು ಬಂದಿದೆ, ದೇಶದ ಪ್ರತಿಷ್ಠೆಗಲ್ಲ ಎಂಬ ಅಡ್ವಾಣೀ ಕಸರತ್ತಿನ ಮೂಲಕ ವಿಫಲತೆಯನ್ನು ಮುಚ್ಚಿಕೊಳ್ಳುವ ಅವರ ಪ್ರಯತ್ನಗಳಿಗೆ ಯಾರೂ ಮಾರು ಹೋಗುವುದು ಸಾಧ್ಯವಿಲ್ಲ.

ಅನಿರ್ದಿಷ್ಟ ಮುಷ್ಕರದೆಡೆಗೆ

ಸಾರ್ವಜನಿಕ ಉದ್ದಿಮೆಗಳ ಲಕ್ಷ ಲಕ್ಷ ಕಾರ್ಮಿಕರು

ಭಾರತದ ಆರ್ಥಿಕ ಜೀವನಾಡಿಯಾದ ಸಾ...
ಸರ್ಕಾರದ ಒಡೆತನಕ್ಕೆ ಸೇರಿದ) 20 ಲಕ್ಷ ಕಾ...
ಕೈಗೊಂಡಿದ್ದಾರೆ. ಬದುಕನ್ನು ರಕ್ಷಿಕೊಳ್ಳುತ್ತಲೇ ದೇ...
ದೇಶಪ್ರೇಮಿ ತೀರ್ಮಾನ. ದೇಶದ ಸಾರ್ವಜನಿ...
ಖಾಸಗೀಕರಣ, ತಮ್ಮ ವೇತನ ಸ್ಪಂದನ ಪ್ರಶ್ನೆಗ...
ಮಾಡುವ ತೀರ್ಮಾನ ಮಾಡಿದ್ದಾರೆ. ತೀವ್ರ ...
ದೇಶದ ಕೋಟ್ಯಾಂತರ ಜನಕ್ಕೆ ಸ್ಫೂರ್ತಿ ತರುವ ...
ದೇಶದ ಪತ್ರಿಕೆಗಳು ಹಾಗೂ ಇತರ ಮಾಧ್ಯಮ...

ಖಾಸಗೀಕರಣ, ಜಾಗತೀಕರಣ, ಉದಾರೀ...
ಮೊದಲಾದ ಉದ್ಯಮಗಳನ್ನು ಖಾಸಗಿ ಬಂಡ...
ಜಾಗತೀಕರಣ, ಉದಾರೀಕರಣದ ವಿರುದ್ಧ ...
ರೈತ...
ಮಿ...
ಆದ...
ನದ...



ನಾಡಿನ ನಾಡಿ ಮಿಡಿತ ಜೋಡಿಸಿದ
ಇಂಡಿಯನ್ ಟೆಲಿಫೋನ್ ಕೈಗಾರಿಕೆ

ಪ್ರ: ಸಿಪಿಎಸ್‌ಟಿಯು ಎಂದರೆ ಏನು?

ಸೂರಿ: ಸಾರ್ವಜನಿಕ ವಲಯಗಳ ಕಾರ್ಮಿಕ ಸಂಘಗಳ ಸಮಿತಿ ಸಿಐಟಿಯು, ಎಐಟಿಯುಸಿ, ಹೆಚ್‌ಎಂಎಸ್ ಜೊತೆಗೆ ಬೆಂಗಳೂರಿನ ಸಾರ್ವಜನಿ ವಲಯದ ಕಾರ್ಮಿಕರ ಒಕ್ಕೂಟ ಜೆ.ಎ.ಎಫ್. ಹೈದರಾಬಾದಿನ ಸಾರ್ವಜನಿಕ ವಲಯದ ಕಾರ್ಮಿಕರ ಒಕ್ಕೂಟ ಮೊದಲಾದವು ಸೇರಿವೆ.

ಯಾವುದೇ ರಾಜಕೀಯ ಪಕ್ಷಬೇಧ ಮರೆದು ದೇಶದ ಒಳಿತಿಗೆ ಒಟ್ಟಾಗಿ ಹೋರಾಟ ಮಾಡಬೇಕೆಂಬ ಮಹದಾಸೆಯ ನೆಲೆಯಲ್ಲಿ ಸಾರ್ವಜನಿಕ ವಲಯಗಳ ಕಾರ್ಮಿಕ ಸಂಘಗಳ ಸಮಿತಿ(ಸಿಪಿಎಸ್‌ಟಿಯು) ಕೆಲಸ ಮಾಡುತ್ತಿದೆ.

ಪ್ರ: ಯಾವ ಯಾವ ಕೈಗಾರಿಕೆಗಳು ಇದರಲ್ಲಿ ಸೇರುತ್ತಿವೆ.

ಸೂರಿ: ಸಾರ್ವಜನಿಕ ವಲಯದಲ್ಲಿ ಕಲ್ಲಿದ್ದಲು, ಉಕ್ಕು, ಎಣ್ಣೆ, ಬಂದರು, ಹೆಚ್.ಎ.ಎಲ್., ಬಿಇಎಂಎಲ್, ಐಟಿಸಿ, ಹೆಚ್‌ಎಂಟಿ, ಬಿಹೆಚ್‌ಇಎಲ್, ರಸಗೊಬ್ಬರ ಕಂಪನಿಗಳು, ಏರ್‌ಲೈನ್ಸ್ ಮುಂತಾದವುಗಳು ಸೇರುತ್ತವೆ.

ಪ್ರ: ದೇಶದ ಆರ್ಥಿಕ ರಂಗವನ್ನು ಇವು ಎಷ್ಟರ ಮಟ್ಟಿಗೆ ನಿಯಂತ್ರಿಸುತ್ತವೆ?

ಸೂರಿ: ದೇಶದ ಆರ್ಥಿಕತೆಯು ಕೀಲಿ ಕೈಯೇ ಸಾರ್ವಜನಿಕ ಉದ್ಯಮಗಳು. ದೇಶದ ಅರ್ಥವ್ಯವಸ್ಥೆಯ ಜೀವನಾಡಿಯೇ ಇವೆಂದರೆ ತಪ್ಪಾಗಲಾರದು.

ಪ್ರ: ಸಾರ್ವಜನಿಕ ಉದ್ದಿಮೆಗಳ ನೌಕರರು ಅನಿರ್ದಿಷ್ಟ ಮುಷ್ಕರಕ್ಕೆ ಮುಂದಾಗಲು ಕಾರಣವೇನು?

ಸೂರಿ: ಸೋವಿಯತ್ ಯೂನಿಯನ್ ಪತನಾನಂತರ ಸಾಮ್ರಾಜ್ಯವಾದಿಗಳು ಹಾಗೂ ದೇಶೀಯ ಬಂಡವಾಳಿಗರು ಜಗತ್ತಿನಲ್ಲಿ ಎಲ್ಲ ಸಮಸ್ಯೆಗಳ ಪರಿಹಾರಕ್ಕೆ ಬಂಡವಾಳಶಾಹಿಯೇ ದಾರಿ. ಬೇರೆ ಯಾವ ದಾರಿಯೂ ಇಲ್ಲ. ಅಮೆರಿಕಾ ಮತ್ತಿತರೆ ಸಾಮ್ರಾಜ್ಯಶಾಹಿ ದೇಶಗಳ ರೀತಿಯಲ್ಲಿ ದಕ್ಷತೆಯಿಂದ ನಡೆಸಲು ಎಲ್ಲಾ ಉದ್ದಿಮೆಗಳನ್ನು ಖಾಸಗಿಯವರಿಗೆ ಕೊಡಬೇಕೆಂದು ದೊಡ್ಡ ಮಟ್ಟದ ಪ್ರಚಾರಾಂದೋಲನ ಪ್ರಾರಂಬಿಸಿದರು. 1991 ರಲ್ಲಿ ನರಸಿಂಹ ರಾವ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಇದಕ್ಕೆ ಬಲಿಯಾಯಿತು. ಅಲ್ಲಿಂದೀಚೆಗೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಎಲ್ಲಾ ಸರ್ಕಾರಗಳು ಸಹ ಸಂಯುಕ್ತ ರಂಗವನ್ನೂ ಸೇರಿಸಿಕೊಂಡಂತೆ ಜಾಗತೀಕರಣ, ಖಾಸಗೀಕರಣದ ಹಾದಿಯನ್ನು ಹಿಡಿದವು. ಅಂದಿನಿಂದಲೂ ಕಾರ್ಮಿಕ ವರ್ಗ ಇದನ್ನು ಪ್ರತಿಭಟಿಸುತ್ತಲೇ ಇದೆ. ಈವರೆಗೆ ಒಂದೆರಡು ಮುಷ್ಕರಗಳನ್ನು ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರು ನಡೆಸಿದ್ದಾರೆ. ಬ್ಯಾಂಕ್, ವಿಮಾ ನೌಕರರು ಪಾಲ್ಗೊಂಡಿದ್ದಾರೆ.

ಹೋರಾಟ, ಮುಷ್ಕರ ಮಾಡಿದಾಗ ಅಂದಿನ ಸರ್ಕಾರಗಳು ಈ ಖಾಸಗೀಕರಣ ನೀತಿಯನ್ನು ಜಾರಿ ಮಾಡಲಾಗಲಿಲ್ಲ. ಜಾಗತೀಕರಣ, ಖಾಸಗೀಕರಣದ ಬಿರುಸು ಕಡಿಮೆಯಾಗಿತ್ತು.

ಪ್ರ: ಬಿಜೆಪಿ ಸರ್ಕಾರ ಬಂದ ವೇಳೆಯಲ್ಲೇ ಅನಿರ್ದಿಷ್ಟ ಮುಷ್ಕರದ ಕಡೆಗೆ ಸಾರ್ವಜನಿಕದ ವಲಯದ ಕಾರ್ಮಿಕರು ಸಾಗಲು ಕಾರಣವೇನು?

ಸೂರಿ: ಬಿಜೆಪಿ ಬಂದ ನಂತರ ಲಂಗು-ಲಗಾಮಿಲ್ಲದೆ, ಲಾಭದಾಯಕ ಉದ್ದಿಮೆಗಳಿಂದ ಹಿಡಿದು ಎಲ್ಲ ಕೈಗಾರಿಕೆಗಳನ್ನು ರಭಸದಿಂದ ಖಾಸಗೀಕರಣ ಮಾಡಲು ಮುಂದಾಗಿದ್ದಾರೆ. ಪರದೇಶದ ಬಂಡವಾಳಿಗರಿಗೆ ಮಾರುಕಟ್ಟೆಯನ್ನು ತೆರೆದಿಡಲಾಗಿದೆ. ಅಲ್ಲಿಂದ ಬರುವ ಪದಾರ್ಥಗಳಿಗೆ ಸುಂಕ ಕಡಿಮೆ ಮಾಡುವ ಧೋರಣೆಯನ್ನು ಅನುಸರಿಸಲಾಗುತ್ತಿದೆ. ಅಂತರ್‌ರಾಷ್ಟ್ರೀಯ ಹಣಕಾಸು ನಿಧಿ, ವಿಶ್ವಬ್ಯಾಂಕ್ ಒತ್ತಡಕ್ಕೆ ಮಣಿದು ಅವರಆದೇಶಗಳನ್ನು ಪಾಲಿಸುತ್ತಿರುವುದರಿಂದಾಗಿ ಲಾಭದಾಯಕವಾಗಿ ನಡೆಯುತ್ತಿದ್ದ ಉದ್ದಿಮೆಗಳು ನಷ್ಟ ಹೊಂದುವ ಪರಿಸ್ಥಿತಿ ನಿರ್ಮಾಣವಾಗಿದೆ.

ಫೆಬ್ರವರಿ 2 ರಂದು ಸಾರ್ವಜನಿಕ ಕ್ಷೇತ್ರದ ಎಚ್ಚರಿಕೆ ಮುಷ್ಕರ

ಕಳೆದ ವಾರ ನವದೆಹಲಿಯಲ್ಲಿ ಸಭೆ ಸೇರಿದ್ದ ಸಾರ್ವಜನಿಕ ಕ್ಷೇತ್ರದ ಟ್ರೇಡ್ ಯೂನಿಯನ್‌ಗಳ ಸಮಿತಿ (ಸಿ.ಪಿ.ಎಸ್.ಟಿ.ಯು) ಫೆಬ್ರವರಿ 2, 2000 ರಂದು ದೇಶವ್ಯಾಪಿ ಎಚ್ಚರಿಕೆ ಮುಷ್ಕರಕ್ಕೆ ಕರೆ ನೀಡಿದೆ. ಈ ಮುಷ್ಕರ ಸಾರ್ವಜನಿಕ ಕ್ಷೇತ್ರದ ಘಟಕ-ವಿರೋಧಿ, ಕಾರ್ಮಿಕ-ವಿರೋಧಿ, ದೇಶ-ವಿರೋಧಿ ಸರ್ಕಾರಿ ನೀತಿಗಳ ವಿರುದ್ಧ ಎಚ್ಚರಿಕೆ ಗಂಟೆಯಾಗಿದೆ.

ದೇಶದ ಸಾರ್ವಜನಿಕ ಕ್ಷೇತ್ರದ ಘಟಕಗಳನ್ನು ಮಾರಾಟಕ್ಕೆ ಇಡಲಾಗಿದೆ. ಚೆನ್ನಾಗಿ ನಡೆಯುತ್ತಿರುವ, ಲಾಭ ಮಾಡುತ್ತಿರುವ ಸಾರ್ವಜನಿಕ ಕ್ಷೇತ್ರದ ಘಟಕಗಳ ಶೇರುಗಳನ್ನು ವಿದೇಶಗಳಲ್ಲಿ ಅಗ್ಗದಲ್ಲಿ ಮಾರಲಾಗುತ್ತಿದೆ. ಸರ್ಕಾರದ ನೀತಿಗಳಿಂದಲೇ ರೋಗಗ್ರಸ್ತವಾದ ಘಟಕಗಳನ್ನು ಯಾವುದೇ ಪುನರುಜ್ಜೀವನ ಮಾಡುವ ಯಾವುದೇ ಪ್ರಯತ್ನ ಮಾಡದಿರುವ ನೀತಿಯಿಂದಾಗಿ ಅವನ್ನು ಮುಚ್ಚುವ ಪರಿಸ್ಥಿತಿಗೆ ತಳ್ಳಲಾಗುತ್ತಿದೆ. ದೇಶದ ಕೈಗಾರಿಕಾ ಪಟದಿಂದ ಸಾರ್ವಜನಿಕ ಕ್ಷೇತ್ರದ ಘಟಕಗಳನ್ನು ಅಳಿಸಿ ಹಾಕಿ, ಬಹುರಾಷ್ಟ್ರೀಯ ಕಂಪನಿಗಳ ಲೂಟಿಗೆ ದೇಶವನ್ನು ಒಡ್ಡುವ ನೀತಿಗೆ ಕಟಿಬದ್ಧವಾಗಿರುವ ಸರ್ಕಾರವನ್ನು ಸಿಪಿಎಸ್‌ಟಿಯು ಸಹಿಸುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದೆ.

ಖೋತಾ ಬಜೆಟ್ಟನ್ನು ತುಂಬಲು ಸಾರ್ವಜನಿಕ ವಲಯದ ಶೇರುಗಳನ್ನು ಅಗ್ಗದ ದರದಲ್ಲಿ ಮಾರುಕಟ್ಟೆ ದರಕ್ಕಿಂತ ಕಡಿಮೆಯಾಗಿ ಮಾರಾಟ ಮಾಡಲಾಗುತ್ತಿದೆ. ಹೆಚ್ಚೆಚ್ಚು ಪ್ರಮಾಣದಲ್ಲಿ ಖಾಸಗಿಯವರಿಗೆ ಅವಕಾಶ ಕಲ್ಪಿಸಿಕೊಡಲಾಗುತ್ತಿದೆ.

ಕೇಂದ್ರ ಸರ್ಕಾರ ನವರತ್ನವೆಂದು ಘೋಷಿಸಿದ ಉದ್ದಿಮೆಗಳಲ್ಲೂ ಸಹ ಶೇರುಗಳನ್ನು ಖಾಸಗಿಯವರಿಗೆ ಮಾರಾಟ ಮಾಡಿ ಕಾರ್ಖಾನೆಗಳು ರೋಗಗ್ರಸ್ಥವಾಗಲು, ನಷ್ಟಹೊಂದಲು ಸಹಾಯಕವಾಗಿದೆ. ಕಾರ್ಮಿಕರ ಹಕ್ಕುಗಳಿಗೆ ಚ್ಯುತಿ ಬಂದಿದೆ.



ಸಮಾನ ಅವಕಾಶ, ಸಮಾನ ಹಕ್ಕುಗಳು

ಸಾರ್ವಜನಿಕ ವಲಯದ ಉದ್ದಿಮೆಗಳು ಅಳಿದಾವೋ? ಉಳಿದಾವೋ? ಎನ್ನುವಂತಾಗಿದೆ. ಸಾರ್ವಜನಿಕ ವಲಯದ ಉದ್ದಿಮೆಗಳ ಅಸ್ತಿತ್ವವೇ ಅಲುಗಾಡುವಂತಾಗಿದೆ.

ಜೊತೆಗೆ ಕೇಂದ್ರ ಸರ್ಕಾರ ಸಾರ್ವಜನಿಕ ವಲಯವನ್ನು ಅಭಿವೃದ್ಧಿ ಪಡಿಸಲು ಸಹಾಯಧನ ಹಿಂದೆ ಪಡೆದಿದೆ. ಸರ್ಕಾರದ ಧೋರಣೆಯಿಂದಾಗಿ ರೋಗಗ್ರಸ್ತ ಕಾರ್ಖಾನೆಗಳ ಪುನರುಜ್ಜೀವನ ಕ್ರಮ ಇಲ್ಲವಾಗಿದೆ. ಚಿದಂಬರಂ ಹಣಕಾಸು ಮಂತ್ರಿಯಾಗಿದ್ದಾಗ ಗ್ಯಾಸ್ ಇಂಡಿಯಾ ಕಂಪನಿಯ ಶೇರುಗಳನ್ನು, ಖಾಸಗೀಯವರು ಕೇಳಿದಾಗ 100 ರೂಪಾಯಿಗಳು ಸಾಲದು ಕೊಡುವುದಿಲ್ಲವೆಂದು ಹೇಳಲಾಗಿತ್ತು. 10,000 ಕೋಟಿ ರೂಪಾಯಿಗಳ ಖೋತಾ ಬಜೆಟ್ ತುಂಬಲು ಈಗ ಅದೇ ಶೇರುಗಳನ್ನು 70 ರೂಪಾಯಿಗಳಿಗೆ ಕೊಡಲಾಗಿದೆ.

ಮುಕುಂದ್ ಸ್ಟೀಲ್ ಕಂಪನಿಯನ್ನು ಬಹಳ ಕಮ್ಮಿ ಹಣಕ್ಕೆ ಬಿಟ್ಟುಕೊಟ್ಟಿದ್ದಾರೆ. ದೇಶದ ವಿಮಾನ ನಿಲ್ದಾಣಗಳನ್ನು ಸಹ ಖಾಸಗಿಯವರಿಗೆ ಕೊಡುವುದಾಗಿ ಪ್ರಧಾನಿ ಹೇಳಿದ್ದರೆ.

ಚುನಾವಣೆಗೆ ಮುಂಚೆ ಬಂಡವಾಳಿಗರೆಲ್ಲ ಸೇರಿ ಬಿಜೆಪಿ ಪ್ರಧಾನಿಗೆ ಮನವಿಯೊಂದನ್ನು ಸಲ್ಲಿಸಿದ್ದರು. - ಖಾಸಗೀಕರಣ - ಬಂಡವಾಳ ಖಾಸಗಿಯವರಿಗೆ, ಕಾರ್ಮಿಕ ಕಾನೂನುಗಳ ಬದಲಾವಣೆ (ಮಾಲೀಕರ ಪರವಾಗಿ) - ಜೀವವಿಮೆ ಖಾಸಗೀಕರಣ ಮುಂತಾದ ಬೇಡಿಕೆಗಳು ಅದರಲ್ಲಿದ್ದವು.

ಅಧಿಕಾರಕ್ಕೆ ಬಂದರೆ ಕಾರ್ಯಗತ ಮಾಡುವುಧಾಗಿ ಪ್ರಧಾನಿ ಭರವಸೆ ನೀಡಿದ್ದರು. ಅದಕ್ಕನುಗುಣವಾಗಿ ಲೋಕಸಭೆಯ ಪ್ರಥಮ ಅಧಿವೇಶನದಲ್ಲಿ ತರಾತುರಿಯಲ್ಲಿ ಜೀವವಿಮೆ ಖಾಸಗೀಕರಿಸುವ ನಿರ್ಣಯ ಮಂಡನೆ ಮಾಡಲಾಯಿತು. ಇದನ್ನು ಅಂಗೀಕರಿಸಲು ಕಾಂಗ್ರೆಸ್ ಕೂಡ ಜೊತೆಗೆ ಸೇರಿದ್ದರಿಂದ ಈ ಕಾನೂನಾಗಲು ಸಾಧ್ಯವಾಯಿತು. ಇದರ ವಿರುದ್ಧ ಕಾರ್ಮಿಕರು ಅಧಿಕಾರಿಗಳು ದೇಶವ್ಯಾಪಿ ಮುಷ್ಕರ ನಡೆಸಿದರು. ಖಾಸಗೀಕರಣ ವಿರೋಧಿಸಿ ಒಂದೂವರೆ ಕೋಟಿ ಸಹಿ ಸಂಗ್ರಹ ಮಾಡಿ ಮನವಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಯಿತು. ಆದರೆ ವಾಜಪೇಯಿ ನೇತೃತ್ವದ ಎನ್.ಡಿ.ಎ. ಸರ್ಕಾರ ದೇಶೀಯ ಪರದೇಶೀಯ ಬಂಡವಾಳಿಗರ ಆದೇಶದಂತೆ ನಡೆಯಿತು. ನೌಕರರ ಹೋರಾಟವನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲ. ಈ ಹಿನ್ನೆಲೆಯಲ್ಲಿ ಮುಷ್ಕರ ನಡೆಯಲಿದೆ.

ಆದ್ದರಿಂದ ನಮ್ಮ ದೇಶದ ಸಾರ್ವಜನಿಕ ಉದ್ದಿಮೆಗಳ 20 ಲಕ್ಷ ಕಾರ್ಮಿಕರು ಇಂತಹ ನೀತಿಗಳ ವಿರುದ್ಧ ಹೋರಾಟಕ್ಕೆ ಮುಂದಾಗಿದ್ದಾರೆ. ಅನಿರ್ದಿಷ್ಟ ಮುಷ್ಕರಕ್ಕೆ ಇಳಿಯುತ್ತಿದ್ದಾರೆ.

ಪ್ರ : ಮುಷ್ಕರದ ತಯಾರಿಯು ಬಗ್ಗೆ ವಿವರಿಸುತ್ತೀರಾ?

ಸೂರಿ: ಮುಷ್ಕರಕ್ಕೆ ಸಂಬಂಧಿಸಿ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರಿಂದ ರಾಷ್ಟ್ರಾದ್ಯಾಂತ ಮತ ಸಂಗ್ರಹ ಮಾಡಲಾಗಿದೆ.

ಡಿಸೆಂಬರ್ 16 ರಂದು ನವದೆಹಲಿಯಲ್ಲಿ ಸೇರಿದ್ದ ಸಿಪಿಎಸ್‌ಟಿಯುವಿನ ವಿಸ್ತೃತ ಸಭೆಯಲ್ಲಿ ಈ ತೀರ್ಮಾನವಾಗಿತ್ತು. ಅದರಂತೆಯೇ ಜನವರಿ 11 ರಂದು ರಾಷ್ಟ್ರಾದ್ಯಂತ ಮತ ಸಂಗ್ರಹ ನಡೆದಿದೆ.

ಸಿಪಿಎಸ್‌ಟಿಯು ಹಿಂದೆ ಒಂದು, ಎರಡು, ಮೂರು ದಿನಗಳ ಮುಷ್ಕರ ಮಾಡಿ ಪರಿಣಾಮಕಾರಿಯಾಗದೇ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಲು ನೇರವಾದ ಕಾರ್ಯಕ್ರಮಕ್ಕೆ ಇಳಿಯಲಾಗುತ್ತಿದೆ.

ಸಾರ್ವಜನಿಗ ಉದ್ದಿಮೆಗಳ ಕಾರ್ಮಿಕರ ಜನಮತ ಸಂಗ್ರಹದ ಉದ್ದೇಶದಿಂದಲೇ ಅನಿರ್ದಿಷ್ಟ ಮುಷ್ಕರವನ್ನು ಮಾಡಲಾಗುತ್ತದೆ. ಅನಿರ್ದಿಷ್ಟ ಮುಷ್ಕರಕ್ಕೆ ಮುಂಚೆಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೋಟಿಸಾಗಿ ಒಂದು ದಿನ ಮುಷ್ಕರ ನಡೆಸಲಾಗುವುದು.

ಕಲ್ಲಿದ್ದಲು ಉದ್ದಿಮೆಯಲ್ಲಿ 'ಇಂಟಕ್' ಸಹ ಖಾಸಗೀಕರಣದ ವಿರುದ್ಧ ಹೋರಾಟಕ್ಕೆ ಮುಂದೆ ಬಂದಿದೆ. ಪೋರ್ಟ್ ಅಂಡ್ ಡಾಕ್ ಕಾರ್ಮಿಕರು ಈಗಾಗಲೇ ಜ 18 ರಿಂದ ಕೈಗಾರಿಕಾ ಮುಷ್ಕರದ ನೋಟಿಸ್ ಜಾರಿ ಮಾಡಿದ್ದಾರೆ. ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ಒಪ್ಪಂದದ ಅವಧಿ ಮುಗಿದು ಮೂರು ವರ್ಷಗಳಾಗಿದ್ದರೂ ಹೊಸ ಒಪ್ಪಂದ ಆಗಿಲ್ಲ. ಕೇಂದ್ರ ಸರ್ಕಾರ ಸಾರ್ವಜನಿಕ ಉದ್ಯಮದ ನಿರ್ದೇಶಕರ(ಡಿಪಿಇ) ನಿರ್ದೇಶನದ ಪ್ರಕಾರ ಮಾತ್ರ ಒಪ್ಪಂದ ಮಾಡುತ್ತೇವೆಂದು ಹೇಳುತ್ತಿದೆ. ಆಡಳಿತ ಮಂಡಳಿಗಳು ಅದೇ ರೀತಿ ಮಾಡುತ್ತಿವೆ.

ಕೇಂದ್ರ ಸರ್ಕಾರ ನೇಮಿಸಿದ್ದ ಹಾಗೂ ಅದರ ಇಚ್ಛೆಯಂತೆ ಅತ್ಯಂತ ಕಾರ್ಮಿಕ ವಿರೋಧಿ ಶಿಫಾರಸುಗಳನ್ನು ಮಾಡಿರುವ ಮೋಹನ್ ಕಮಿಷನ್ ಷರತ್ತುಗಳನ್ನು ಜಾರಿಗೆ ತರಲು ಸರ್ಕಾರ ಮುಂದಾಗಿದೆ.

ಶರತ್ತುಗಳು ಈ ರೀತಿಯಾಗಿವೆ.

1. ಒಪ್ಪಂದದ ಅವಧಿ 10 ವರ್ಷಕ್ಕೆ ಹೋಗಬೇಕು.
2. ಬಡ್ತಿಯನ್ನು ಶೇಕಡಾವಾರಾಗಿ ಕೊಡಬಾರದು
3. ಸಾರ್ವಜನಿಕರ ಮೇಲೆ ಹೊರೆ ಬೀಳಲಾರದಂತೆ ಕಾರ್ಮಿಕರಿಗೆ ವೇತನ ನೀಡಬೇಕು
4. ಕೇಂದ್ರ ಸರ್ಕಾರದಿಂದ ಸಹಾಯ ತೆಗೆದುಕೊಳ್ಳಬಾರದು


ಸಾರ್ವಜನಿಕ ಉದ್ದಿಮೆಗಳು ದೇಶದ ಉತ್ಪಾದನೆಯನ್ನು ನಿರ್ಧರಿಸುವ ವಲಯವಾಗಬೇಕೆಂಬ (Commanding rights) ಘನ ಉದ್ದೇಶದಿಂದ 1947 ರಲ್ಲಿ ಇವುಗಳ ಪ್ರಾರಂಭಕ್ಕೆ ಮುಂದಾಗಲಾಯಿತು.

ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮ ದೇಶದಲ್ಲಿ ಸಾರ್ವಜನಿಕ ವಲಯವೆಂಬುದು ಇರಲಿಲ್ಲ. ಘನ ಕೈಗಾರಿಕೆಗಳು ಅಂದು ಕನಸಾಗಿದ್ದವು. ಬ್ಯಾಂಕ್, ಜೀವವಿಮೆ ಖಾಸಗಿಯವರ ಕೈಯಲ್ಲಿದ್ದವು. ದೇಶವನ್ನಾಳುತ್ತಿದ್ದ ಸಾಮ್ರಾಜ್ಯಶಾಹಿಗಳಿಗೆ ಕೈಗಾರಿಕೀಕರಣ ಮಾಡುವ ಉದ್ದೇಶ ಇರಲಿಲ್ಲ. ಇಲ್ಲಿಂದ ಕಚ್ಚಾ ಪದಾರ್ಥಗಳನ್ನು ಪೂರೈಸಿಕೊಂಡು ಸುಲಿಗೆ ಮಾಡುವ ಉದ್ದೇಶ ಮಾತ್ರವೇ ಅವರಲ್ಲಿತ್ತು.

ಸ್ವಾತಂತ್ರ್ಯ ನಂತರ ಬಂದ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿಯೂ ಸಹ ಸಾರ್ವಜನಿಕ ಉದ್ದಿಮೆಗಳ ಸ್ಥಾಪನೆಗೆ ಉತ್ತೇಜನ ಇರಲಿಲ್ಲ.

ಜವಾಹರ್ ಲಾಲ್ ನೆಹರೂರವರು ಸೋವಿಯತ್ ಒಕ್ಕೂಟದ ಸಮಾಜವಾದಿ ಪದ್ಧತಿಯಿಂದ ಸ್ಫೂರ್ತಿಗೊಂಡರು. ಅವರ ರೀತಿಯೇ ನಮ್ಮಲ್ಲೂ ಸಹ ಪಂಚವಾರ್ಷಿಕ ಯೋಜನೆಗಳನ್ನು ಅಳವಡಿಸಿಕೊಂಡು ಅವರ ಮಾದರಿಯಲ್ಲೇ ಕೈಗಾರಿಕಾ ಬೆಳವಣಿಗೆ ಸಾಧಿಸಬೇಕೆಂದು ಮನಸ್ಸು ಮಾಡಿದರು.

ಕೈಗಾರಿಕೆಗಳಿಗೆ ಒತ್ತು ನೀಡುವುದು ದೇಶದ ಸ್ವಾವಲಂಬನೆಯನ್ನು ಸಾಧಿಸುವುದು, ಉದ್ಯೋಗಾವಕಾಶಗಳನ್ನು ಸೃಷ್ಟಿ ಮಾಡುವುದು ಅವರ ಅಂದಿನ ಉದ್ದೇಶಗಳಾಗಿದ್ದವು. ಈ ನಿಟ್ಟಿನಲ್ಲಿ ಘನ ಕೈಗಾರಿಕೆಗಳ ಸ್ಥಾಪನೆಗೆ ಮುಂದಾದಾಗ ಮೊದಲು ಬಂಡವಾಳಶಾಹಿ ರಾಷ್ಟ್ರಗಳಿಗೆ ದೂತರನ್ನು ಕಳುಹಿಸಿ ನೆರವು, ಸಹಕಾರ ನಿರೀಕ್ಷಿಸಲಾಯಿತು. ಆದರೆ ಬಂಡವಾಳಶಾಹಿ, ಸಾಮ್ರಾಜ್ಯಶಾಹಿ ದೇಶಗಳ ಕಡೆಯಿಂದ ಸಕಾರಾತ್ಮಕ ಪ್ರತಿಕ್ರಿಯೆ ಬರಲಿಲ್ಲ. ಬದಲಿಗೆ ಅವರು ನಿಮ್ಮ ದೇಶದಲ್ಲಿ ಕುಶಲ ಕಾರ್ಮಿಕರಿಲ್ಲ. ನುರಿತ ತಂತ್ರಜ್ಞರಿಲ್ಲ, ಹೇರಳವಾದ ವ್ಯವಸಾಯ ಅವಲಂಬನೆ ಇದೆ ವ್ಯವಸಾಯನ್ನೇ ಅಭಿವೃದ್ಧಿ ಪಡಿಸಿ ಮುಂದುವರಿಸಿ, ಅಭಿವೃದ್ಧಿಗೆ ಅಗತ್ಯವಿರುವ ಕೈಗಾರಿಕಾ ಪದಾರ್ಥಗಳನ್ನು, ಇತರೆ ಅವಶ್ಯಕ ಕೈಗಾರಿಕಾ ಸಾಮಗ್ರಿಗಳನ್ನು ನಮ್ಮ ಬಳಿ ಖರೀದಿಸಿ ನಾವು ಪೂರೈಸುತ್ತೇವೆಂದು ತಿಳಿಸಿ ವಾಪಸ್ಸು ಕಳಿಸಿದರು. ಸಾಮ್ರಾಜ್ಯಶಾಹಿಗಳ ಈ ಅಭಿಪ್ರಾಯವನ್ನು ಒಪ್ಪಲಿಲ್ಲ. ನಂತರ ಅವರ ನೆಹರು ಗಮನ ಸೋವಿಯತ್ ಯೂನಿಯನ್ನಿನ ಕಡೆ ಸೆಳೆಯಿತು. ಅವರ ಸಹಕಾರದೊಂದಿಗೆ, ಉಪಕಾರ್ಖಾನೆಗಳು, ತೈಲ ಕಾರ್ಖಾನೆ, ಯಂತ್ರೋಪಕರಣ, ಇಂಜಿನಿಯರಿಂಗ್ ಕಾರ್ಖಾನೆಗಳು ಮುಂತಾದವು ಸ್ಥಾಪನೆ ಗೊಂಡವು. ಇದರಿಂದ ಜರ್ಮನಿ, ಬ್ರಿಟನ್‌ನಂತಹ ಬಂಡವಾಳ ಶಾಹಿ ರಾಷ್ಟ್ರಗಳು ಗಾಬರಿಗೊಂಡವು ಸಹ.



ದೇಶದ ಕೈಗಾರಿಕಾ ಅಭಿವೃದ್ಧಿಗೆ ಹಣಕಾಸು ಒದಗಿಸಲು. ಅಂದಿನ ಬಂಡವಾಳಿಗರಲ್ಲಿ ಹಣದ ಕೊರತೆಯಿತ್ತು. ಜೊತೆಗೆ ಬಂಡವಾಳ ತೊಡಗಿಸಿದರೆ ವಾಪಸ್ಸು ಬರಲು, ಲಾಭ ತರಲು ಕಾಲ ಹಿಡಿಯುತ್ತದೆ, ಹೀಗಾಗಿ ಇವುಗಳ ಸ್ಥಾಪನೆಯನ್ನು ಸರ್ಕಾರವೇ ಮಾಡಲಿ, ಗುತ್ತಿಗೆ ಕೆಲಸ ನಮಗೆ ಕೊಡಲಿ ಎಂದು ತೀರ್ಮಾನಿಸಿದರು. ಕೈಗಾರಿಕಾ ಅಭಿವೃದ್ಧಿಗೆ ಹಣಕಾಸು ಒದಗಿಸಿಲು ಬ್ಯಾಂಕ್, ಜೀವ ವಿಮೆಗಳನ್ನು ರಾಷ್ಟ್ರೀಕರಣ ಮಾಡಲಾಯಿತು. ಸರ್ಕಾರಿ ಸ್ವಾಮ್ಯಕ್ಕೆ ತರಲಾಯಿತು. ಈ ಮೂಲಕ ಉಕ್ಕು, ವಿದ್ಯುಚ್ಛಕ್ತಿ ಮುಂತಾದ ಘನ ಕೈಗಾರಿಕೆಗಳನ್ನು ಸರ್ಕಾರ ಸ್ಥಾಪನೆ ಮಾಡಿತು. ಅಂದು ರಾಜಗೋಪಾಲಚಾರಿಯವರ ಸ್ವತಂತ್ರ ಪಾರ್ಟಿ ಬ್ಯಾಂಕ್ ವಿಮೆಗಳ ರಾಷ್ಟ್ರೀಕರಣವನ್ನು ವಿರೋಧಿಸಿತ್ತು. ಗಮನಿಸಬೇಕಾದ ಅಂಶವೆಂದರೆ ಪ್ರಾರಂಭದಲ್ಲಿ ಸರ್ಕಾರದ ಸ್ವಾಮ್ಯದಲ್ಲೇ ಘನ ಕೈಗಾರಿಕೆಗಳ ಸ್ಥಾಪನೆಯಾಗಲಿ ಎಂದ ದೇಶೀಯ ಬಂಡವಾಳಶಾಹಿ ಐವತ್ತು ವರ್ಷಗಳ ಸ್ವತಂತ್ರ ಭಾರತದಲ್ಲಿ ಜನತೆಯನ್ನು, ಕಾರ್ಮಿಕರನ್ನು ದೋಚಿ, ತಮ್ಮ ಬಂಡವಾಳವನ್ನು ಅಪಾರ ಪ್ರಮಾಣದಲ್ಲಿ ವೃದ್ಧಿಸಿಕೊಂಡು ಇಂದು ಸಾರ್ವಜನಿಕ ಘನ ಕೈಗಾರಿಕೆಗಳನ್ನು, ಉದ್ದಿಮೆಗಳನ್ನು ನಮಗೇ ವಹಿಸಿಕೊಡಬೇಕೆಂದು ಸರ್ಕಾರವನ್ನು ಜಗ್ಗುತ್ತಿದ್ದಾರೆ.

...ಉದ್ಯಮಗಳು (ಕೇಂದ್ರ ...ಮಹತ್ವದ ನಿರ್ಣಯ ...ನೆಯ ಹೊಣೆ ಹೊರುವ ...ದ 20 ಲಕ್ಷ ಕಾರ್ಮಿಕರು ...ನಿರ್ದಿಷ್ಟ ಕಾಲ ಮುಷ್ಕರ ...ಸಂವಾದ ನಡೆದು ದೇಶಾದ್ಯಂತ ಕಾರ್ಮಿಕರು ತೆಗೆದುಕೊಂಡ ತೀರ್ಮಾನವನ್ನು ಇಡೀ ...ನವನ್ನು ಮುಖಪುಟದ ಮೊದಲ ತಲೆಬರಹವಾಗಬೇಕಾದ ಮಹತ್ವದ ತೀರ್ಮಾನವನ್ನು ...ನಿಂದ ಮುಚ್ಚಿಟ್ಟಿವೆ.

...ಭಾಗವಾಗಿ ದೇಶದ ದುಡಿಯುವ ಜನ 52 ವರ್ಷ ನೀಡಿದ ತಂಗೆಯಿಂದ ಕೈಗಾರಿಕೆಗಳು ...ಗೆ ಅಗ್ಗಕ್ಕೆ ಮಾರುವ ಕುತಂತ್ರವನ್ನು ವಿರೋಧಿಸುವ ನಿರ್ಧಾರವದು. ಖಾಸಗೀಕರಣ, ...ಗುತ್ತಿರುವ ರಣ ಕಹಳೆಯಿದು. ಇದೇ ನೀತಿಗಳಿಂದ ಬಾಧಿತರಾಗಿ ಹಣ್ಣಾಗುಡುತ್ತಿರುವ ...ತರೆಲ್ಲಾ ದುಡಿಯುವ ಜನಕ್ಕೆ ಇದು ಹರ್ಷ ಸುದ್ದಿ. ಈ ಸುದ್ದಿ 'ದುಡಿಯುವ ಜನರ ಪ್ರಾಣ ...ರಂಗದ ಮೂಲಕ ಜನರನ್ನು ಮುಟ್ಟಲಿ ಅವರ ಮನಸ್ಸಿನಲ್ಲಿ ಮೂಡಿ ಬೆಳೆಯಲಿ.

...ಐಟಿಯು ಅಧ್ಯಕ್ಷರೂ, ಬಿಇಎಲ್, ಬಿಹೆಚ್ಇಎಲ್, ಕಾರ್ಮಿಕ ಸಂಘಗಳ ಅಧ್ಯಕ್ಷರೂ ...ಸೂರ್ಯನಾರಾಯಣ ರಾವ್ ರವರು 'ಐಕ್ಯರಂಗ'ದ ಪ್ರತಿನಿಧಿ ಪ್ರಭಾರವರೊಡನೆ ...ದರ್ಶನದಲ್ಲಿ ಸಾರ್ವಜನಿಕ ಉದ್ಯಮದ ಕಾರ್ಮಿಕರ ಈ ರಣಕಹಳೆಗೆ ಧ್ವನಿ ನೀಡಿದ್ದಾರೆ.

ಇಂತಹ ಷರತ್ತು ಜಗತ್ತಿನಲ್ಲೇ ಇಲ್ಲ. ಇದನ್ನು ...ರ್ವಜನಿಕ ವಲಯದ ಕಾರ್ಮಿಕರು ಒಪ್ಪಿಕೊಳ್ಳಲು ...ಧ್ಯವೇ ಇಲ್ಲ ಆದ್ದರಿಂದ ಮೇಲ್ಕಂಡ ಅಂಶಗಳನ್ನು ...ಳಗೊಂಡೇ ಮತ ಸಂಗ್ರಹಣೆ ನಡೆದಿದೆ.

ಜನವರಿ 11 ರಂದು ಮುಷ್ಕರ ಬೇಕೋ ಅಥವಾ ...ಡವೋ ಎಂದು ಕೇಳಿ ಸಾರ್ವಜನಿಕ ಉದ್ದಿಮೆಗಳ ...ರ್ಮಿಕರಲ್ಲಿ ಮತ ಸಂಗ್ರಹಣೆ ಮಾಡಿದ್ದು ಕೆಳಕಂಡ ...ಂಶಗಳ ಮೇಲೆ

- ಖಾಸಗೀಕರಣಕ್ಕೆ ವಿರೋಧ
- ಶೇರು ಬಂಡವಾಳ ಮೂಲಕ ಖಾಸಗೀಕರಣಕ್ಕೆ ...ರೋಧ
- ಮೋಹನ್ ಕಮಿಟಿ ಶಿಫಾರಸ್ಸಿಗೆ ವಿರೋಧ
- ಡಿ...ಇ ಮಾರ್ಗದರ್ಶಿಗೆ ವಿರೋಧ
- ಎರಡನೇ ಕಾರ್ಮಿಕ ಆಯೋಗಕ್ಕೆ ವಿರೋಧ
- 10 ವರ್ಷದ ಒಪ್ಪಂದಕ್ಕೆ ವಿರೋಧ
- ರೋಗಗ್ರಸ್ತ ಕಾರ್ಖಾನೆಗಳ ಮುಚ್ಚುವಿಕೆಗೆ ವಿರೋಧ

ಇವು ಮತಸಂಗ್ರಹದ ವಿಷಯಗಳು. ಪರವಾಗಿದ್ದರೆ ...ಹೌದು, ವಿರೋಧವಾಗಿದ್ದರೆ ಇಲ್ಲ ಎಂದು ...ಮೂದಿಸಲು ಕೋರಲಾಗಿತ್ತು. ಶೇ 90 ಕ್ಕೆ ಹೆಚ್ಚು ...ರ್ಮಿಕರು ಇದರ ಪರವಾಗಿ ಮತ ಚಲಾಯಿಸಿದ್ದಾರೆ.

ಕಾರ್ಮಿಕರಲ್ಲಿ ಇನ್ನೂ ಹೆಚ್ಚಾಗಿ ಹೋರಾಟದ ...ಮನೋಭಾವ ತುಂಬಲು ದ್ವಾರಸಭೆಗಳು, ಕಾರ್ಯಕಾರಿ ...ಸಮಿತಿ ಸಭೆಗಳು, ಹಸ್ತಪ್ರತಿಗಳು ಹಂಚುವಿಕೆ ಮುಂತಾಗಿ ...ತಯಾರಿ ನಡೆದಿದೆ.

ನಮ್ಮ ರಾಜ್ಯದಲ್ಲಿ 'ಜಂಟಿ ಕ್ರಿಯಾ ಸಮಿತಿ' ಸಭೆ ...ನಡೆಸಿ ಹೋರಾಟ ರೂಪಿಸಿದೆ. ಹೋರಾಟವನ್ನು ...ಪುಷ್ಟೀಕರಿಸಲು ಸಿಐಟಿಯು ವಿಸ್ತೃತ ಸಮಾವೇಶವನ್ನು ...ಮಾಡಿದೆ. ಹೋರಾಟಕ್ಕೆ ಪೂರ್ಣ ಬೆಂಬಲ ಸೂಚಿಸಿದೆ.

ಜನವರಿ 9 ರಂದು ನಡೆದ ವಿಸ್ತೃತ ಸಭೆಯಲ್ಲಿ ...ಹೆಚ್.ಎ.ಎಲ್., ಬಿ.ಇ.ಎಲ್., ಬಿ.ಹೆಚ್.ಇ.ಎಲ್., ...ಬಿಇಎಂಎಲ್ ಇತರೆ ಸಾರ್ವಜನಿಕ ವಲಯದ ...ಕಾರ್ಮಿಕರು ಭಾಗವಹಿಸಿದ್ದರು. ಸಿಐಟಿಯು, ...ಸಾರ್ವಜನಿಕ ವಲಯದ ಒಕ್ಕೂಟದ ಹೆಸರಿನಲ್ಲಿ ಕರಪತ್ರ ...ಹಂಚಿದೆ.

ಪ್ರ: ಮುಷ್ಕರದ ತೀರ್ಮಾನಕ್ಕೆ ಅಡ್ಡಿ ...ಆತಂಕಗಳಿಲ್ಲವೇ?

ಸೂರಿ: ಏತನ್ಮಧ್ಯೆ, ಬಿಜೆಪಿ ಒತ್ತಡದಿಂದಾಗಿ ...ಹೆಚ್.ಎ.ಎಲ್. ಮುಖಂಡರು 10 ವರ್ಷದ ಅವಧಿಯ ...ಒಪ್ಪಂದವನ್ನು ಮಾಡಲು ಪ್ರತಿಭಟಿಸಿ ಮುಖಂಡರ ಬಗ್ಗೆ

ಬಿ.ಇ.ಎಲ್. ನಲ್ಲಿ ಬಿಎಂಎಸ್ ಸಂಘದವರು ಒಪ್ಪಂದಕ್ಕೆ ಮುಂದಾಗಿದ್ದರು. ಕುದುರೆಮುಖದಲ್ಲಿ ಬಿಎಂಎಸ್ ಮೋಹನ್ ಕಮಿಷನ್‌ನ 10 ವರ್ಷದ ಒಪ್ಪಂದದ ಶಿಫಾರಸ್ಸಿಗೆ ಒಪ್ಪಿ ಒಪ್ಪಂದ ಮಾಡಿಕೊಂಡಿದ್ದಾರೆ.

ಪ್ರ: ವಿವಿಧ ಕಾರ್ಖಾನೆಗಳಲ್ಲಿ ಮುಷ್ಕರಕ್ಕೆ ಕಾರ್ಮಿಕರ ಪ್ರತಿಕ್ರಿಯೆ ಹೇಗೆ?

ಮತ ಸಂಗ್ರಹಿಸಲು ಸಿಐಟಿಯು, ಜೆಎಫ್, ಸಿಪಿಎಸ್‌ಟಿಯು ಇವುಗಳಿಂದ ಏನೇನು ಪ್ರಯತ್ನ ಆಗಿದೆ?

ಸೂರಿ: ಸಿಐಟಿಯು, ಎಐಟಿಯುಸಿ, ಯೂನಿಟಿ ಫೋರಂ ಸಾರ್ವಜನಿಕ ಕೈಗಾರಿಕೆಗಳ ಕಾರ್ಮಿಕ ಸಂಘಗಳ ಸಮಿತಿ, ಜಂಟಿ ಕ್ರಿಯಾ ಸಮಿತಿ ಕಾರ್ಯಕ್ರಮ ಮಾಡಲು ತೀರ್ಮಾನ ಮಾಡಿ ಪ್ರಚಾರಕ್ಕೆ ಮುಂದಾಗಿದೆ. ಬಿಇಎಲ್‌ನ 4 ಸಂಘಗಳ ಪೈಕಿ ಮೂರು ಮುಷ್ಕರದ ಪರವಾಗಿವೆ. ದ್ವಾರ ಸಭೆಯಲ್ಲಿ ಸಿಐಟಿಯು ಹಾಗೂ ಯೂನಿಟಿ ಫೋರಂ ಮುಖಂಡರು ಮಾತನಾಡಿ ಹೋರಾಟದ ಮನೋಭಾವ ತುಂಬಲಾಗಿ ಬಿಎಂಎಸ್ ಧೋರಣೆಯ ಬಗ್ಗೆ ಕಾರ್ಮಿಕರಲ್ಲಿ ತಾತ್ಸರ ವ್ಯಕ್ತಗೊಂಡಿದೆ. ಬಿಇಎಲ್‌ನಲ್ಲಿ 152 ಕಾರ್ಮಿಕರು ಮಾತ್ರ ಮುಷ್ಕರಕ್ಕೆ ವಿರೋಧಿಸಿದ್ದಾರೆ.

ಬಿಹೆಚ್ಇಎಲ್‌ನ 52 ಕಾರ್ಮಿಕರು ಖಾಲಿ ಚೀಟಿ ಹಾಕಿದ್ದಾರೆ. ದ್ವಾರಸಭೆಯಲ್ಲಿ ಎಲ್ಲರೂ ಉತ್ಸಾಹದಿಂದ ಪಾಲ್ಗೊಂಡಿದ್ದರು. ಮಹಿಳಾ ಕಾರ್ಮಿಕರು ಸಹ ಅದೇ ಉತ್ಸಾಹದಲ್ಲಿದ್ದರು. 92 ಕಾರ್ಮಿಕರು ಮಾತ್ರ ಮುಷ್ಕರದ ವಿರುದ್ಧ ಮತಹಾಕಿದ್ದಾರೆ.

ಒಪ್ಪಂದದ ಬಗ್ಗೆ ಹೆಚ್‌ಎಎಲ್ ನಲ್ಲಿ ಮತಸಂಗ್ರಹ ಮಾಡಲಾಗಿ 9 ಸಾವಿರ ಕಾರ್ಮಿರು ಭಾಗವಹಿಸಿದ್ದರು. ಹೆಚ್ಚಿನ ಸಂಖ್ಯೆಯ ಕಾರ್ಮಿಕರು ಹೋರಾಟ ಬೇಕೆಂದಿದ್ದಾರೆ. ನಿಖರವಾದ ಅಂಕಿ ಅಂಶಗಳು ಅಲ್ಲಿಂದ ತಿಳಿದುಬಂದಿಲ್ಲ. ಕಾರಣ ಮತಚೀಟಿಯ ಎಣಿಕೆ ಇನ್ನೂ ಆಗಿಲ್ಲ.

ಕೆಜಿಎಫ್ ನ ಬಿಇಎಂಎಲ್ ನ ಆರು ಸಾವಿರ ಕಾರ್ಮಿಕರಲ್ಲಿ 7 ಜನ ಮಾತ್ರ ಮುಷ್ಕರ ಹೋರಾಟ ಬೇಡವೆಂದಿದ್ದಾರೆ. ಬೆಂಗಳೂರು, ಮೈಸೂರುಗಳ ಬಿಇಎಂಎಲ್‌ನಲ್ಲಿ 90 ಕ್ಕೂ ಹೆಚ್ಚು ಕಾರ್ಮಿಕರು ಮುಷ್ಕರದ ಪರವಾಗಿ ಮತ ಚಲಾವಣೆ ಮಾಡಿದ್ದಾರೆ.

ಭಾರತ ದೂರವಾಣಿ ಕಾರ್ಖಾನೆಯಲ್ಲಿ ನೂರಕ್ಕೆ 90 ಕಾರ್ಮಿಕರು ಮುಷ್ಕರದ ಪರವಾಗಿ ಮತಹಾಕಿದ್ದಾರೆ. ...ಸಾತ್ವಲ ಜಂಟಿ ಕ್ರಿಯಾ ಸಮಿತಿ ಪುನಃ ಸೇರಿ

ರಾಷ್ಟ್ರಮಟ್ಟದ ಫೆ 2 ರ ಎಚ್ಚರಿಕೆ ಮುಷ್ಕರ' ಕ್ಕೆ ಆಡಳಿತ ವರ್ಗಕ್ಕೆ ನೋಟೀಸ್ ನೀಡುವ ತೀರ್ಮಾನವನ್ನು ಜನವರಿ 17 ರಂದು ಮಾಡಲಿದೆ.

ಹೀಗೆ ಒಂದೆರಡು ಉದಾಹರಣೆ ಬಿಟ್ಟರೆ ಇಡೀ ಕಾರ್ಮಿಕ ವರ್ಗ ಶೇ 95 ಕ್ಕಿಂತ ಹೆಚ್ಚು ಮುಷ್ಕರದ ಪರವಾಗಿ ಮತ ಚಲಾಯಿಸಿದ್ದಾರೆ. ಮುಷ್ಕರಕ್ಕೆ ಸಂಬಂಧಿಸಿ ಮತ ಸಂಗ್ರಹ ನಡೆಸಿದ ಚೀಟಿಗಳನ್ನು ಕ್ರೋಢೀಕರಿಸಿ ಕೇಂದ್ರ ಸರ್ಕಾರಕ್ಕೆ ರವಾನೆ ಮಾಡಲಾಗುವುದು.

ಇತ್ತೀಚೆಗೆ ಸಾರ್ವಜನಿಕ ಕೈಗಾರಿಕೆಗಳ ಕಾರ್ಮಿಕರು ದೀರ್ಘ ಕಾಲದ ಹೋರಾಟಕ್ಕೆ ಅಳವಡಿಸಿಕೊಳ್ಳುತ್ತಿರುವುದು ಹೋರಾಟದ ಮನೋಭಾವದ ದಿಕ್ಸೂಚಿಯಾಗಿದೆ. ಮುಂದಿನ ದಿನಗಳಲ್ಲಿ ಹೋರಾಟ ತೀವ್ರಗೊಳ್ಳಲಿದೆ.

ಪ್ರ- ಅನಿರ್ದಿಷ್ಟ ಮುಷ್ಕರವಾದರೆ ದೇಶದ ಆರ್ಥಿಕದ ಮೇಲಾಗುವ ಪರಿಣಾಮಗಳ ಬಗ್ಗೆ ಹೇಳುತ್ತೀರಾ?

ಸೂರಿ: ನಾನು ಪ್ರಾರಂಭದಲ್ಲಿಯೇ ತಿಳಿಸಿದಂತೆ, ಸಾರ್ವಜನಿಕ ಉದ್ದಿಮೆಗಳು ದೇಶದ ಆರ್ಥಿಕದ ಜೀವನಾಡಿ. ಸಾರ್ವಜನಿಕ ವಲಯದ ಕಾರ್ಮಿಕರು ಅನಿರ್ದಿಷ್ಟ ಮುಷ್ಕರ ಆರಂಭಿಸಿದರೆ ತೈಲ ಉದ್ಯಮಕ್ಕೆ ಧಕ್ಕೆಯಾಗುತ್ತದೆ. ಕಲ್ಲಿದ್ದಲು, ಉಕ್ಕು ಇವುಗಳ ಉತ್ಪಾದನೆ ಸ್ಥಗಿತಗೊಳ್ಳುತ್ತದೆ. ಆಯಕಟ್ಟಿನ ಕೈಗಾರಿಕೆಗಳಾದ ಹೆಚ್‌ಎಎಲ್, ಬಿಇಎಲ್ ಮುಂತಾದವುಗಳ ಉತ್ಪಾದನೆ ಸ್ಥಗಿತಗೊಳ್ಳುತ್ತದೆ. ಬಿಹೆಚ್ಇಎಲ್ ಕಾರ್ಮಿಕರ ಮುಷ್ಕರದಿಂದಾಗಿ ವಿದ್ಯುಚ್ಛಕ್ತಿ ಉತ್ಪಾದನೆಯ ದೊಡ್ಡ ಪ್ರಮಾಣ ಸ್ಥಗಿತಕೊಂಡು ಆರ್ಥಿಕ ವ್ಯವಸ್ಥೆಯ ಜೀವನಾಡಿ ನಿತ್ರಾಣಗೊಳ್ಳುತ್ತದೆ. ಹೀಗಾಗಿ ದೀರ್ಘ ಕಾಲದ 20 ಲಕ್ಷ ಕಾರ್ಮಿಕರ ಮುಷ್ಕರ ಕೇಂದ್ರಕ್ಕೆ ಬಿಸಿ ತಟ್ಟುತ್ತದೆ.

ಪ್ರ: ಹೊಸ ಆರ್ಥಿಕ ನೀತಿಯಿಂದಾಗಿ ಇಷ್ಟೆಲ್ಲಾ ದುಷ್ಪರಿಣಾಮಗಳಾಗುತ್ತಿದ್ದರೂ ಕಾರ್ಮಿಕರ ಕಡೆಯಿಂದ ರಕ್ಷಣಾತ್ಮಕ ಹೋರಾಟಗಳಷ್ಟೇ ನಡೆಯುತ್ತಿವೆ. ಹೊಸ ಆರ್ಥಿಕ ನೀತಿಯನ್ನು ವಾಪಸ್ಸು ಕಳು ಹಿಸಲು ಏಕಾಗುತ್ತಿಲ್ಲ? ಮುಂದಿನ ಕ್ರಮ ಏನು?

ಸೂರಿ: ಕಾರ್ಮಿಕರ ಹೋರಾಟಗಳಿಂದ ಸರ್ಕಾರದ ಆರ್ಥಿಕ ಧೋರಣೆಗಳನ್ನು ಬದಲಿಸಲಾಗಲಿಲ್ಲ. ಈ ನಿಟ್ಟಿನಲ್ಲಿ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ ಸಹ ಕಾರ್ಯಕ್ರಮ ಹಮ್ಮಿಕೊಂಡಿದೆ. ಜನವರಿ 20 ರಂದು ನವದೆಹಲಿಯಲ್ಲಿ ಸಾ.ಸಂ.ರಾ. ವೇದಿಕೆ ಸಮಾವೇಶವನ್ನು ಸಂಘಟಿಸುತ್ತಿದೆ. ಸಾರ್ವಜನಿಕ ವಲಯದ ಕಾರ್ಮಿಕರು, ಖಾಸಗಿ ವಲಯಗಳ ಕಾರ್ಮಿಕರು, ವಿದ್ಯಾರ್ಥಿಗಳು, ಯುವಜನರು, ಕೃಷಿ ಕೂಲಿಕಾರರು, ಮಹಿಳೆಯರು, ವೈದ್ಯರು, ರಾಜ್ಯ ಸರ್ಕಾರಿ, ಕೇಂದ್ರ ಸರ್ಕಾರಿ ನೌಕರರು, ಬ್ಯಾಂಕ್, ವಿಮೆಗಳ ನೌಕರರು, ಅಸಂಘಟಿತ ಕಾರ್ಮಿಕರು ಎಲ್ಲಾ ಕ್ಷೇತ್ರಗಳ ಜನಪ್ರತಿನಿಧಿಗಳು ಪಾಲ್ಗೊಂಡು ನಿರ್ಧಾರ ತೆಗೆದುಕೊಳ್ಳಲಿದ್ದಾರೆ. ಕಾರ್ಮಿಕರ ಹೋರಾಟಗಳಿಂದ ಮಾತ್ರವೇ ಹೊಸ ಆರ್ಥಿಕ ನೀತಿಯನ್ನು ಹಿಮ್ಮೆಟ್ಟಿಸಲು ಸಾಧ್ಯವಾಗುವುದಿಲ್ಲ. ವಿಶಾಲ ಜನ ಸಮೂಹದ ಹೋರಾಟ ಬೆಳೆದು ಬರಬೇಕು. ಈ ನಿಟ್ಟಿನಲ್ಲಿ ಬೃಹತ್ ಸಮಾವೇಶ ಮಾರ್ಚ್ ತಿಂಗಳಲ್ಲಿ ಲೋಕಸಭೆ ಅಧಿವೇಶನ ನಡೆಯುವ ಸಮಯಕ್ಕೆ 'ದೆಹಲಿ ಚಲೋ' ಕಾರ್ಯಕ್ರಮಕ್ಕೆ ಕರೆ ನೀಡಲಿದೆ.

ಎರಡನೇ ಹಂತದಲ್ಲಿ ಮೇ ಮೊದಲನೇ ವಾರ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಕರೆ ಕೊಡಲಿದೆ. ಸಾರ್ವಜನಿಕ ಮುಷ್ಕರ ಯಶಸ್ವಿಯಾದರೆ ಸರ್ಕಾರದ ವಹಿವಾಟು ಸ್ಥಗಿತವಾಗುತ್ತದೆ. ಕೇಂದ್ರ ಸರ್ಕಾರ ದೇಶೀ ಬಂಡವಾಳಿಗರ, ವಿದೇಶಿ ಬಂಡವಾಳಿಗರರ ಒತ್ತಡಕ್ಕೆ ಮಣಿಯುವುದರ ವಿರುದ್ಧ ಎಚ್ಚರಿಕೆ ನೀಡಿದಂತಾಗುತ್ತದೆ. ದುಡಿಯುವವರ್ಗದ ಐಕ್ಯ ಹೋರಾಟಕ್ಕೆ ಸರ್ಕಾರ ಮಣಿಯಲೇಬೇಕು.

ಯಾವುದೇ ರಾಜಕೀಯ ಪಕ್ಷಬೇಧ ಮರೆತು ದೇಶದ ಒಳಿತಿಗೆ ಒಟ್ಟಾಗಿ ಹೋರಾಟ ಮಾಡಬೇಕೆಂಬ ಮಹದಾಸೆಯ ನೆಲೆಯಲ್ಲಿ ಸಾರ್ವಜನಿಕ ವಲಯಗಳ ಕಾರ್ಮಿಕ ಸಂಘಗಳ ಸಮಿತಿ (ಸಿಪಿಎಸ್‌ಟಿಯು) ಕೆಲಸ ಮಾಡುತ್ತಿದೆ.



ಬಯಲಿನಿಂದ ಬಾನಿನವರೆಗೂ ಸಾರ್ವಜನಿಕ ಉದ್ದಿಮೆಗಳ ಸಾಧನೆಗೆ ಸಾಕ್ಷಿ ಹೆಚ್‌ಎಎಲ್

ಬೀಡಿ ಕೈಗಾರಿಕೆ ಮತ್ತು ಬೀಡಿ ಕಾರ್ಮಿಕರ ಸಮಸ್ಯೆಗಳು

ಕೆ.ಶಂಕರ್, ಕುಂದಾಪುರ

ಕರ್ನಾಟಕ ರಾಜ್ಯದಲ್ಲಿ ಸುಮಾರು 9 ಲಕ್ಷ ಬೀಡಿ ಕಾರ್ಮಿಕರು ಅದರಲ್ಲಿ ಸುಮಾರು 4 ಲಕ್ಷಕ್ಕೂ ಹೆಚ್ಚಿಗೆ ಕಾರ್ಮಿಕರು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಯಲ್ಲಿದ್ದಾರೆ. ಈ ಕೈಗಾರಿಕೆ ನಗರದಲ್ಲೂ ಹಾಗೂ ಇತ್ತೀಚೆಗೆ ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚೆಚ್ಚು ಹರಡುತ್ತಿದೆ. ಕಂಟ್ರಾಕ್ಟರು ಅಲ್ಲಿ ಬ್ರಾಂಚುಗಳನ್ನು ತೆರೆದು ಕೆಲವು ಕಾಲದವರೆಗೆ ಬೀಡಿ ಕಾರ್ಮಿಕರನ್ನು ದುಡಿಸಿ ಅವರಿಗೆ ಕಾಯಿದೆಬದ್ಧವಾದ ಸವಲತ್ತುಗಳನ್ನು ನೀಡದೆ ಬರೇ ಕಡಿಮೆ ಕೂಲಿ ನೀಡಿ ಕ್ರೂರ ಶೋಷಣೆಗೆ ಒಳಪಡಿಸಿ, ಅನಂತರ ಬ್ರಾಂಚ್ ಮುಚ್ಚಿ ಬೇರೆಕಡೆ ಓಡಿಹೋಗುವ ಪರಿಸ್ಥಿತಿ ಇತ್ತೀಚೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುತ್ತಿದೆ. ಎಲ್ಲಿ ಬೀಡಿ ಕಾರ್ಮಿಕರು ಸಂಘಟನೆಯಾಗಿ, ಹೋರಾಟ ನಡೆಸಲು ಸಮರ್ಥರಾಗಿದ್ದರೋ ಅಲ್ಲಿ ಮಾತ್ರ ಉದ್ಯೋಗದ ಹಾಗೂ ಸವಲತ್ತುಗಳ ರಕ್ಷಣೆ ಆಗುತ್ತಿದೆ. ಸರಕಾರದ ಕಾರ್ಮಿಕ ಇಲಾಖೆ ಈ ಬಗೆ ಗಮನ ಹರಿಸುತ್ತಿಲ್ಲ. ಬೀಡಿ ಕಾರ್ಮಿಕರ ಸಮಸ್ಯೆಗಳನ್ನು ಹಾಗೂ ಕೈಗಾರಿಕಾ ಸಮಸ್ಯೆಗಳನ್ನು ಸರಕಾರ ಅರಿತು ಪರಿಹಾರದ ಕ್ರಮಗಳನ್ನು ಕೈಗೊಳ್ಳುವುದರ ಎದುರು ಕಾರ್ಮಿಕ ವಿರೋಧಿ ನೀತಿಯನ್ನು ಅನುಸರಿಸುತ್ತಾ ಇದೆ. ಸರಕಾರದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಬೀಡಿ ಕಾರ್ಮಿಕರು ಸಂಘಟಿತ ಹೋರಾಟವನ್ನು ನಡೆಸುತ್ತ ಬಂದಿದ್ದಾರೆ. ಇದು ಒಂದೆರಡು ಜಿಲ್ಲೆಗಳಿಗೆ ಸೀಮಿತವಾಗದೇ ಕೈಗಾರಿಕಾವಾರು ರಾಜ್ಯವ್ಯಾಪಿ ನಡೆಯಬೇಕಾಗಿದೆ.

ಕರ್ನಾಟಕ ರಾಜ್ಯದಲ್ಲಿ ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಾಗೂ ಇತರ ಕೆಲವು ಜಿಲ್ಲೆಗಳಲ್ಲಿ ಅನೇಕ ದಶಕಗಳಿಂದ ಬೀಡಿ ಕಾರ್ಮಿಕರ ಧೀರಹೋರಾಟಗಳಿಂದ ಮತ್ತು ತ್ಯಾಗ-ಬಲಿದಾನಗಳ ಮೂಲಕ ಗಳಿಸಿದ ಹಕ್ಕುಗಳ ಮತ್ತು ಸವಲತ್ತುಗಳ ಮೇಲೆ ಇಂದು ಕ್ರೂರ ಆಕ್ರಮಣ ನಡೆಯುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನೀತಿಗಳಿಂದಾಗಿ ಕೆಲವುಹಕ್ಕುಗಳನ್ನು ಹಾಗೂ ಸವಲತ್ತುಗಳನ್ನು ಕಳಕೊಳ್ಳುವ ಗಂಭೀರ ಪರಿಸ್ಥಿತಿ ಬಂದಿದೆ. ಕೈಗಾರಿಕೆಯು ಅಸ್ತಿತ್ವಕ್ಕೆ ಅಪಾಯ ಬರುವಂತಾಗಿದೆ.

ಮಿನಿ ಸಿಗರೇಟಿಗೆ ತೆರಿಗೆ ವಿನಾಯಿತಿ ನೀಡಿದ ಕೇಂದ್ರ ಸರಕಾರದ ಕ್ರಮದಿಂದಾಗಿ ಬೀಡಿ ಕೈಗಾರಿಕೆ ಅಪಾಯವನ್ನು ಎದುರಿಸುವಂತಾಗಿದೆ. ವರ್ಷಕ್ಕೆ ಇಪ್ಪತ್ತು ಲಕ್ಷ ಬೀಡಿ ತಯಾರಿಸುವ ಮಾಲಕರಿಗೆ ತೆರಿಗೆ ವಿನಾಯಿತಿ ನೀಡಿದ ಕೇಂದ್ರ ಸರಕಾರದ ನೀತಿಯಿಂದಾಗಿ ಕೋಟಿಗಟ್ಟಲೆ ಬೀಡಿ ಕಟ್ಟಿಸುವ ಅಸಂಖ್ಯ ಮಾಲಕರು ಸರಾಕರದ ಖಜಾನೆಗೆ ವಂಚನೆ ಮಾಡುವುದರ ಜತೆಗೆ ಬೀಡಿ ಕಾರ್ಮಿಕರಿಗೆ ಯಾವುದೇ ಕಾನೂನುಬದ್ಧ ಸವಲತ್ತುಗಳನ್ನು ನೀಡದೆ ವಂಚಿಸುತ್ತಿದ್ದಾರೆ. ನಗರ ಪ್ರದೇಶಗಳಲ್ಲೂ ಹಾಗೂ ಹೆಚ್ಚು ಗ್ರಾಮಾಂತರ ಪ್ರದೇಶಗಳಲ್ಲಿ ಇಂತಹ ಕ್ರೂರ ಶೋಷಣೆಗೆ ಅವಕಾಶ ಮಾಡಿಕೊಟ್ಟಂತಾಗಿದೆ. ಈ ಕ್ರೂರ ಶೋಷಣೆಯ ಪೂರ್ತಿ ಹೊಣೆ ಕೇಂದ್ರ ಸರ್ಕಾರದ್ದು ಅಂತ ಹೇಳಬೇಕಾಗಿದೆ. ಲಕ್ಷಾಂತರ ಬೀಡಿ ಕಾರ್ಮಿಕರ ಬಗ್ಗೆ ಏನೂ ಕಾಳಜಿ ಇಲ್ಲದ ಕೇಂದ್ರ ಸರಕಾರವಾಗಿದೆ. ಹಲವು ಸಂದರ್ಭ ಧರಣಾ ಮನವಿಯೊಂದಿಗೆ ಚಳುವಳಿ ಇತ್ಯಾದಿ ನಡೆದಿವೆ. ಸರಕಾರ ಗಮನ ಹರಿಸದೆ ಗಂಭೀರ ಸ್ಥಿತಿಗೆ ಹೋಗುವಂತಾಗಿದೆ.

ಬೀಡಿ ಕೈಗಾರಿಕೆಯಲ್ಲಿ 'ಕಂಟ್ರಾಕ್ಟ್ ಪದ್ಧತಿ' ಮುಂದುವರಿಯುವುದರಿಂದ ಒಂದು ಕಡೆ ಬೀಡಿ ಮಾಲಕರು ಹಾಗೂ ಇನ್ನೊಂದೆಡೆ ಕಂಟ್ರಾಕ್ಟರ್‌ರವರ ದಬ್ಬಾಳಿಕೆ ಮತ್ತು ಸುಲಿಗೆಯ ಕ್ರಮಗಳಿಂದಾಗಿ ಕಾರ್ಮಿಕರು ತಮ್ಮ ಹಕ್ಕುಗಳನ್ನು ಹಾಗೂ ಸವಲತ್ತುಗಳನ್ನು ಕಳ ಕೊಳ್ಳುತ್ತಿದ್ದಾರೆ. ಕಂಟ್ರಾಕ್ಟ್ ಪದ್ಧತಿಯ ವಿರುದ್ಧ ಹೋರಾಟ ಈ ಹಿಂದೆ ನಡೆದಿದೆ, ಇನ್ನು ಮುಂದೆ ಕೂಡಾ ಹೋರಾಟ ನಡೆಸಬೇಕಾಗಿದೆ.



ಉತ್ತಮ ಭವಿಷ್ಯದ ನಿರೀಕ್ಷೆಯನ್ನು ಹೊತ್ತ ಬೀಡಿ ಕಾರ್ಮಿಕರು

ಬೀಡಿ ಕಾರ್ಮಿಕರಿಗೆ ಭವಿಷ್ಯ ನಿಧಿ ಮತ್ತು ಇತರ ಸವಲತ್ತುಗಳನ್ನು ವಂಚಿಸಲು 'ನಾನ್.ಪಿ.ಎಫ್.' ಬೀಡಿ ಎಂಬ ಒಂದು ಹೊಸ ವಂಚನಾ ಪದ್ಧತಿ ನಡೆಯುತ್ತಿದೆ. ಬೀಡಿ ಕಾರ್ಮಿಕರ ಧೀರ ಹೋರಾಟದ ಪರಿಣಾಮವಾಗಿ ಈ ಸವಲತ್ತುಗಳು ಸಿಕ್ಕಿರುತ್ತದೆ. ಅವುಗಳನ್ನು ಕಂಟ್ರಾಕ್ಟರರು 'ಕಂಟ್ರಾಕ್ಟ್ ಪದ್ಧತಿ' ಮೂಲಕ ಮಾಡಿಸಲು ಮುಂದಾಗಿದ್ದಾರೆ. ಲೋಗ್ ಪುಸ್ತಕ ನೀಡದೆ ಬೃಹತ್ ಸಂಖ್ಯೆಯಲ್ಲಿ ಕಾರ್ಮಿಕರಿಂದ ಬೀಡಿ ಕಟ್ಟಿಸುವ ಈ ವ್ಯವಸ್ಥೆಯಲ್ಲಿ ಯಾವುದೇ ಕಾಯದೆ ಬದ್ಧ ಸವಲತ್ತುಗಳೂ ಇಲ್ಲದೆ ಕಾರ್ಮಿಕರ ಬಹಿರಂಗ ಸುಲಿಗೆಗೆ ಸರಕಾರ ಅವಕಾಶ ಮಾಡಿಕೊಟ್ಟಿರುತ್ತದೆ. ಸರಕಾರದ, ಮಾಲಕರ ಮತ್ತು ಬೀಡಿ ಕಂಟ್ರಾಕ್ಟರರ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಬೀಡಿ ಕಾರ್ಮಿಕರು ಹೋರಾಡುತ್ತಾ ಬಂದಿರುತ್ತಾರೆ. ಮುಂದಿನ ದಿನಗಳಲ್ಲಿ ಧೀರ ಹೋರಾಟದ ಅವಶ್ಯಕತೆ ಇದೆ. ಜಿಲ್ಲೆ, ರಾಜ್ಯ ಹಾಗೂ ರಾಷ್ಟ್ರವ್ಯಾಪಿ ಹೋರಾಟ ಬೆಳೆದು ಬರಬೇಕಾಗಿದೆ.

ಬೀಡಿ ಕೈಗಾರಿಕೆಯಲ್ಲಿ 'ಕಂಟ್ರಾಕ್ಟ್ ಪದ್ಧತಿ' ಇರುವುದರಿಂದ ಕಂಟ್ರಾಕ್ಟರರು ಬೀಡಿ ಕಾರ್ಮಿಕರಿಗೆ ಕಳಪೆ ಎಲೆಗಳನ್ನು ಕೊಟ್ಟು ಎಲೆ ಎವರೇಜಿನ, ಹೆಸರಿನಲ್ಲಿ ಕೂಡಾ ಅವರಿಂದ ದಂಡ ವಸೂಲು ಮಾಡಲಾಗುತ್ತಿದೆ. ಮಾಲಕರು ಡಿಪೋದಲ್ಲಿ ನಿಗದಿ ಪಡಿಸುವ ಎವರೇಜ್‌ಗಿಂತ ತುಂಬಾ ಹೆಚ್ಚಿನ ಪ್ರಮಾಣದಲ್ಲಿ ಎವರೇಜ್ ಹೇರಿ ಬೀಡಿ ಕಂಟ್ರಾಕ್ಟರರು ಕಾರ್ಮಿಕರ ಸುಲಿಗೆ ಮಾಡುವುದರಲ್ಲಿ ತಲ್ಲೀನರಾಗಿದ್ದಾರೆ.

ಲಕ್ಷಾಂತರ ಬೀಡಿ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳನ್ನು ತಿಳಿದುಕೊಳ್ಳುವ ಹಾಗೂ ಅವರ ಬೇಡಿಕೆಗಳನ್ನು ಮನ್ನಿಸುವ ಸೌಜನ್ಯ ಕೂಡಾ ಆಳುವ ವರ್ಗ ವ್ಯಕ್ತಪಡಿಸುವುದಿಲ್ಲಾ, ಬದಲಾಗಿ ಸಮಸ್ಯೆಗಳು ಹೆಚ್ಚೆಚ್ಚು ಆಗುವಂತೆ ಕಾರ್ಮಿಕ ವಿರೋಧಿ ನೀತಿಯನ್ನು ಅನುಸರಿಸುತ್ತಾ ಇದೆ. ಬೀಡಿ ಕಾರ್ಮಿಕರು ಸಂಘಟನೆಯನ್ನು ಬಲಗೊಳಿಸಿಕೊಂಡು ತಮ್ಮ ಮೇಲೆ ಆಗುತ್ತಿರುವ ಅನ್ಯಾಯಗಳನ್ನು ಕೊನೆಗೊಳಿಸುವಂತೆ ಸರಕಾರವನ್ನು ಮಾಲಕರನ್ನು ಒತ್ತಾಯಿಸಲು ನಿರಂತರ ಸಂಘಟಿತ ಚಳುವಳಿಯನ್ನು ರಾಜ್ಯಾದ್ಯಂತ ಬೆಳೆಸಲು ಮುಂದಿನ ದಿನಗಳಲ್ಲಿ ಸಿದ್ಧತೆ ನಡೆಸುವುದು ತೀರಾ ಅವಶ್ಯವಾಗಿದೆ.

ಇಂಡಿಯನ್ ಏರ್‌ಲೈನ್ಸ್ ಅಪಹರಣ...

ಪುಟ 5 ರಿಂದ

ಅಪಹರಣಕಾರರಿಗೆ ನಿಕಟವಾಗಿರುವ ಒಂದು ಆಳ್ವಿಕೆಯಿಂದ ವಾಜಪೇಯಿ ಸರಕಾರ ಸಹಕಾರ ನಿರೀಕ್ಷಿಸಲು ಹೇಗೆ ಸಾಧ್ಯ? ವಿಮಾನ ಅಪಹರಣದ ಬಗ್ಗೆ ಸಾರ್ವಜನಿಕವಾಗಿ ಏನೇ ಹೇಳಿಕೊಂಡರೂ ಸ್ವತಃ ತಾಲಿಬಾನ್‌ಗಳು ಇಂತಹ ತಂತ್ರಗಳಲ್ಲಿ ಪಾರಂಗತರಾದವರು ಎಂಬ ಸಂಗತಿ ಸರಕಾರದ ಗಮನಕ್ಕೆ ಹೇಗೆ ಬರಲಿಲ್ಲ? ಅಥವಾ ಇದಕ್ಕಿಂತ ಹೆಚ್ಚು ವಾಜಪೇಯಿ ಸರಕಾರಕ್ಕೆ ಗೊತ್ತಿರಲಿಲ್ಲವೇ? ಇಂತಹ ಒಂದು ಶಕ್ತಿ ಭಾರತ ಸರಕಾರದ ಪಕ್ಷ ವಹಿಸುತ್ತದೆ ಎಂದು ನಿರೀಕ್ಷಿಸುವುದು ಹಾಸ್ಯಾಸ್ಪದ.

ಅಪಹರಣದ ಪ್ರಕರಣದಾದ್ಯಂತ ತಾಲಿಬಾನ್ ಅಪಹರಣಕಾರರ ಕ್ರಮಗಳಿಗೆ ಬೆಂಬಲವಾಗಿತ್ತು. ಯಾವುದೇ ಹಂತದಲ್ಲೂ ತೋರಿಕೆಗಾದರೂ ಅವರು ಅಪಹರಣಕಾರರ ಮೇಲೆ ಯಾವುದೇ ರೀತಿಯ ಒತ್ತಡ ಹಾಕಿದಂತಿಲ್ಲ. ಎರಡೂ ಪಕ್ಷಗಳನ್ನು ಮಾತುಕತೆಗೆ ತಂದ ನಂತರ ಬಿಕ್ಕಟ್ಟಿನ ಪರಿಹಾರ ಈ ಎರಡು ಪಕ್ಷಗಳಿಗೇ ಸೇರಿದ್ದು ಎಂದು ತಾಲಿಬಾನ್ ಆರಂಭದಲ್ಲೇ ಸ್ಪಷ್ಟಪಡಿಸಿತ್ತು. ಬೇರೆ ಯಾವುದೇ ದೇಶದ ಕಮಾಂಡೋಗಳು ವಿಮಾನದೊಳಗೆ ನುಗ್ಗಲು ಅನುಮತಿ ನೀಡುವುದಿಲ್ಲ ಎಂದೂ ತಾಲಿಬಾನ್ ಅತ್ಯಂತ ಸ್ಪಷ್ಟವಾಗಿ ಹೇಳಿದ್ದೇಕೆ? ಈ ಪ್ರಶ್ನೆಯನ್ನು ಬಗೆಹರಿಸಿಕೊಳ್ಳಲು ಸಮಯ ಮಿತಿ ಹಾಕಿ ಅದೇ ವೇಳೆಗೆ ವಿಮಾನ ಕಂದಹಾರ್ ಬಿಡಲು ಬಲವಂತ ಮಾಡುವ ಬೆದರಿಕೆ ಹಾಕಿದ್ದರ ಅರ್ಥವೇನು?

ಇನ್ನೊಂದು ಕುತೂಹಲದ ಸಂಗತಿಯೆಂದರೆ ಒಂದು ರಾಜಕೀಯ ಕಾರಣಕ್ಕಾಗಿ ಅಪಹರಣ ಮಾಡುವವರು ರಾಜಕೀಯ ಆಶ್ರಯ ಕೇಳುತ್ತಾರೆ ಅಥವಾ ಸುರಕ್ಷಿತವಾಗಿ ತಮ್ಮನ್ನು ಹೊರಕಳಿಸಬೇಕು ಎನ್ನುತ್ತಾರೆ. ಇವರು ಇವು ಯಾವುದನ್ನೂ ಮಾಡಿಲ್ಲ. ಆದರೂ **ತಾಲಿಬಾನ್ ಆಡಳಿತ ಪ್ರಯಾಣಿಕರನ್ನು ಬಿಡುಗಡೆ ಮಾಡಿದ ನಂತರ ಅವರಿಗೆ ಪಾಕಿಸ್ತಾನದತ್ತ ಹೋಗಲು ಅನುಮತಿ ನೀಡಿದ್ದೇಕೆ? ಅವರನ್ನು ಹಿಡಿಯಲು ಯಾವುದೇ ಪ್ರಯತ್ನ ಮಾಡಲಿಲ್ಲವೇಕೆ?** ನಿಜ ಸಂಗತಿಯೆಂದರೆ ಭಾರತ ಸರ್ಕಾರ, ಅಪಹರಣಕಾರರು ಮತ್ತು ತಾಲೀಬಾನ್ ನಡುವೆ ಕಂದಹಾರ್ ಬಿಟ್ಟ ಮೇಲೆ ಅಪಹರಣಕಾರರು ಎಲ್ಲಿಗೆ ಹೋದರೆಂಬ ಬಗ್ಗೆ ಹೊರಗೆಡಹ ಬೇಕಾಗಿಲ್ಲ ಎಂಬ ಒಪ್ಪಂದವಾಗಿದೆ ಎಂದು ಒಂದು ಹಂತದಲ್ಲಿ ತಾಲಿಬಾನ್ ಅಧಿಕಾರಿಗಳು ಹೇಳಿಕೊಂಡರು.

ಅಸಮರ್ಪಕ ನಿರ್ವಹಣೆ

ಅಮೃತಸರದಿಂದ ವಿಮಾನವನ್ನು ಹೋಗಲು ಬಿಟ್ಟು ಪರಿಸ್ಥಿತಿ ಭಾರತದ ಕೈಮೀರಿ ಹೋಗುವಂತೆ ಸರಕಾರ ಮಾಡಿತು. ಆದರೆ ಹಿಂದಿನ ಒಂದು ವಾರದಲ್ಲಿ ವ್ಯಕ್ತಗೊಂಡ ಹಲವು ವಿಶ್ಲೇಷಕರ ಅಭಿಪ್ರಾಯಗಳ ಪ್ರಕಾರ **ವಿಮಾನ ಅಮೃತಸರ ಬಿಟ್ಟುಹೋಗದಂತೆ ಮಾಡುವ ಪರಿಸ್ಥಿತಿ ಉಂಟುಮಾಡಬಹುದಾಗಿತ್ತು. ಈ ಇಡೀ ಪ್ರಕರಣ ಹೊಲಬುಗೆಡುವಲ್ಲಿ ಇದು ಮೊದಲ ಮತ್ತು ಅತ್ಯಂತ ಗಂಭೀರ ತಪ್ಪು.**

ವಿಮಾನ ಅಮೃತಸರದಿಂದ ಹೊರಹೋಗಿ ಪರಿಸ್ಥಿತಿ ನಮ್ಮ ಕೈತಪ್ಪಿ ಹೋಗಲು ಕಾರಣವಾಯಿತು. ವಿಮಾನ ಭಾರತದ ಪ್ರದೇಶದಿಂದ ಹೊರಹೋಗಿ, ಕೊನೆಗೆ ಮಿತ್ರಭಾವನೆಯಿಲ್ಲದ ಪ್ರದೇಶದಲ್ಲಿ ಇಳಿದಾಗ ಭಾರತಕ್ಕೆ ಉಳಿದಿದ್ದ ದಾರಿಗಳು ಬಹಳ ಸೀಮಿತ.

ಆದರೆ ತಪ್ಪು ಮೊದಲೇ ಸಂಭವಿಸಿದ್ದು ನೇಪಾಳದ ತ್ರಿಭುವನ ವಿಮಾನ ನಿಲ್ದಾಣದಲ್ಲಿ. ನೇಪಾಳ ಪಾಕಿಸ್ತಾನದ ಬೇಹುಗಾರಿಕೆ ಸಂಸ್ಥೆ ಐಎಸ್‌ಐ ಚಟುವಟಿಕೆಗಳ ತಾಣ ಎಂದು ಚೆನ್ನಾಗಿ ಗೊತ್ತಿದ್ದ ಸಂಗತಿ. ಭಾರತದೊಂದಿಗೆ ಅದರ ಗಡಿಗಳು ಬಿಗಿಯಾಗಿಲ್ಲವಾದ್ದರಿಂದ ನೇಪಾಳವನ್ನು ಸಾಮಾನ್ಯ ಕ್ರಿಮಿನಲ್‌ಗಳೂ, ಉಗ್ರಗಾಮಿ ಸಂಘಟನೆಗಳೂ ಬಳಸಿಕೊಳ್ಳುತ್ತಿವೆ.

1981 ರಲ್ಲಿ ದಿಲ್ಲಿ-ಶ್ರೀನಗರ ವಿಮಾನವನ್ನು ಅಪಹರಿಸಿದಾಗ ಕಾಠ್ಮಂಡುವಿನಲ್ಲಿ ಅಧಿಕಾರಿಗಳಿಗೆ ಲಂಚ ನೀಡುವುದು ಎಷ್ಟು ಸುಲಭ ಎಂದು ಈ ಹಿಂದೆಯೇ ಹೊರಗೆಡಹಿದ್ದು. ಆದ್ದರಿಂದ **ಕಾಠ್ಮಂಡುವಿನಲ್ಲಿ ಇಂಡಿಯನ್ ಏರ್‌ಲೈನ್ಸ್ ವಿಮಾನದೊಳಗೆ ಬರುವ ಪ್ರಯಾಣಿಕರ ತಪಾಸಣೆಗೆ ನಮ್ಮದೇ ಸ್ವಂತ ವ್ಯವಸ್ಥೆ ಮಾಡಿಕೊಳ್ಳುವ ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳಬೇಕಾಗಿತ್ತು.** ಇಂತಹ ಒಂದು ವ್ಯವಸ್ಥೆ ಇದ್ದಿದ್ದರೆ ಇಂತಹ ಬಿಕ್ಕಟ್ಟು ಉದ್ಭವಿಸುತ್ತಲೇ ಇರಲಿಲ್ಲ. ತಂಟೆಕೋರರಿಗೆ ಅವಕಾಶವಿರುತ್ತಿರಲಿಲ್ಲ.

ಗಂಭೀರ ಲೋಪ

ಇವೆಲ್ಲಾ ಅಸಮರ್ಪಕ ವರ್ತನೆಗಳಲ್ಲದೆ ವಾಜಪೇಯಿ ಸರಕಾರದ ಇನ್ನೂ ಒಂದು ವಿಫಲತೆಗೆ ಸಲ್ಲಬೇಕಾದ ಗಮನ ಸಂದಿಲ್ಲ. ಅದೆಂದರೆ ಈ ಸರಕಾರದ ರಾಜಕೀಯ ಪ್ರಕ್ರಿಯೆ. ಅಪಹರಣಕಾರರ ಮೇಲೆ ರಾಜಕೀಯ ಒತ್ತಡಗಳನ್ನು ಹಾಕಬೇಕಾಗಿತ್ತು. ವಾಜಪೇಯಿ ಸರ್ಕಾರ ಅಂತರ್‌ರಾಷ್ಟ್ರೀಯ ಅಭಿಪ್ರಾಯವನ್ನು ಕ್ರೋಢೀಕರಿಸಿ **ಅಪಹರಣಕಾರರು, ಪಾಕಿಸ್ತಾನದಲ್ಲಿ ಅವರ ಗುರುಗಳು ಹಾಗೂ ತಾಲಿಬಾನ್ ಆಡಳಿತದ ಮೇಲೆ ಒತ್ತಡ ಬರುವಂತೆ ಮಾಡುವಲ್ಲಿ ಶೋಚನೀಯವಾಗಿ ವಿಫಲವಾಗಿದೆ. ಅಪಹರಣದ ಬಿಕ್ಕಟ್ಟನ್ನು ಅಂತಿಮವಾಗಿ ಭಾರತದ ಪರವಾಗಿ ಪರಿಹರಿಸುವಲ್ಲಿ ಹೆಚ್ಚೆಚ್ಚು ಅಂತರ್‌ರಾಷ್ಟ್ರೀಯ ಒತ್ತಡ ಒಂದು ಸಕಾರಾತ್ಮಕ ಪಾತ್ರ ವಹಿಸಬಹುದಾಗಿತ್ತು. ಅಪಹರಣಕಾರರನ್ನು ಕೆಳಗಿಳಿಯುವಂತೆ ಮಾಡಲು ಪಾಕಿಸ್ತಾನದ ಮೇಲೆ ಅಮೆರಿಕಾ ಒತ್ತಡ ಹೇರಲು ಸಾಧ್ಯವಿರಲಿಲ್ಲವೇ? ಅಮೆರಿಕಾದ ಬಗ್ಗೆ ಈಗ ಭಾರೀ ಪ್ರೀತಿ ಹೊಂದಿರುವ ಭಾರತ ಸರಕಾರ ಹೀಗೆ ಮಾಡಲು ಪ್ರಯತ್ನವನ್ನಾದರೂ ಮಾಡಿತ್ತೇ?** ಅಮೆರಿಕಾದ ಉಪ ವಿದೇಶಾಂಗ ಸಚಿವ ಸ್ಟ್ರೋಬ್ ಟಾಲ್ಬೋಟ್ ಹಾಗೂ ವಿದೇಶಾಂಗ ಸಚಿವೆ ಮ್ಯಾಡೆಲಿಗ್ ಆಲ್‌ಬ್ರೈಟ್‌ರೊಡನೆ ದೀರ್ಘಕಾಲದ ಗುಪ್ತ ಸಿಟಿಬಿಟಿ ಮಾತುಕತೆಗಳಲ್ಲಿ ಜಸ್ವಂತ್ ಸಿಂಗರವರು ಬೆಳೆಸಿಕೊಂಡಿರುವ ನಿಕಟ ಸಂಪರ್ಕಗಳಿಂದ ಏನೂ ಪ್ರಯೋಜನವಾಗಿಲ್ಲ. ಇದರಲ್ಲಿ ಆಶ್ಚರ್ಯವೇನಿಲ್ಲ. ಕಾಶ್ಮೀರದ ಬಗ್ಗೆ ಅಮೆರಿಕಾದ ನಿಲುವಿನ ಅರಿವು ವಾಜಪೇಯಿ ಸರಕಾರಕ್ಕೆ ಮಾತ್ರ ಇದ್ದಂತಿಲ್ಲ. ಈ ವರ್ಷಾಂತ್ಯದ ಸಂದೇಶದಲ್ಲೂ ಅಧ್ಯಕ್ಷ ಕ್ಲಿಂಟನ್ ಕಾಶ್ಮೀರ ವಿಶ್ವದ ಅತ್ಯಂತ ಅಪಾಯಕಾರಿ ಪ್ರಶ್ನೆ ಎಂದಿದ್ದಾರೆ! ವಿಶ್ವದ ಪೋಲೀಸಿನಂತೆ ವರ್ತಿಸುತ್ತಿರುವ ಅಮೆರಿಕಾದ ಆಳರಸರು ಪೂರ್ಣ ನಾಲ್ಕು ದಿನಗಳ ನಂತರವಷ್ಟೇ ಈ ಅಪಹರಣಕ್ಕೆ ಪ್ರತಿಕ್ರಿಯೆ ನೀಡಿದರು. ಬ್ರಿಟಿಶರ ಮೌನ ಎದ್ದು ಕಾಣುತ್ತಿತ್ತು. ಇನ್ನು ಇತರ ಪಾಶ್ಚಿಮಾತ್ಯ ಶಕ್ತಿಗಳ ಪ್ರತಿಕ್ರಿಯೆ ಏನು? ಅರೆಮನಸ್ಸಿನ ಪ್ರತಿಕ್ರಿಯೆಗಳಷ್ಟೆ. ಇಂತಹ ಸ್ಪಂದನಗಳೇ ಅಪಹರಣಕಾರರ ಹುಮ್ಮಸ್ಸು ಬೆಳೆಸಿದವು. ಕೊಲ್ಲಿ ಯುದ್ಧ ಅಥವಾ ಯುಗೋಸ್ಲಾವಿಯಾದಲ್ಲಿ ಆಕ್ರಮಣದ ಸಮಯದಲ್ಲಿ ಕೇಳಿಬಂದ ಕರ್ಣಕರ್ಕಶ ಗದ್ದಲವೆಲ್ಲಾ ಈಗೆಲ್ಲಿ ಅಡಗಿ ಹೋದವು?

ಸತ್ಯ ಮುಚ್ಚಿಟ್ಟಿದ್ದೇಕೆ?

ಇಷ್ಟೇ ಅಲ್ಲ, ಈ ಬಿಕ್ಕಟ್ಟಿನ ಆರಂಭದಿಂದಲೂ ವಾಜಪೇಯಿ ಸರಕಾರ ಪರಸ್ಪರ ವಿರೋಧಾಭಾಸದ, ತಪ್ಪು ದಾರಿಗೆಳೆಯುವ ಮಾಹಿತಿಗಳನ್ನು ಒದಗಿಸಿದೆ. ಈ ಇಡಿ ವ್ಯವಹಾರಗಳಲ್ಲಿ ಸರಕಾರದ ನಿರ್ವಹಣೆಯಲ್ಲಿ ಏನೋ ಸಂದೇಹಾಸ್ಪದ ಅಂಶಗಳಿದ್ದಂತಿದೆ. ಅಪಹರಣಕಾರರೊಂದಿಗೆ ವ್ಯವಹಾರ ಕುದುರಿಸಿದ ಡಿಸೆಂಬರ್ 31 ರಂದು ಪ್ರಧಾನ ಮಂತ್ರಿಗಳು ಸಂಜೆ 6.30 ಕ್ಕೆ ಸರ್ವ ಪಕ್ಷ ಸಭೆ ಕರೆದಿದ್ದರು. ಪ್ರಧಾನ ಮಂತ್ರಿಗಳನ್ನು ನಾನು ಕಲ್ಕತ್ತೆಯಿಂದ ಮಧ್ಯಾಹ್ನ 2 ಗಂಟೆಗೆ ಸಂಪರ್ಕಿಸಿದಾಗ ಅಪಹರಣಕಾರರು ತಮ್ಮ ಬೇಡಿಕೆಗಳನ್ನು ಮೂವರು ಉಗ್ರಗಾಮಿಗಳ ಬಿಡುಗಡೆಗೆ ಇಳಿಸಿದ್ದಾರೆ. ತಾನು ಈ ಹಂತದ ಮಾತುಕತೆಗಳನ್ನು ನಿರ್ವಹಿಸಲು ಕಂದಹಾರ್‌ಗೆ ಜಸ್ವಂತ್‌ಸಿಂಗರನ್ನು ಕಳಿಸುತ್ತಿದ್ದೇನೆ ಎಂದರು. **ಪ್ರಧಾನ ಮಂತ್ರಿಗಳು ನಮ್ಮನ್ನು ಮೂರ್ಖರಾಗಿಸಲು ಏಕೆ ಪ್ರಯತ್ನಿಸುತ್ತಿದ್ದರು ಎಂದು ನನಗೆ ಅರ್ಥವಾಗುತ್ತಿಲ್ಲ. 31ರ ಮುಂಜಾನೆ ಹೊತ್ತಿಗೆ ವ್ಯವಹಾರ ಕುದುರಿಸಲಾಗಿತ್ತು. ನಾನು ಪ್ರಧಾನಿಗಳೊಂದಿಗೆ ಮಾತನಾಡುವ ವೇಳೆಗೆ ಒಬ್ಬ ಬಂಧಿಯನ್ನು ಜಮ್ಮುವಿನಿಂದ ನವದೆಹಲಿಗೆ ಕರೆತರಲಾಗುತ್ತಿತ್ತು, ಇನ್ನೊಬ್ಬನನ್ನು ತಿಹಾರ್ ಜೈಲಿನಿಂದ ಬಿಡುಗಡೆ ಮಾಡಲಾಗಿತ್ತು. ಪ್ರಧಾನಿಗಳು ಈ ಸಂಗತಿಗಳನ್ನು ಅದಕ್ಕೂ ಮುಖ್ಯವಾಗಿ ಉಗ್ರಗಾಮಿಗಳು ಜಸ್ವಂತ್‌ಸಿಂಗರೊಡನೆ ಕಂದಹಾರ್‌ಗೆ ಹೊರಟಿದ್ದರು ಎಂಬ ಸಂಗತಿಯನ್ನೇಕೆ ಮುಚ್ಚಿಟ್ಟರು?**

ಈ ಹಿಂದೆ ರುಬೈಯಾ ಮುಫ್ತಿಯವರ ಬದಲು ಉಗ್ರಗಾಮಿಗಳನ್ನು ಬಿಡುಗಡೆ ಮಾಡಿದ ನಂತರ ಉಗ್ರಗಾಮಿ ಚಟುವಟಿಕೆಗಳು, ಅದಕ್ಕೆ ಜನಗಳ ನಡುವೆ ಬೆಂಬಲ ಇದ್ದಕ್ಕಿದ್ದಂತೆ ಹೆಚ್ಚಿತ್ತು. ಮೂವರು ಪ್ರಮುಖ ಉಗ್ರಗಾಮಿಗಳ ಬಿಡುಗಡೆ ಕಾಶ್ಮೀರ ಕಣಿವೆಯಲ್ಲಿ ಉಗ್ರಗಾಮಿಗಳ ಚಟುವಟಿಕೆಗಳಿಗೆ ಉತ್ತೇಜನ ನೀಡಿರುವ ಜನಗಳನ್ನು ಮತ್ತು ಉಗ್ರಗಾಮಿಗಳನ್ನು ಎದುರಿಸುತ್ತಿರುವ ಭದ್ರತಾ ಪಡೆಗಳನ್ನು ಇದು ತಟ್ಟಬಹುದಾದ ಈಗಿನ ಸನ್ನಿವೇಶದ ಮೇಲೆ ಜಾಗರೂಕತೆಯಿಂದ ನಿಗಾ ಇಡಬೇಕಾಗಿದೆ, ಅದಕ್ಕೆ ಸೂಕ್ತ ರೀತಿಯಲ್ಲಿ ಪರಿಣಾಮಕಾರಿಯಾಗಿ ಕ್ರಮಗಳನ್ನು ರೂಪಿಸಬೇಕಾಗಿದೆ.

ನೋವುಂಡ ಮೆಣಸಿನಕಾಯಿ ಬೆಳೆಗಾರ

ಯು. ಬಸವರಾಜ್



ಮುಖ್ಯಮಂತ್ರಿಯ ಮನೆಯೆದುರು ಪ್ರತಿಭಟಿಸಿದ ರೈತರು

ಕಳೆದ 2-3 ತಿಂಗಳಿನಿಂದ ರೈತರ ಹೋರಾಟಗಳು ತ್ರಿಕೆಗಳ ಮುಖ ಪುಟಗಳಲ್ಲಿ ರಾರಾಜಿಸಿ ರಾಜ್ಯದ ತೆಯ ಗಮನ ಸೆಳೆದಿವೆ. ಆಲೂಗಡ್ಡೆ, ಈರುಳ್ಳಿ, ಗಾ, ಕಬ್ಬು, ತೊಗರಿ ಮುಂತಾದ ಬೆಳೆಗಾರರ ಜೊತೆ ೋಲಾರ ಜಿಲ್ಲೆಯ ಹಾಲು ಉತ್ಪಾದಕರು ನ್ಯಾಯಬೆಲೆ ಗೆಂದು ಬೀದಿಗಿಳಿದರೇ, ಕೃಷ್ಣಾ ಕೊಳ್ಳದ ರೈತರು ದಾಹ ಗಿಸುವ ನೀರಿಗಾಗಿ ಮುಂದೆಬಂದರು. ಆತ್ಮಹತ್ಯೆ ಡಿಕೊಂಡ ಬಳ್ಳಾರಿ ಜಿಲ್ಲೆಯ ಮೆಣಸಿನಕಾಯಿ ಗಾರರು ಪರಿಹಾರ ಕೋರಿ ಸುದ್ದಿ ಮಾಡಿದರು.

ಈ ಹೋರಾಟದ ಅಲೆಗಳು ರಾಜ್ಯದ ಂತ್ರಾಲಯವನ್ನು ತಟ್ಟಿದವು, ವಿಧಾನ ಸಭೆಯನ್ನು ದೇರಿಸಿದವು.

ಈ ಬಾರಿ ಬಳ್ಳಾರಿ ಹೊರತು ಪಡಿಸಿ ಒಳ್ಳೆಬೆಳೆ- ದು ಕುಸಿದ ಬೆಲೆಗಳ ವಿರುದ್ಧ ಧ್ವನಿ ಎತ್ತಿದರೆ, ಳ್ಳಾರಿಜಿಲ್ಲೆಯ ರೈತರು ವಿಪರೀತ ಸುರಿದ ಹಿಂಗಾರು ಳೆ ಹಾಗೂ, ವೈರಸ್ ಬಾದೆಯಿಂದ ಉಂಟಾದ ಣಸಿನ ಕಾಯಿ ಬೆಳೆನಷ್ಟಕ್ಕೆ ಸುಮಾರು 12 ಜನರು ತ್ಮಹತ್ಯೆ ಮಾಡಿಕೊಂಡು ನಷ್ಟ ಪರಿಹಾರಕ್ಕಾಗಿ ರ್ಕಾರದೆಡೆ ನೊಂದ ಮೋರೆ ತೋರಿದರು. ೋಟಗಾರಿಕೆಯ ಸಚಿವರಾದ ಶ್ರೀಮಾನ್ ಅಲ್ಲಂ ರಭದ್ರಪ್ಪನವರ ಕ್ಷೇತ್ರದಲ್ಲಿಯೇ ಈ ಬೇಡಿಕೆ ದುಬಂದುದೊಂದು ವಿಶೇಷ.

ಬಳ್ಳಾರಿ ಜಿಲ್ಲೆಯ ಜನತೆ ಮುಂಗಾರು ಕೈ ಟ್ಟಿದ್ದರಿಂದಲೇ ತತ್ತರಿಸಿಹೋಗಿತ್ತು. ನೀರಾವರಿ ದ ಜನರು ಉಸಿರಾಡಬಹುದೆಂದುಕೊಂಡವರಿಗೆ ತವಾಗಿ ಸುರಿದ ಹಿಂಗಾರು ಮಳೆ ಶಾಪವಾಗಿ ಣಮಿಸಿತು. ಸುಮಾರು 50 ಸಾವಿರ ಎಕರೆ ಪ್ರದೇಶದ ಣಸಿನ ಕಾಯಿ ಬೆಳೆಯು ನಾಶವಾಯಿತು. ಮುಂಗಾರು ಂಗಾರು ಹಾನಿಯಿಂದಾಗಿ ಕೂಲಿ ನಂಬಿದ ಕೂಲಿಕಾರರ ಾಯ ಎಂದಿನಂತೆ ಈ ಬಾರಿಯು ಅರ್ಧದಷ್ಟು ಕೂಲಿ ಸವಿಲ್ಲದೇ ಕುಸಿಯಿತು.

ಣಸಿನಕಾಯಿಯೆಡೆಗೆ

ಬಳ್ಳಾರಿಜಿಲ್ಲೆಯ ಬಳ್ಳಾರಿ ಶಿರಗುಪ್ಪ ತಾಲೂಕುಗಳು ಂಧ್ರ ಪ್ರವೇಶದ ಗಡಿಭಾಗಕ್ಕೆ ಅಂಟಿಕೊಂಡಿದ್ದು **ರಾವರಿಯ ಈ ಪ್ರದೇಶದಲ್ಲಿ ಅಂಧ್ರದ ವಲಸೆಗಾರ ತರು ಕ್ಯಾಂಪುಗಳಲ್ಲಿ ಬೀಡುಬಿಟ್ಟಿದ್ದಾರೆ! ಈ** ಲಸೆಗಾರರೇ ಈ ಪ್ರದೇಶದಲ್ಲಿ ವಾಣಿಜ್ಯ ಬೆಳೆಗಳನ್ನು ೂತ್ತು ತಂದವರೆಂದರೆ ಆಶ್ಚರ್ಯ ಪಡಬೇಕಿಲ್ಲ!

ಕಳೆದ 20-25 ವರ್ಷಗಳ ಹಿಂದೆ ಇಲ್ಲಿನ ರೈತರು ೋಳ, ಮೆಕ್ಕೆ ಜೋಳ, ಸಜ್ಜೆ, ನವಣೆ, ತೊಗರಿ ುಂತಾದ ಆಹಾರದ ಬೆಳೆ ಬೆಳೆದು ಹೊಟ್ಟೆ ೂರೆಯಲಷ್ಟೇ ಸಾಧ್ಯವಿದ್ದ ಮಿತ ಜೀವನವನ್ನು ಹೆಚ್ಚಿನ ಂತೆಯಿಲ್ಲದೆ ಸಾಗಿಸುತ್ತಿದ್ದರು. ಆದಾಗಲೂ ಅವರ ತರೆ ಖರ್ಚುಗಳು ಚಿಂತೆಗೀಡು ಮಾಡಿದ್ದವು, ಈ ಳೆಗಳು ಇಂತಹವುಗಳಿಗೆ ಹಣ ಒದಗಿಸುತ್ತಿರಲಿಲ್ಲ.

ಾಣಿಜ್ಯ ಬೆಳೆಯೆಂಬ ಚಿನ್ನದ ಸಂಕೋಲೆ

ಇಂತಹ ಪರಿಸ್ಥಿತಿಯಲ್ಲಿಯೇ ಮಾರುಕಟ್ಟೆಗಾಗಿಯೇ ಳೆಯುತ್ತಿದ್ದ ಸೂರ್ಯಕಾಂತಿ, ಹತ್ತಿ ಭತ್ತ ಮುಂತಾದ ಳೆಗಳನ್ನು ವಲಸೆಗಾರರು ಪರಿಚಯಿಸಿದರು! ವರಲಕ್ಷ್ಮಿ ಯದಾರ್, ಡಿಸಿಹೆಚ್ ಹತ್ತಿತಳಿ ಜಿಲ್ಲೆಯ 5 ಲಕ್ಷ ಕರೆಗಳಷ್ಟು ಪ್ರದೇಶವನ್ನು ಆಕ್ರಮಿಸಿತು. ಜಿಲ್ಲೆಯ 2ನೇ ುಖ್ಯ ಬೆಳೆಯಾಗಿ ಮೂಡಿ ಬಂತು. ಅಂದಿನಿಂದ ರಂಭವಾದ ರೈತರ ಸಂಕಷ್ಟ ಈಗಲೂ ುಂದುವರೆದಿದೆ. ಮಾರುಕಟ್ಟೆಗಾಗಿಯೇ ಬೆಳೆಯುವ ಈ ವಾಣಿಜ್ಯ ಬೆಳೆಗಳು ರೈತರಿಗೆ ಚಿನ್ನದ ಂಕೋಲೆಯಾಗಿ ಪರಿಣಮಿಸಿದೆ.

ಕಳಪೆ ಬೀಜ, ಕಳಪೆ ರಸಾಯನಿಕ ಗೊಬ್ಬರ, ಕಳಪೆ ್ರಿಮಿನಾಶಕಗಳ ಮಾರಾಟಗಾರರು, ಕಂಪೆನಿಗಳು ುಥೇಚ್ಛವಾಗಿ ಲೂಟಿ ಮಾಡಿ ನೂರಾರು ಕೋಟಿ ೂಪಾಯಿಗಳ ಲಾಭ ಹೊಡೆದಿವೆ.

ಆರಂಭದ ಒಂದೆರಡು ವರ್ಷಗಳಲ್ಲಿ ಎಕರೆಗೆ 5ರಿಂದ 18 ಕ್ವಿಂಟಾಲ್ ಹತ್ತಿ ಇಳುವರಿ ಪಡೆಯುತ್ತಿದ್ದ ೈತರು ಸರ್ವನಾಶವಾಗುವವರೆಗೂ ಈ ಬೆಳೆಯ ಂಬಿಡದ ಪರಿಸ್ಥಿತಿ ನಿರ್ಮಿಸಿತು!

ಕಳೆದ 8-10 ವರ್ಷಗಳಿಂದ ತುಂಗಭದ್ರಾ ಬಲದಂಡೆ ಚ್.ಎಲ್.ಸಿ. ಕಾಲುವೆ ವ್ಯಾಪ್ತಿಯ ಪ್ರದೇಶದಲ್ಲಿ ರಿಂದ 8 ಕ್ವಿಂಟಾಲ್‌ಗೆ ಇಳುವರಿ ಕುಸಿದಿದೆ! ೂತೆಯಲ್ಲಿ ಉತ್ಪಾದನಾ ವೆಚ್ಚ ಏರಿಸಿದ ಲಾಗುವಾಡಿನ ಲೆಗಳು, ಆಮದು ನೀತಿಯಿಂದಾಗಿ ಕುಸಿದ ಬೆಲೆಗಳು ವರನ್ನೂ ಸಾಲದ ಪ್ರಪಾತಕ್ಕೆ ತಳ್ಳಿತು.

ಈ ನಡುವೆ ಮಾನ್ಯ ವಿ.ಪಿ.ಸಿಂಗ್‌ರು, ಹಾಗೂ ಮಾನ್ಯ ರಾಮಕೃಷ್ಣ ಹೆಗಡೆಯವರು ಒಮ್ಮೆ ಕೇಂದ್ರ ಸರ್ಕಾರದಿಂದ ಇನ್ನೊಮ್ಮೆ ರಾಜ್ಯದಿಂದ ಸಾಲ ಹಾಗೂ ಬಡ್ಡಿ ಮನ್ನಾಮಾಡಿದರೂ ಮೇಲೇಳಲಿಲ್ಲ. ಕಡಿಮೆ ಬಡ್ಡಿಸಾಲದ ಬ್ಯಾಂಕ್‌ಗಳು ಸೊಸೈಟಿಗಳು ನಡುನೀರಿನಲ್ಲಿ ಕೈಬಿಟ್ಟವು! ಆಗ ಇವರಿಗೆ ಆಸರೆಯಾಗಿ ಬಂದುದೇ ಈ ಮೆಣಸಿನಕಾಯಿ ಬೆಳೆ.

ಪ್ರತಿ ಕ್ವಿಂಟಾಲ್‌ಗೆ 5 ರಿಂದ 6 ಸಾವಿರ ರೂಪಾಯಿಗಳು ಮಾರುಕಟ್ಟೆ ಬೆಲೆ ಹಾಗೂ ಪ್ರತಿ ಎಕರೆಗೆ 10 ರಿಂದ 15 ಕ್ವಿಂಟಾಲ್ ಸಾಮಾನ್ಯ ಬೆಳೆ ಖರ್ಚು ಪ್ರತಿ ಎಕರೆಗೆ 15 ಸಾವಿರ ಮಾತ್ರವೆಂಬುದು, ಮುಳುಗುವವನಿಗೆ ಹುಲುಕಡ್ಡಿಯೂ ಆಸರೆಯಾಗುವಂತೆ ಆಶಾಭಾವನೆ ಸೃಷ್ಟಿಸಿತು! ಆಗಲೂ ಜಿಲ್ಲೆಗೆ ಈ ವಾಣಿಜ್ಯ ಬೆಳೆ ಪರಿಚಯಿಸಿದವರೂ ಈ ವಲಸೆಗಾರರೇ.

ಈಗದು ಹತ್ತಿ ಬೆಳೆಯನ್ನು ಹಿಂದೆ ಸರಿಸಿ ಜಿಲ್ಲೆಯಲ್ಲಿ ಸುಮಾರು 60 ಸಾವಿರ ಎಕರೆ ಪ್ರದೇಶವನ್ನು ಆಕ್ರಮಿಸಿದೆ!

ಜನತೆಯ ನಿರೀಕ್ಷೆ ಹುಸಿಯಾಗಿದೆ! ಕಳಪೆ ದಾಸ್ತಾನಿನ ಕಾರಣವೂ ಸೇರಿ ಉತ್ಪಾದನಾ ವೆಚ್ಚ ಪ್ರತಿ ಎಕರೆಗೆ ಸರಾಸರಿ 20 ರಿಂದ 25 ಸಾವಿರ (ಅಸಲು)ವಾಗಿ ರೈತರಿಗೆ ಭಾರಿ ಹೊರೆಯಾಗಿದೆ. 5 ಕ್ವಿಂಟಾಲ್ ಇಳುವರಿ ಬಂದರೆ ಬಂಪರ್ ಬೆಳೆ ಎನ್ನುವ ಪರಿಸ್ಥಿತಿ ಉಂಟಾಗಿದೆ! ಬೆಲೆಯು 1800 ರಿಂದ 2000 ವನ್ನು ಸುಗ್ಗಿಯ ಸಮಯದಲ್ಲಿ ದಾಟದಾಗಿದೆ.

ಸಾಲದ ಕುಣಿಕೆಯಲ್ಲಿ

ಹಳ್ಳಿಯಲ್ಲಿ ಕೊಳ್ಳುವ ಮಧ್ಯವರ್ತಿ ವ್ಯಾಪಾರಸ್ಥರನ್ನು ಬಿಟ್ಟು ದೇಶದ ಉದ್ದಗಲಕ್ಕೆ ಸಂಚರಿಸಿ ಮಾರುಕಟ್ಟೆ ಹಿಡಿದ ರೈತರಿಗೆ ಕಹಿ ಅನುಭವವಾಗಿದೆ. ಬೆಲೆ ಕುಸಿತವು ಸಂಕಷ್ಟಗಳನ್ನು ಮತ್ತಷ್ಟು ಹೆಚ್ಚಿಸಿದೆ!

ಈಗಲೂ ಕಳಪೆ ಬೀಜ ಕಳಪೆಗೊಬ್ಬರ ಕಳಪೆ ಕ್ರಿಮಿನಾಶಕಗಳನ್ನು ತಡೆಯಲು ಸರ್ಕಾರದಿಂದ ಸಾಧ್ಯವಾಗಿಲ್ಲ. ಇದೀಗ ಪ್ರತಿಯೊಬ್ಬ ರೈತನ ತಲೆಯ ಮೇಲೆ ಲಕ್ಷಾಂತರ ರೂಪಾಯಿಗಳ ಸಾಲವು ಕತ್ತಿ ತೂಗುತ್ತಿದೆ. ಖಾಸಗೀ ಸಾಲವೂ ಬಡ್ಡಿದರವನ್ನು ಶೇ. 60ರಷ್ಟು ಹೆಚ್ಚಿಸಿಕೊಂಡಿದೆ. ಬಡ ರೈತರಿಗಾದರೆ ಶೇ 120 ರಷ್ಟು ಬಡ್ಡಿ ದರವಿರುವುದು ಗುಟ್ಟಿನ ವಿಷಯವೇನಿಲ್ಲ!. ಇದು ಹೀಗಿರುವಾಗಲೇ ಬಳ್ಳಾರಿ ತಾಲೂಕಿನ 4 ಜನ ರೈತರು ಸಾಲದ ಬಾಧೆ ತಾಳಲಾಗದೆ ವಿಷ ಕುಡಿದ ದೇಶದ ಗಮನ ಸೆಳೆದರು.

ಈ ಪರಿಸ್ಥಿತಿಯ ಜೊತೆಯಲ್ಲಿಯೇ ಈ ವರ್ಷದ ಬೆಳೆನಷ್ಟವು ಮತ್ತಷ್ಟು ರೈತರ ಆತ್ಮಹತ್ಯೆಗೆ ಸೆಳೆಯಿತು. ಆದಾಗಲೇ ಜಿಲ್ಲಾ ಕೇಂದ್ರದಲ್ಲಿ ಹೋರಾಟದ ಕಾವೇರಿತು! ಕರ್ನಾಟಕ ಪ್ರಾಂತ ರೈತ ಸಂಘ ಬಳ್ಳಾರಿ ಜಿಲ್ಲಾ ರೈತ-ರೈತ ಕಾರ್ಮಿಕರ ಸಂಘ, ಜಿಲ್ಲಾ ಕೃಷಿಕ ಸಮಾಜಗಳು ಜಂಟಿಯಾಗಿ ಹೋರಾಟಸಮಿತಿ ರೂಪಿಸಿಕೊಂಡವು! ನಂತರ ಬಳ್ಳಾರಿ ಜಿಲ್ಲಾ ಅಭಿವೃದ್ಧಿ ಕ್ರಿಯಾ ಸಮಿತಿ ತನ್ನ ಕೈಜೋಡಿಸಿತು.

2 ಸಾವಿರಕ್ಕೂ ಹೆಚ್ಚು ರೈತರನ್ನು ಒಗ್ಗೂಡಿಸಿ ಜಿಲ್ಲಾ ಕೇಂದ್ರದಲ್ಲಿ ರಸ್ತೆ ತಡೆನಡೆಸಿ ರಾಜ್ಯದ ಮಂತ್ರಿ ಹೆಚ್.ಕೆ. ಪಾಟೀಲರನ್ನು ಸಮಿತಿಯು ಎದುರಿಸಿತು.

ಈ ಮೊದಲೇ ತೋಟಗಾರಿಕಾ ಸಚಿವರು ಬೆಳೆನಷ್ಟ ಅಂದಾಜು ಮಾಡುವಂತೆ ಇಲಾಖೆಗೆ ಸೂಚಿಸಿ ನೊಂದ ರೈತರಿಗೆ ಕಳಕಳಿ ವ್ಯಕ್ತಪಡಿಸಿದರು.

ಮುಂದುವರೆದ ಹೋರಾಟ ಸಮಿತಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಬೇಡಿಕೆಗಳ ಪಟ್ಟಿಯನ್ನೇ ಮಂಡಿಸಿತು! ಕೂಡಲೇ ಸರ್ಕಾರದಿಂದ ನೆರವು ಸಿಗದೇ ಹೋದಾಗ ಪ್ರತಿದಿನ ನೂರಾರು ರೈತರನ್ನು ಸೇರಿಸಿ ಹಲವು ದಿನ ಇಲಾಖೆಯ ಕಛೇರಿ ಎದುರು ಧರಣಿ ನಡೆಸಿ ಪ್ರತಿಭಟಿಸಿತು! ದಿನ ಪತ್ರಿಕೆಗಳು ರೈತರ ನೋವಿಗೆ ಸ್ಪಂದಿಸಿದವು! ವಿಧಾನ ಸಭೆಯಲ್ಲಿ ವಿರೋಧ ಪಕ್ಷಗಳು ಗುಡುಗಿದವೂ, ಜಿಲ್ಲಾ ಪಂಚಾಯತಿ, ತಾಲೂಕು ಪಂಚಾಯಿತಿಗಳು ತೀರ್ಮಾನಿಸಿದವೂ! ಇಷ್ಟಾದರೂ ಕವಡೆಕಾಸಿನ, ಬೆಲೆ ದೊರೆಯದಾದಾಗ ಸಮಿತಿಯು ಮುಖ್ಯಮಂತ್ರಿಗಳ ಮನೆಯ ಮುಂದೆ ಧರಣಿ ನಡೆಸಲು ತೀರ್ಮಾನಿಸಿತು. ಈ ಬಗ್ಗೆ ಪ್ರಚಾರ ಪ್ರಕ್ಷೋಭೆಗಾಗಿ 3 ಕಡೆ ಜೀಪ್ ಜಾಥಾ ನಡೆಸಿತು.

ನೀರೂರಿಸಿ ಹೋದ ಕೃಷಿಸಚಿವರು

ಡಿಸೆಂಬರ್ 20, 1999ರಂದು 2 ಸಾವಿರದಷ್ಟು ರೈತರನ್ನು ಅಣಿನೆರೆಸಿ ಮುಖ್ಯ ಮಂತ್ರಿಗಳ ಮನೆಯೆದುರು ಧರಣಿ ನಡೆಸಿತು. ಮುಖ್ಯಮಂತ್ರಿಗಳಲ್ಲಾ ಬಂದಿದ್ದು ಕೃಷಿಮಂತ್ರಿಗಳು!

ಎಕರೆಗೆ 10 ಸಾವಿರ ನಷ್ಟ ಪರಿಹಾರ ಕೊಡದಿದ್ದರೂ ನಿರಾಶೆ ಮಾಡುವುದಿಲ್ಲ, ನಿಮ್ಮನೋವು ನನ್ನ ನೋವು, ಭೂ ಕಂದಾಯ- ನೀರಾವರಿ ಕಂದಾಯ ಮನ್ನಾಕ್ಕಾಗಿ, ಸಹಕಾರಿ ಹಾಗೂ ಬ್ಯಾಂಕ್ ಸಾಲದ ಬಡ್ಡಿ ಮನ್ನಾಕ್ಕಾಗಿ ಮತ್ತು ಶಾಶ್ವತ ಪರಿಹಾರವಾಗಿ ಬೆಲೆ ವಿಮೆಗಾಗಿ ನಾನು ನನ್ನ ಮಂತ್ರಿ ಮಹೋದಯರ ಜೊತೆ ಚರ್ಚಿಸಿ 2.1.2000ದೊಳಗೆ ಪರಿಹಾರ ಘೋಷಿಸುವುದಾಗಿ, ಈ ಬಗ್ಗೆ ಇಲಾಖೆಯಿಂದ ನಷ್ಟವಾದ ಪ್ರದೇಶದ ಅಂಕಿ ಸಂಖ್ಯೆ ತರಿಸಿಕೊಳ್ಳುವುದಾಗಿ, ಏನಾದರೂ ನೀಡಿಯೇ ತೀರುತ್ತೇನೆಂದು ರೈತರ ಬಾಯಿಯೊಳಗೆ ನೀರೂರಿಸಿ ಹೊರಟು ಹೋದರಷ್ಟೇ.

ಮಾನ್ಯ ಎಸ್.ಎಂ. ಕೃಷ್ಣಾರವರು ಬಳ್ಳಾರಿ ಜಿಲ್ಲಾ ಪಂಚಾಯತ್ ಅಭಿವೃದ್ಧಿ ಪರಿಶೀಲಿಸಲು ಬಂದಾಗ ರೈತರ ಮುಖಂಡರಿಗೆ ಸಹಾನುಭೂತಿಯಿಂದ ನೋಡುವುದಾಗಿ ತಿಳಿಸಿದ ಅವರು ಮತ್ತೊಂದೆಡೆ ಪತ್ರಿಕಾ ಬಳಗದ ಮುಂದೆ ಎಲ್ಲಿಂದ ಕೊಡಲು ಸಾಧ್ಯವೆಂದು ಸಾರಸಗಟು ತಿರಸ್ಕರಿಸಿದ್ದಾರೆ.

ಯಕ್ಷ ಪ್ರಶ್ನೆ

ಬ್ಯಾಡಗಿ-ಗುಂಟೂರು ತಳಿಯ ಮೆಣಸಿನಕಾಯಿ ಬೆಳೆ ಶೇ. 90ರಷ್ಟು ನಷ್ಟವಾಗಿದೆ ಎಂಬುದು ರೈತ ಮುಂದಾಳುಗಳ ಅಂದಾಜು. 5000 ದಷ್ಟು ಅರ್ಜಿಗಳು ನಷ್ಟ ಪರಿಹಾರ ಕೋರಿ ಅರ್ಜಿ ಬಂದಿದೆಯೆಂದು ತೋಟಗಾರಿಕೆ ಇಲಾಖೆಯ ಮೂಲಗಳ ವರದಿ ಇದೆ.

ಜಿಲ್ಲೆಯಾದ್ಯಂತ ಉತ್ಪಾದನಾ ವೆಚ್ಚವೊಂದೆ 80 ಕೋಟಿಯಾಗಲಿದೆ. 200 ಕೋಟಿಗಳ ಇಳುವರಿ ನಿರೀಕ್ಷೆ ತೋಪಾಗಿದೆ.

ವೈರಸ್ ನಿಯಂತ್ರಿಸಲು ಯಾಕೆ ಸಾಧ್ಯವಾಗಲಿಲ್ಲ! ಕಳಪೆ ಬೀಜ ಗೊಬ್ಬರ, ಕ್ರಿಮಿನಾಶಕಗಳು ಕಾರಣವೇ ಎಂಬ ಯಕ್ಷ ಪ್ರಶ್ನೆ ಈಗಲೂ ರೈತರನ್ನು ಕಾಡುತ್ತಿದೆ. ಕೃಷಿ ವಿಜ್ಞಾನಿಗಳಾಗಲೀ-ತೋಟಗಾರಿಕೆ ಇಲಾಖೆಯಾಗಲಿ ಈ ಬಗ್ಗೆ ತಲೆ ಕೆಡಿಸಿಕೊಂಡಂತಿಲ್ಲ.


ಹೆಚ್ಚಾಗಿ ಗೊಬ್ಬರ, ಕ್ರಿಮಿನಾಶಕ ಬಳಸುವುದು ಹಾಗೇ ಒಂದೇ ಹೊಲದಲ್ಲಿ ನಾಟಿ ಮಾಡುವುದೇ ಬೆಳೆ ವಿಫಲತೆಗೆ ಕಾರಣವೆಂದು ಕೆಲವು ಅಧಿಕಾರಿಗಳ ಅಂಬೋಣ ಇದು ಹಳೆಯರಾಗವೆಂದು ರೈತರು ತಿರಸ್ಕರಿಸುತ್ತಿದ್ದಾರೆ.

ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ಅಧ್ಯಕ್ಷರಾದ ಕಾ|| ವಿ.ಎಸ್. ಶಿವಶಂಕರ್, ಕೆ. ಗಾದಿಲಿಂಗಪ್ಪ, ರೈತ-ರೈತಕಾರ್ಮಿಕ ಸಂಘದ ಕಟ್ಟಿಮನೆ, ಶಿವರಾಮಪ್ಪ, ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಎಂ. ಜಂಬುನಾಥ ಹಾಗೂ ತಾಲೂಕು ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಕೆ. ತಿಮ್ಮಾರೆಡ್ಡಿ ಹೋರಾಟದುದ್ದಕ್ಕೂ ಶ್ರಮಿಸಿ ಬಳ್ಳಾರಿ ಜಿಲ್ಲಾ ಅಭಿವೃದ್ಧಿ ಕ್ರಿಯಾ ಸಮಿತಿಯ ವೆಂಕಟೇಶ್ವರರಾವ್ ಯು. ಬಸವರಾಜ, ಸೋಮ ಶೇಖರ್, ದೊಡ್ಡನಗೌಡ ಮುಂತಾಗಿ ಭಾಗವಹಿಸಿ ನಾಯಕತ್ವ ನೀಡಿ ರೈತರ ನೆರವಿಗೆ ಧಾವಿಸಿದುದು ಶ್ಲಾಘನೀಯ.

ಮರೀಚಿಕೆಯಾಗಿ ಉಳಿದಿರುವ ಪರಿಹಾರ

ತೋಟಗಾರಿಕಾ ಮಂತ್ರಿಗಳು ರೈತರ ಪರ ನಿಜಕಾಳಜಿ ವ್ಯಕ್ತಪಡಿಸುತ್ತಾ-ಮಂತ್ರಿ ಮಂಡಲ ನೆರವಾಗದಿರುವ ಬಗ್ಗೆ ಕೈ-ಕೈ ಹಿಸುಕಿಕೊಂಡು ಒಂದು ಹಂತದಲ್ಲಿ ರೈತರ ಜೊತೆ ಧರಣಿ ಕೂಡುವುದಾಗಿ ಹೇಳಿದರೂ ಹಾಗೇನು ಮಾಡಲಿಲ್ಲ.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಪರವಾಗಿ ಪ್ರಧಾನ ಕಾರ್ಯದರ್ಶಿ ಪಿ. ಜಗನ್ನಾಥ್ ಬೆಂಬಲಿಸಿ ಮಾತನಾಡಿ ರಾಜ್ಯ ಸರ್ಕಾರದ ವಿಳಂಬ ನೀತಿಯನ್ನು ಖಂಡಿಸಿ ಧರಣಿ ನಿರತರಿಗೆ ಹುರಿ ದುಂಬಿಸಿದರು. ದೇಶಕ್ಕೆ ಯಾಕೆ, ಜಗತ್ತಿಗೆ ಖಾರ ಮಸಾಲೆ ಕೊಟ್ಟು ಖುಷಿ ಕೊಡುವ ರೈತನಿಗೆ ಪರಿಹಾರವೆಂಬುದು ಇನ್ನೂ ಮರೀಚಿಕೆಯಾಗಿದೆ.



ಗೊಂದಲದಲ್ಲಿ ಸಿಕ್ಕಿಕೊಂಡಿರುವ ಆಲಮಟ್ಟಿ ಹೋರಾಟ ಸಮಿತಿ

ಎನ್.ಕೆ.ಉಪಾಧ್ಯಾಯ

ಕೃಷ್ಣಾನದಿಗೆ ಕಟ್ಟುವ ಆಲಮಟ್ಟಿ ಅಣೆಕಟ್ಟೆ 'ಎ'ಸ್ಕೀಮಿಗಷ್ಟೇ ಕೇಂದ್ರ ಸರಕಾರ ಮಂಜೂರಾತಿ ನೀಡಿದೆಂಬ ಅಂಶವನ್ನೊಳಗೊಂಡ ಒಂದು ಅಫಿಡೆವಿಟ್ಟನ್ನು ಕೇಂದ್ರ ಎನ್.ಡಿ.ಎ. ಸರಕಾರ 1999 ರ ನವೆಂಬರ್ ಪ್ರಥಮ ವಾರದಲ್ಲಿ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದೆ. ಇದು ಹಿಂದಿನ ಸಂಯುಕ್ತ ರಂಗ ಸಲ್ಲಿಸಿದ ಅಫಿಡೆವಿಟ್‌ಗೆ ವ್ಯತಿರಿಕ್ತವಾಗಿದೆ. ಶ್ರೇಷ್ಠ ನ್ಯಾಯಾಲಯುದಲ್ಲಿ ಆಂಧ್ರ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಆಲಮಟ್ಟಿ ಅಣೆಕಟ್ಟಿನ ಎತ್ತರ ಕುರಿತು ಸಲ್ಲಿಸಿದ ಅರ್ಜಿ ವಿಚಾರಣೆಯಲ್ಲಿದ್ದಾಗ ಕೇಂದ್ರ ಸರಕಾರದ ಈ ಅಫಿಡೆವಿಟ್ ಮುಖ್ಯವಾಗಿ ಬಿಜಾಪುರ, ಗುಲ್ಬರ್ಗ, ರಾಯಚೂರು ಜಿಲ್ಲೆಗಳಲ್ಲಿ ತೀವ್ರ ಅಸಮಾಧಾನ ಉಂಟು ಮಾಡಿದೆ. ಎಲ್ಲ ರಾಜಕೀಯ ಪಕ್ಷಗಳೂ, ರೈತ ಸಂಘಗಳೂ ಕೇಂದ್ರ ಸರಕಾರದ ಈ ಕ್ರಮವನ್ನು ಬಲವಾಗಿ ಖಂಡಿಸಿ ಹೋರಾಟದ ಕರೆ ಕೊಡುತ್ತಾ ಬಂದಿದ್ದಾರೆ.

ಕಳೆದ ಒಂದು ವರ್ಷದಿಂದ ಆಲಮಟ್ಟಿ ಅಣೆಕಟ್ಟಿನ ಎತ್ತರ, ಕ್ರಸ್ಟ್ ಗೇಟ್ ಜೋಡಣೆ ಕುರಿತು ಆಂಧ್ರ - ಕರ್ನಾಟಕದ ಮಧ್ಯೆ ಭಿನ್ನಾಭಿಪ್ರಾಯ ತೀವ್ರಗೊಂಡು ಕೋರ್ಟು ಕಟ್ಟೆ ಹತ್ತಿದೆ. ಸುಪ್ರೀಂ ಕೋರ್ಟ್‌ನ ಮುಂದೆ ಪ್ರಕರಣ ವಿಚಾರಣೆಗಿದೆ. ಇಂಥ ಸಂದರ್ಭದಲ್ಲಿ ಎನ್.ಡಿ.ಎ. ಕೇಂದ್ರ ಸರಕಾರ ಸಲ್ಲಿಸಿದ ಅಫಿಡವಿಟ್ಟಿನಿಂದುಂಟಾದ ಅಸಮಾಧಾವನ್ನು ತಮ್ಮ ಪಕ್ಷದ ಹಿತಕ್ಕಾಗಿ ಬಳಸಿಕೊಳ್ಳಲು ಕಾಂಗ್ರೆಸ್, ಜನತಾದಳ(ಎಸ್), ಜನತಾದಳ(ಯು), ಬಿಜೆಪಿ. ಪಕ್ಷಗಳು ತುದಿಗಾಲ ಮೇಲೆ ನಿಂತು ಕೃಷ್ಣ ಮೇಲ್ದಂಡೆ ಯೋಜನೆಗಳ, ಆಲಮಟ್ಟಿ ಅಣೆಕಟ್ಟಿನ ಎತ್ತರದ ನಿಜವಾದ ಹಿತರಕ್ಷಕರು ತಾವೇ ಎಂಬುದನ್ನು ತೋರಿಸಿಕೊಡುವ ಪ್ರಯತ್ನದಲ್ಲಿದ್ದಾರೆ. ರಾಜ್ಯದ ನೀರಾವರಿ ಯೋಜನೆಗಳಿಗಾಗಲೀ, ಕೃಷ್ಣಾ ಮೇಲ್ದಂಡೆ ಯೋಜನೆ, ಆಲಮಟ್ಟಿ ಅಣೆಕಟ್ಟಿಗಾಗಲೀ ಕಿಂಚಿತ್ತು ಚಿಂತಿಸದೆ, ಅವುಗಳ ಕುರಿತು ಚಕಾರವೆಬ್ಬಿಸದೆ, ಆ ಯೋಜನೆಗಳ ಕುರಿತು ಕಿಂಚಿತ್ತೂ ಅಭ್ಯಾಸ ಮಾಡದೆ ಕೇಂದ್ರ ಸರಕಾರ ಸಲ್ಲಿಸಿದ ಅಫಿಡಾವಿಟ್ ಕುರಿತು ಈಜನ ಗುಲ್ಲೆಬ್ಬಿಸುತ್ತಿದ್ದಾರೆ. ಅವರ ಮುಖ್ಯ ಉದ್ದೇಶ ಆಲಮಟ್ಟಿ ಅಣೆಕಟ್ಟಿನ ಎತ್ತರವೂ ಅಲ್ಲ, ವಿದ್ಯುತ್ ಉತ್ಪಾದನೆಯೂ ಅಲ್ಲ. ತಮ್ಮ ಪಕ್ಷಗಳ ಮತ್ತು ತಂತಮ್ಮ ಪಕ್ಷಗಳಿಂದ ಆರಿಸಿ ಬಂದಿರುವ ಜನಪ್ರತಿನಿಧಿಗಳಿಂದ, ಮಂತ್ರಿಗಳಿಂದ ಜನರ ಉಳಿವಿಗೆ ಅತ್ಯವಶ್ಯಕವಾಗಿ ಬೇಕಾಗಿರುವ ಆಲಮಟ್ಟಿ ಅಣೆಕಟ್ಟೆ, ಕೃಷ್ಣಾ ನೀರಾವರಿ ಯೋಜನೆಗಳತ್ತ ನಿರ್ಲಕ್ಷ್ಯ ತೋರಿಸಿ ಅವುಗಳ ಅನುಷ್ಠಾನಕ್ಕೆ ರಾಜಕೀಯ ನಿರ್ಧಾರ ತೋರ್ಪಡಿಸದೆ ಈಗ ಕಳಕೊಂಡಿರುವ ಜನಬೆಂಬಲ ಪಡೆಯುವ ಏಕೈಕ ಉದ್ದೇಶದಿಂದ ಈ ಜನ ಕರಸೇವೆಯ ಕರೆ ಕೊಡುತ್ತಿದ್ದಾರೆ.ತಾವು ಕಳಕೊಂಡಿರುವ ಜನಬೆಂಬಲ ಮತ್ತೆ ಪಡಕೊಳ್ಳಬೇಕು, ಇನ್ನೂ ಹೆಚ್ಚಿನ ಜನರ ಮತಗಳನ್ನು ಗಿಟ್ಟಿಸಬೇಕು, ಜನರ ಜೀವಂತ ಸಮಸ್ಯೆಗಳಿಗೆ ನಾವೇ ಸ್ಪಂದಿಸುವವರೆಂದು ತೋರಿಸಬೇಕೆಂಬ ಹವಣಿಕೆಯಲ್ಲಿದ್ದಾರೆ. ಹಲವಾರು ಸಲ ಶಾಸಕರಾಗಿ, ಮಂತ್ರಿಗಳಾಗಿ, ಈಗ ಕ್ರಿಯಾ ಸಮಿತಿಯ ಮುಖಂಡರಾಗಿರವವರು ಬಚಾವತ್ ಆಯೋಗದ ವರದಿಯನ್ನು ಓದಿಲ್ಲ, ಮೊನ್ನೆಯುವರೆಗೆ ಆ ಆಯೋಗದ ಶಿಫಾರಸು ಯಾವಾಗ ಕೊನೆಗೊಳ್ಳುತ್ತದೆಂಬ ಅಂಶವನ್ನು ತಿಳಿದುಕೊಂಡಿಲ್ಲ. ಹಾಗಾಗಿ ಆ ಹೋರಾಟ ಸಮಿತಿಯಲ್ಲಿ ಗೊಂದಲ ಉಂಟಾಗಿದೆ.

ಕರ್ನಾಟಕ ಪ್ರಾಂತ ರೈತ ಸಂಘ ಕೃಷ್ಣಾ ಮೇಲ್ದಂಡೆ ಯೋಜನೆ ಮತ್ತು ಆಲಮಟ್ಟಿ ಅಣೆಕಟ್ಟಿನ ಎತ್ತರದ ಕುರಿತು ಹಾಗೆಯೇ ಕೇಂದ್ರ ಸರಕಾರ ಸಲ್ಲಿಸಿರುವ ಅಫಿಡೆವಿಟ್ ಕುರಿತು ನಿರ್ದಿಷ್ಟ ಧೋರಣೆ ಹೊಂದಿದೆ. ಆಯೋಜನೆಗಳ ಅನುಷ್ಠಾನಕ್ಕಾಗಿ ನಿರಂತರ ಹೋರಾಡುತ್ತಾ ಬಂದಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಕುರಿತು ರೈತರಲ್ಲಿ ಇನ್ನೂ ಹೆಚ್ಚಿನ ಜಾಗೃತಿ ಮೂಡಿಸಿ, ಅಫಿಡಾವಿಟ್ ಸಲ್ಲಿಸಿರುವ ಕೇಂದ್ರ ಸರಕಾರದ ದುರುದ್ದೇಶವನ್ನು ರೈತರ ಮಧ್ಯೆ ಪ್ರಚಾರ ಮಾಡಿ, ಈ ಯೋಜನೆಗಳ ಫಲ ಆದಷ್ಟು ಬೇಗ ರೈತರಿಗೆ ಲಭ್ಯವಾಗುವಂತೆ ಕ್ರಮಕೈಗೊಳ್ಳಬೇಕೆಂದು ಕೇಂದ್ರ-ರಾಜ್ಯ ಸರ್ಕಾರಗಳ ಮೇಲೆ ಒತ್ತಡ ಹೇರುವ ಉದ್ದೇಶದಿಂದ ಬಿಜಾಪುರ, ಗುಲ್ಬರ್ಗ, ರಾಯಚೂರುಗಳಿಂದ ಮೂರು ಜಾಥಾಗಳನ್ನು ಹೊರಡಿಸಿ, ಕೃಷ್ಣ ಮೇಲ್ದಂಡೆ ಯೋಜನೆಗಳಿಗೊಳ ಪಡುವ ಬಿಜಾಪುರ, ಗುಲ್ಬರ್ಗ, ರಾಯಚೂರು, ಬಳ್ಳಾರಿ ಮತ್ತು ಬೆಳಗಾವಿ ಜಿಲ್ಲೆಗಳ ರೈತರನ್ನೊಳಗೊಂಡ ಸಮಾವೇಶವನ್ನು 1999 ಡಿಸೆಂಬರ್ 30 ರಂದು ಆಲಮಟ್ಟಿಯಲ್ಲಿ ನಡೆಸಬೇಕೆಂದು. ಕ.ಪ್ರಾಂ.ರೈತ ಸಂಘ ನಿರ್ಣಯಿಸಿತು. ಆಲಮಟ್ಟಿಯಲ್ಲಿ ಸೇರಿದ್ದ ಸಮಾವೇಶ, ಕೃಷ್ಣ ಮೇಲ್ದಂಡೆಯೋಜನೆಗಳಿಗಾಗಿ ನಡೆಸಿದ ಹೋರಾಟಗಳನ್ನು ಮೆಲುಕು ಹಾಕಿ, ಬಚಾವತ್ ಆಯೋಗದ ಶಿಫಾರಸುಗಳನ್ನು ವಿವರಿಸಿ, ಕೇಂದ್ರ ಸರಕಾರ ಯಾವ ಉದ್ದೇಶದಿಂದ ಅಫಿಡೆವಿಟ್ ಸಲ್ಲಿಸಿರಬೇಕೆಂಬುದನ್ನು ರೈತರಿಗೆ ಮನದಟ್ಟು ಮಾಡಿಕೊಟ್ಟಿತು. ಆಲಮಟ್ಟಿ ಅಣೆಕಟ್ಟಿನ ಎತ್ತರದ ಸಮಸ್ಯೆ ಶ್ರೇಷ್ಠ ನ್ಯಾಯಾಲಯದ ಮುಂದಿರುವಾಗ ಕರಸೇವೆಯಂತಹ ಕಾರ್ಯಕ್ರಮ ಸಮಸ್ಯೆಯ ಇತ್ಯರ್ಥಕ್ಕೆ ಅನುಕೂಲವಾಗುವುದರ ಬದಲು ಅಡಚಣೆ ಮಾಡಬಹುದು ಎಂಬುದನ್ನು ಮನವರಿಕೆ ಮಾಡಿಕೊಟ್ಟಿತು.

ಬಚಾವತ್ ಆಯೋಗದ ಶಿಫಾರಸಿನಂತೆ ಕರ್ನಾಟಕ ಅನುಭವಿಸಬೇಕಾದ ಕೃಷ್ಣಾನದಿ ನೀರಿನ ಉಪಯೋಗಕ್ಕೆ ಅಡ್ಡಿ ಉಂಟುಮಾಡುವ ಕೇಂದ್ರ ಸರಕಾರದ ಅಫಿಡೆವಿಟ್‌ನ್ನು ಹಿಂದೆ ಪಡೆಯಬೇಕು, ಬಚಾವತ್ ಅವಾರ್ಡ್ ನಂತೆ ಕರ್ನಾಟಕಕ್ಕೆ ಸಲ್ಲತಕ್ಕ 739 ಟಿ.ಎಂ.ಸಿ. ನೀರನ್ನು ಶೇಕರಿಡಲಿಕ್ಕೆ ಬೇಕಾದ ಅಣೆಕಟ್ಟು, ನೀರು ಹರಿವಿಗೆ ಬೇಕಾದುವ ಕಾಲುವೆಗಳಿಗೆ ಯಾವುದೇ ರೀತಿಯ ಆತಂಕ ಉಂಟಾಗದಂತೆ ನೋಡಿಕೊಳ್ಳಬೇಕು. ಅದು ನಮ್ಮ ಹಕ್ಕು ಎಂಬ ನಿರ್ಣಯವನ್ನು ಆ ಸಮಾವೇಶದಲ್ಲಿ ಕೈಗೊಳ್ಳಲಾಯಿತು.

ಅದೇ ಸಮಯದಲ್ಲಿ 'ಬಿ'ಸ್ಕೀಮ್ ಎಂದು ಕರೆಯಲಾಗುವ 330 ಟಿ.ಎಂ.ಸಿ ಹೆಚ್ಚುವರಿ ನೀರಿನ ಸಮಸ್ಯೆಯನ್ನು ಪರಿಹರಿಸಲು ಬಚಾವತ್ ಆಯೋಗ ಸೂಚಿಸಿದಂತೆ ಕೃಷ್ಣಾ ಜಲಾನಯನ ಪ್ರಾದಿಕಾರವೊಂದನ್ನು ಕೇಂದ್ರ ಸರಕಾರ ನೇಮಿಸಬೇಕೆಂದೂ ಒತ್ತಾಯಿಸುವ ನಿರ್ಣಯಗಳನ್ನು ಸಮ್ಮೇಳನ ಕೈಗೊಂಡಿತು. ಹಾಗೆಯೇ ಮಾರ್ಚ್ ತಿಂಗಳಲ್ಲಿ ರೈತರ ನಿಯೋಗ ದಿಲ್ಲಿಯಲ್ಲಿ ಪ್ರಧಾನ ಮಂತ್ರಿಯವರಿಗೆ ಕುರಿತ ಮನವಿ ಸಲ್ಲಿಸಬೇಕೆಂದೂ ನಿರ್ಣಯಿಸಿ, ಶ್ರೇಷ್ಠ ನ್ಯಾಯಾಲಯದ ನಿರ್ಣಯ ನಂತರ, ಮುಂದಿನ ಕಾರ್ಯಕ್ರಮ ನಿರ್ಧರಿಸಬೇಕೆಂದು ತೀರ್ಮಾನಿಸಿತು.

ಕೇಂದ್ರ ಮತ್ತು ರಾಜ್ಯಗಳಲ್ಲಿ ಅಧಿಕಾರದಲ್ಲಿದ್ದ ಆಲಮಟ್ಟಿ ಯೋಜನೆಯ ಇಂದಿನ ದುರಂತ ಕಾರಣೀಭೂತರಾದ ರಾಜಕೀಯ ಪಕ್ಷಗಳ ನಾಯಕರು ಹೋರಾಟ ಸಮಿತಿಯ ಸಭೆ 2.1.2000 ರಂದು ಆಲಮಟ್ಟಿಯಲ್ಲಿ ಕರೆಯಲಾಗಿತ್ತು. ಹಿಂದಿನ ದಿವಸ ಅದನ್ನು ನಿಡಗುಡಿ ಗ್ರಾಮದಲ್ಲಿ ನಡೆಸುವುದೆಂದು ಪ್ರಕಟಿಸಲಾಯಿತು. ನಾಲ್ಕಾರು ಜ... ನಿಡಗುಂಡಿಯಲ್ಲಿ 10-15 ಜನ ಆಲಮಟ್ಟಿಯ ಗೆಸ್ಟ್ ಹೌಸಿನ ಗಾರ್ಡ್‌ನಲ್ಲಿ ಸೇರಿದ್ದರು. ಗುಲ್ಬರ್ಗದ ವೈಜನಾಥ ಪಾಟೀರಲು ಕ್ರಸ್ಟ್ ಗೇಟು ಕೂಡಿಸಲು ಕರಸೇವೆ ಮಾಡಬೇಕೆಂದು ಒತ್ತಾಯಿಸಿದರೆ, ಬೇರೆಯವರು ನಿರ್ದಿ... ಕಾರ್ಯಕ್ರಮ ಸೂಚಿಸಿದ ಕಾರಣ ಸ... ಗೊಂದಲದಲ್ಲಿ ಪರ್ಯವಸಾನವಾಯಿತು. ಒಂದು ನಿಯೋಗ ಮುಖ್ಯಮಂತ್ರಿ ಎಸ್.ಎಂ.ಕೃ... ಅವರನ್ನು ಭೇಟಿಯಾಗಬೇಕೆಂದು ನಿರ್ಣಯಿಸಿತು.

ರೈತ ಸಂಘದ ಸಮಾವೇಶದ ನಿರ್ಣಯಗಳ... ಸಾರ್ವಜನಿಕರೆಲ್ಲ ಪ್ರಶಂಸೆ ಮಾಡಿದ್ದಾರೆ. ರೀತಿ ಕ್ರಿಯಾ ಸಮಿತಿಯವ... ಬಹಿರಂಗವಾಗಿಯೇ ತಮ್ಮ ಭಿನ್ನಾಭಿಪ್ರಾಯಗಳ... ಬಹಿರಂಗಗೊಳಿಸಿ ಬರೇ ಪ್ರಚಾರಗಿಟ್ಟಿಸಿಕೊಳ್ಳ... ಸಲುವಾಗಿಯೇ ಕ್ರಿಯಾ ಸಮಿತಿ ರಚಿಸಿರುವುದು ಟೀಕಿಸುತ್ತಿದ್ದಾರೆ. ಆಲಮಟ್ಟಿಯಲ್ಲಿ ಸೇರುವ ಕ್ರಿಯಾ ಸಮಿತಿಯ ಸಭೆಯಲ್ಲಿ ತಾ... ಭಾಗವಹಿಸುವುದಾಗಿ ಪ್ರಕಟಿಸಿ, ಆ ದಿವ... ಆಲಮಟ್ಟಿಗೆ ಒಂದು ಕ್ರಿಯಾ ಸಮಿತಿ ಸಭೆಯ... ಭಾಗವಹಿಸದೆ ಗೆಸ್ಟ್ ಹೌಸಿನೊಳಗಿದ್ದು ವೀರಾವೇಶದ ಪತ್ರಿಕಾ ಹೇಳಿಕೆ ನಿ... ಹಿಂದಿರುಗಿದ ಸಣ್ಣ ಕೈಗಾರಿಕಾ ಮಂ... ಕಾಶಪ್ಪನವರ ಚಿಂತಾಜನಕ ಪರಿಸ್ಥಿತಿ ಬಂಡವಾಳಶಾಹಿ ಪಕ್ಷಗಳ ಕ್ರಿಯಾ ಸಮಿತಿ... ದುರವಸ್ಥೆಯನ್ನು ಪ್ರತಿಬಿಂಬಿಸುತ್ತದಲ್ಲವೇ? ಇ... ಕರಸೇವೆ ಮಾಡುವವರೇ. ಕರಸೇವೆ... ಹೆಸರಿನಲ್ಲಿ ಪ್ರಚಾರ ಗಿಟ್ಟಿಸು... ಆಲಮಟ್ಟಿಯಲ್ಲಿ ಕರಸೇವೆ ಮಾಡಲಿಕ್ಕೇನಿದೆ. ಕ್ರ... ಗೇಟ್, ಸಿಲ್ಕ್ ಪ್ಲೇಟ್ ಕೂಡಿಸುವುದು... ಉಳಿದಿದೆ. ಅದು ... ಇಂಜಿನಿಯರುಗಳಿಂದಾಗಬೇಕಾಗಿದೆ. ಜನ... ಪ್ರಚೋದಿಸಿ, ಬಾಬ್ರಿ ಮಸೀದಿ ಕೆಡುವುದು... ಅದೂ ಕೂಡ ಶ್ರೇಷ್ಠ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದ್ದಾಗ ಈ ಕರಸೇವೆ ಅವಶ... ಈ ಪ್ರಶ್ನೆಗಳು ಜನರ ಮಧ್ಯೆ ಎದ್ದಿವೆ.

ಎಸ್.ಎಫ್.ಐ. 10 ನೇ ಅಖಿಲ ಭಾರತ ಸಮ್ಮೇಳನ


ಕೃಷ್ಣಪ್ರಸಾದ್ ಅಧ್ಯಕ್ಷರಾಗಿ, ಶಮಿಕ್ ಲಹರಿ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ

ಎಸ್‌ಎಫ್‌ಐ 10ನೇ ಅಖಿಲ ಭಾರತ ಸಮ್ಮೇಳನವು 75 ಸಂಗಾತಿಗಳ ನೂತನ ಕೇಂದ್ರ ಕಾರ್ಯಕಾರಿ ಸಮಿತಿಯನ್ನು ಆಯ್ಕೆಮಾಡಿತು. 7 ಸ್ಥಾನಗಳನ್ನು ಖಾಲಿಯಿರಿಸಿ 68 ಸಂಗಾತಿಗಳ CEC ಯನ್ನು ಆಯ್ಕೆ ಮಾಡಿತು. 15 ಸಂಗಾತಿಗಳ ಪದಾಧಿಕಾರಿಗಳ ಸಮಿತಿ ಹಾಗೂ ಅದಕ್ಕೆ 3 ಸಂಗಾತಿಗಳನ್ನು ಕಾಯಂ ಆಹ್ವಾನಿತರನ್ನಾಗಿ ಸಮ್ಮೇಳನವು ಆಯ್ಕೆ ಮಾಡಿತು.


ಎಸ್‌ಎಫ್‌ಐ ನ ನೂತನ ಅಧ್ಯಕ್ಷರಾಗಿ ... ಕಾರ್ಯದರ್ಶಿಯಾಗಿ ಶಮಿಕ್ ಲಹರಿರವರನ್ನು ಸಮ್ಮೇಳನ ಆಯ್ಕೆ ಮಾಡಿತು. ಉಪಾಧ್ಯಕ್ಷರುಗಳಾಗಿ ಪಶ್ಚಿಮ ಬಂಗಾಳದ ಸೋಮನಾಥ್ ಭಟ್ಟಾಚಾರ್ಯ, ಕೇರಳದ ಪಿ.ದಿನೇಶನ್, ತಮಿಳುನಾಡಿನ ಎಸ್.ಕಣ್ಣನ್, ಕರ್ನಾಟಕದ ಕೆ.ಎನ್.ಉಮೇಶ್, ರಾಜಸ್ತಾನದ ಸಂಜಯ್ ಮಾಧವ್, ಮಧ್ಯ ಪ್ರದೇಶದ ನೀನಾ ಶರ್ಮ, ತ್ರಿಪುರಾದ ಸೇವಕ್ ಭಟ್ಟಚಾರ್ಯ; ಸಹ ಕಾರ್ಯದರ್ಶಿಗಳಾಗಿ ಪಾರ್ಥೊ ಮುಖರ್ಜಿ(ಪಶ್ಚಿಮ ಬಂಗಾಳ) ... ಅರುಣ್(ಆಂಧ್ರ), ದಿಲೀಪ್ ಕಾಯಸ್ಥ ರವರುಗಳನ್ನು ಸಮ್ಮೇಳನವು ಆಯ್ಕೆ ಮಾಡಿತು.

ಕರ್ನಾಟಕದಿಂದ ಕೆ.ಎ... ಉಮೇಶ್‌ರವರು ಅಖಿಲ ಭಾ... ಉಪಾಧ್ಯಕ್ಷರಾಗಿ, ಆರ್.ರಾಮಕೃ... ಡಿ.ಎಸ್.ಶರಣಬಸವ ಹಾಗೂ ಯುವ... ಕಂಬಾಳಿಮಠ ಇವರು ಕೇಂದ್ರ ಕಾರ್ಯ... ಸಮಿತಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.


ಕೃಷ್ಣ ಪ್ರಸಾದ್



ಶಮಿಕ್ ಲಹರಿ




ಕೆ.ಎನ್.ಉಮೇಶ್



ಜೀವಂತ 'ಬುದ್ಧ' ಓಡಿಬಂದಿದ್ದೇಕೆ?

'ಕಮ್ಯುನಿಸ್ಟರನ್ನು ಬಡಿಯಲು ಯಾವ ಬಡಿಗೆಯಾದರೂ ಸರಿ' ಇದು ಇಂಗ್ಲೀಷಿನ ಒಂದು ಮಾತು. ಅಮೆರಿಕನ್ ಮತ್ತು ಇತರ ಸಾಮ್ರಾಜ್ಯಶಾಹಿ ದೇಶಗಳು ಕಮ್ಯುನಿಸ್ಟರನ್ನು ವಿವಿಧ ರೀತಿಯಲ್ಲಿ 'ಬಡಿಯಲು' ಪ್ರಯತ್ನಿಸುವುದು ಕಮ್ಯುನಿಸ್ಟ್ ಚಳುವಳಿಯಷ್ಟೇ ಹಳೆಯದು. ಸೋವಿಯತ್ ಯೂನಿಯನ್‌ನ ಪತನ ಮತ್ತು ಸಮಾಜವಾದದ ಹಿನ್ನಡೆಯ ನಂತರವಂತೂ ಇಂತಹ ಪ್ರಯತ್ನಗಳು ಇನ್ನೂ ಆಕ್ರಾಮಕವಾಗಿವೆ.
ಚೀನಾದಲ್ಲಿರುವ ಬುದ್ಧ ಧರ್ಮಗುರು ಕರ್ಮಪಾ ಭಾರತಕ್ಕೆ ಬಂದ ನಿಗೂಢ ಘಟನೆಯ ಹಿಂದೆ, ಕ್ಯೂಬಾದ ಹುಡುಗನೊಬ್ಬನನ್ನು ಆತನ ತಂದೆಗೆ ವಾಪಸು ಮಾಡಲು ನಿರಾಕರಿಸಿ ಎಬ್ಬಿಸಿದ ಗದ್ದಲ ಇಂತಹುದೇ ಪ್ರಯತ್ನ.ಸಮಾಜವಾದಿ ದೇಶಗಳಾದ ಚೀನಾ, ಕ್ಯೂಬಾಗಳ ಮೇಲೆ ಒತ್ತಡ ಹೇರುವ ಸಾಮ್ರಾಜ್ಯಶಾಹಿಯ ತಂತ್ರದ ಭಾಗ ಎಂಬಂತೆ ಕಾಣುತ್ತಿದೆ. ಆ ಬಗ್ಗೆ ಪರಿಚಯಿಸುವ ಲೇಖನ.



ಬುದ್ಧ ಧರ್ಮದ ಹಲವು ಪಂಥಗಳಲ್ಲಿ ಒಂದಾದ ಕಗ್ಯೂ ಪಂಥದ ಧರ್ಮಗುರು 14 ವರ್ಷದ 'ಕರ್ಮಪಾ' ದೋರ್ಜೆ ಇದ್ದಕ್ಕಿದ್ದ ಹಾಗೆ ಭಾರತದಲ್ಲಿ ಕಾಣಿಸಿಕೊಂಡಿದ್ದು. ಕಗ್ಯೂ ಪಂಥದ ಧರ್ಮಗುರುವಾಗಿರುವ 17ನೇ 'ಕರ್ಮಪಾ' ದೋರ್ಜೆ ಸಾಮಾನ್ಯವಾಗಿ ಟೀಬೆಟಿನಲ್ಲಿರುವ ತ್ಸುರ್ಪು ಬೌದ್ಧಾಲಯದಲ್ಲಿ ವಾಸಿಸುತ್ತಿದ್ದು ಸುಮಾರು 1200 ಕಿಮಿ ದೂರವಿರುವ ಭಾರತದ ಹಿಮಾಚಲ ಪ್ರದೇಶ ರಾಜ್ಯದಲ್ಲಿರುವ ಧರ್ಮಶಾಲಾ ಎಂಬಲ್ಲಿ ಇದ್ದಕ್ಕಿದ್ದ ಹಾಗೆ ಕಾಣಿಸಿಕೊಂಡದ್ದು ಎಲ್ಲರಿಗೂ ಆಶ್ಚರ್ಯ ತಂದಿತ್ತು. ಮೊದಲ ನೋಟಕ್ಕೆ ಹಠಾತ್ತನೆ ಆದ ಬೆಳವಣಿಗೆಯಂತೆ ಕಂಡರೂ, ದಿನಕಳೆದಂತೆ ಚಿತ್ರ ಸ್ಪಷ್ಟವಾಗುತ್ತಾ ಹೋಯಿತು.

ಮೊದಲ ವರದಿಗಳು 'ಕರ್ಮಪಾ' ದೋರ್ಜೆ ಚೀನಿ ಸರ್ಕಾರದ 'ಬೌದ್ಧ ಧಾರ್ಮಿಕ ವಿಷಯಗಳಿಂದ ಬೇಸತ್ತು' ಭಾರತಕ್ಕೆ ಓಡಿಬಂದಿದ್ದಾರೆ ಎಂದಿದ್ದವು. ಚೀನಿ ಸರ್ಕಾರದ ಸರ್ಪಗಾವಲಿಗೆ ಚಳ್ಳೆಹಣ್ಣು ತಿನ್ನಿಸಿ ಸಾವಿರಕ್ಕೂ ಹೆಚ್ಚು ಮೈಲಿನ ಹಿಮಭರಿತ ಹಾದಿ ತುಳಿದು ನಡಿಗೆಯಲ್ಲಿ ಬಂದಿದ್ದಾರೆ ಎಂದು ವರದಿಯಾಯಿತು. 'ಕರ್ಮಪಾ' ಭಾರತದಲ್ಲಿ 'ರಾಜಕೀಯ ಶರಣು' ಪಡೆಯಲು ಬಯಸುತ್ತಾರೆ. ಎಂಬುದೂ ವರದಿಯಾಗಿತ್ತು.

ವಿಚಿತ್ರ ಘಟನೆಗಳು

ಆದರೆ ದಿನಕಳೆಯುತ್ತಾ ಹೋದಹಾಗೆ ವಿಚಿತ್ರ ಕಾಕತಾಳೀಯ ಘಟನೆಗಳು, ವಿಷಯಗಳು ಬೆಳಕಿಗೆ ಬರುತ್ತಾ ಹೋದ ಹಾಗೆ ಎಲ್ಲದರಲ್ಲೂ ಏನೋ ಒಂದು ಪೂರ್ವಯೋಜಿತ ನಾಟಕದಂತೆ ಕಾಣುತ್ತಾ ಹೋಯಿತು.

. ಭಾರತಕ್ಕೆ ಬಂದ ಕೂಡಲೇ 'ಕರ್ಮಪಾ' ರಿಗೆ ಸಿಕ್ಕಿದ ಭಾರೀ ಪ್ರಚಾರ, ತತ್‌ಕ್ಷಣ ಭಾರತದಲ್ಲಿ ಟಿಬೆಟ್‌ನ ಸಾಗರೋತ್ತರ ಟಿಬೆಟ್ ಹಂಗಾಮಿ ಸರ್ಕಾರ'ದ 'ಮುಖ್ಯ ಕಾರ್ಯಲಯ'ವಾದ ಧರ್ಮಶಾಲಾಕ್ಕೆ ತೆರಳಿದ್ದು.

. ಹಲವುದಿನಗಳ ಸುದ್ದಿಗಳ ನಂತರವೂ 'ಕರ್ಮಪಾ' ಇನ್ನೂ ಯಾವುದೇ ಹೇಳಿಕೆ ನೀಡದಿರುವುದು, ಭಾರತದಲ್ಲಿ 'ರಾಜಕೀಯ ಶರಣು'ಗೆ ಅರ್ಜಿ ಕೊಡದಿರುವುದು.

'ಕರ್ಮಪಾ' ಧರ್ಮಶಾಲಾಕ್ಕೆ ಮುಟ್ಟುತ್ತಿದ್ದ ಹಾಗೆ ಅಲ್ಲಿ ಪ್ರತ್ಯಕ್ಷರಾದರು ಅಮೆರಿಕದ ಟಿಬೇಟ್ ವ್ಯವಹಾರಗಳ ಕಾರ್ಯದರ್ಶಿ. ಇದು ಕಾಕತಾಳೀಯವೆಂದು ಬಣ್ಣಿಸಲಾಗಿದ್ದರೂ 'ಕರ್ಮಪಾ'ಗೆ ರಾಜಕೀಯ ಶರಣು ಮತ್ತಿತರ ವಿಷಯಗಳಲ್ಲಿ ಅವರ ಸಕ್ರಿಯ ಭಾಗವಹಿಸುವಿಕೆ 'ಕಾಕತಾಳೀಯತೆ'ಯನ್ನು ಸಮರ್ಥಿಸಿಲ್ಲ.

ಸಿಕ್ಕಿಂ ಮುಖ್ಯಮಂತ್ರಿಗಳು 'ಕರ್ಮಪಾ' ಸಿಕ್ಕಿಂಗೆ ಬಂದು ಇರಲು ಮತ್ತು ಅವರಿಗೆ ಭಾರತದಲ್ಲಿ 'ರಾಜಕೀಯ ಶರಣು' ಕೊಡಲು ಕಗ್ಯೂ ಬೌದ್ಧ ಪಂಥದ ಜನ ಒತ್ತಾಯಿಸುತ್ತಿದ್ದಾರೆ ಎಂದು ಹೇಳಿಕೆ ನೀಡಿರುವುದು ಮಾತ್ರವಲ್ಲ ಕಳೆದ ನವೆಂಬರ್‌ನಲ್ಲೇ ಈ ಬಗ್ಗೆ ಸಿಕ್ಕಿಂ ಮುಖ್ಯಮಂತ್ರಿಗಳು ಪ್ರಧಾನಮಂತ್ರಿಗಳು ಈ ಬಗ್ಗೆ ಪತ್ರ ಬರೆದಿದ್ದಾರೆ ಎಂದು ಪ್ರಧಾನಮಂತ್ರಿಗಳ ಕಛೇರಿ ಹೇಳಿಕೆ ನೀಡಿರುವುದು.

- 'ಕರ್ಮಪಾ' ದಲೈಲಾಮರನ್ನು ಭೇಟಿ ಮಾಡಿದ್ದು, 'ಸಾಗರೋತ್ತರ ಟಿಬೆಟ್ ಹಂಗಾಮಿ ಸರ್ಕಾರ'ವೇ ಕರ್ಮಪಾಗೆ ಪರವಾಗಿ ಮಾತನಾಡುತ್ತಿರುವುದು.
- ಅಮೆರಿಕನ್ ಸರ್ಕಾರ ಭಾರತ ಸರ್ಕಾರ ದಲೈಲಾಮ ಜತೆ ಮಾತುಕತೆ ನಡೆಸಿ ಇತ್ಯರ್ಥ ಮಾಡಬೇಕೆಂದು ಒತ್ತಾಯಿಸಿರುವುದು.
- 1200 ಕಿ.ಮಿ.ನಷ್ಟು ಹಿಮಭರಿತ ದುರ್ಗಮ ದಾರಿಯನ್ನು ನಡೆದು ಬಂದು ಭಾರತಕ್ಕೆ ಮುಟ್ಟಿರುವುದು ಅಸಾಧ್ಯ, ಮತ್ತು ಕಟ್ಟು ಕಥೆ. ಪ್ರಬಲ ವಿದೇಶಿ ಸಂಘಟನೆಯ ಸಹಾಯವಿಲ್ಲದೆ 'ಕರ್ಮಪಾ' ಕಾಣಿಸಿಕೊಳ್ಳುವುದು ತೀರಾ ಅಸಾಧ್ಯವಾಗಿರುವುದು.

ಇವೆಲ್ಲಾ ಇದೊಂದು ಪೂರ್ವಯೋಜಿತ ನಾಟಕ ಎಂಬುದನ್ನು ತೋರಿಸುತ್ತಿದೆ.

ಭಾರತ ಸರ್ಕಾರ ಒಂದುಕಡೆ ಅವಾಕ್ಕಾದಂತೆಯೂ, ಇನ್ನೊಂದು ಕಡೆ ನಿಷ್ಕ್ರಿಯ ಮೌನ ಸಾಧಿಸಿರುವುದು, ಏನಕ್ಕೋ ಕಾಯುತ್ತಿರುವಂತೆ ನಿಗೂಢವಾಗಿ ವರ್ತಿಸುತ್ತಿರುವುದು ತೀರಾ ಅನುಮಾನಾಸ್ಪದವಾಗಿದೆ. ಭಾರತ ಟಿಬೆಟ್ ಚೀನಾದ ಅವಿಭಾಜ್ಯ ಅಂಗವೆಂದು ಮಾನ್ಯತೆ ಕೊಟ್ಟಿರುವಾಗ, ಅಂತರ್ರಾಷ್ಟ್ರೀಯ ಕಾನೂನು ಪ್ರಕಾರ ಇತರ ದೇಶದ ನಾಗರೀಕರು ಕಾನೂನುಬಾಹಿರವಾಗಿ ದೇಶಕ್ಕೆ ಬಂದರೆ ಆ ಬಗ್ಗೆ ಸ್ಪಷ್ಟ ನಿಲುವು ತೆಗೆದುಕೊಳ್ಳುವುದು ಅಗತ್ಯ. ಚೀನಾ ಸರ್ಕಾರದ ಜತೆ ಆ ಬಗ್ಗೆ ಪರಾಮರ್ಶೆ ಮಾಡುವುದು ಅಗತ್ಯ.

ಚೀನಾ-ವಿರೋಧಿ ಮಸಲತ್ತು

ಚೀನಾದ ಕ್ರಾಂತಿಯಾದಂದಿನಿಂದ, ಅಲ್ಲಿನ ಕಮ್ಯುನಿಸ್ಟ್ ಸರ್ಕಾರದ ವಿರುದ್ಧ ಅಮೆರಿಕನ್ ಸಾಮ್ರಾಜ್ಯಶಾಹಿ ಕತ್ತಿ ಮಸೆಯುತ್ತಿದ್ದು ಅದಕ್ಕಾಗಿ ಟಿಬೆಟಿನ ವಿಷಯದ ದುರ್ಬಳಕೆ ಮಾಡುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಟಿಬೆಟ್‌ನಲ್ಲಿ 1959 ರಲ್ಲಿ ಪಾಳೆಯಗಾರಿ - ಪದ್ಧತಿ ವಿರುದ್ಧ ದಂಗೆ ಎದ್ದು ಕ್ರಾಂತಿ ಆದಾಗಿನಿಂದ ಟಿಬೆಟ್‌ನ ವಿಶಿಷ್ಟ ಜನಾಂಗೀಯ ಧಾರ್ಮಿಕ ವಿಷಯ ಬಳಸಿ, ಚೀನಾದ ವಿರುದ್ಧ ಅಪಪ್ರಚಾರ, ಆಕ್ರಮಕ ನಿಲುವನ್ನು ಅಮೆರಿಕ ತಾಳುತ್ತಾ ಬಂದಿದೆ.

ಭಾರತ ಆಗಿಂದಲೇ ಟಿಬೇಟ್ ಚೀನಾದ ಭಾಗ ಎಂದು ಮಾನ್ಯ ಮಾಡಿದ್ದರೂ ಅಮೆರಿಕದ ಚೀನಾ-ವಿರೋಧಿ ಮಸಲತ್ತುಗಳಲ್ಲಿ ಸ್ವಲ್ಪಮಟ್ಟಿಗೆ



ಕರ್ಮಪಾನಂತಹ 'ಜೀವಂತ ಬುದ್ಧ' ಭಾರತಕ್ಕೆ ಓಡಿಬಂದದ್ದೇಕೆ? ದಲೈಲಾಮನ ಆಳ್ವಿಕೆಯಲ್ಲಿ ಟಿಬೆಟ್‌ನಲ್ಲಿ ನಡೆಯುತ್ತಿದ್ದ ಲಾಮಾಗಳ ಕ್ರೂರ ನಿರಂಕುಶ ದಬ್ಬಾಳಿಕೆ ಇಂದು ಸಮಾಜವಾದಿ ಚೀನದಲ್ಲಿ ನಡೆಯದು ಎಂದೇ? ಲಾಮಾ ಪ್ರಭುತ್ವದ ಟಿಬೆಟ್‌ನಲ್ಲಿ 'ಜೀವಂತ ಬುದ್ಧ'ನೊಬ್ಬನಿಂದ ಕೈಕಾಲು ಕೊಚ್ಚಿಹಾಕುವ ಶಿಕ್ಷೆಗೊಳಗಾದ ಜೀತಗಾರ

ಶಾಮೀಲಾಗಿದೆ. ದಲೈಲಾಮ ಬುದ್ಧಧರ್ಮದ ಒಂದು ಪಂಥದ ಧರ್ಮಗುರು, 1959 ರ ನಂತರ ಅವರ ಹಲವಾರು ಅನುಯಾಯಿಗಳೊಂದಿಗೆ ಓಡಿ ಬಂದಾಗ ಅವರಿಗೆ 'ರಾಜಕೀಯ ಶರಣು' ಕೊಡಲಾಯಿತು. ಅವರ ಜತೆ ಬಂದ ಅವರ ಅನುಯಾಯಿಗಳಿಗೆ 'ನಿರಾಶ್ರಿತರ' ಸ್ಥಾನಮಾನ ನೀಡಲಾಯಿತು. ಟಿಬೆಟ್ ನಿರಾಶ್ರಿತರಿಗೆ ನೆರವು, ಅವರ ಪುನರ್ವಸತಿ ಹೆಸರಲ್ಲಿ ಅಮೆರಿಕ ಈ ಟಿಬೇಟ್ ನಿರಾಶ್ರಿತರನ್ನು ತಮ್ಮ ರಾಜಕೀಯ ದಾಳಗಳಿಗೆ ಬಳಸಲು ಅನುವು ಮಾಡಿಕೊಟ್ಟಿದೆ. 'ಸಾಗರೋತ್ತರ ಹಂಗಾಮಿ ಟಿಬೆಟ್ ಸರ್ಕಾರ'ವನ್ನು ದಲೈಲಾಮಾ

ನಾಯಕತ್ವದಲ್ಲಿ ಭಾರತದ ನೆಲದಿಂದ ನಡೆಸಲು ಬಿಟ್ಟಿದೆ.

ಚೀನಾದಲ್ಲಿ ಧಾರ್ಮಿಕಸ್ವಾತಂತ್ರ್ಯ ಇಲ್ಲ. ಟಿಬೆಟಿನಲ್ಲಿ ಬೌದ್ಧರ ಧಾರ್ಮಿಕ ಹಕ್ಕುಗಳನ್ನು ದಮನ ಮಾಡಿ ಚೀನಾ ಸರ್ಕಾರ ಆಳುತ್ತಿದೆ. ಟಿಬೇಟ್‌ನಲ್ಲಿ ಜನಾಂಗೀಯ ದಬ್ಬಾಳಿಕೆ ನಡೆಯುತ್ತಿದೆ ಎಂದು ಬಿಂಬಿಸುವುದು ಅಮೆರಿಕನ್ ಸಾಮ್ರಾಜ್ಯಶಾಹಿಯ ದಶಕಗಳ ಪ್ರಯತ್ನ. ಈ ಘಟನೆ ಸಹ ಅದೇ ಪ್ರಯತ್ನದ ಭಾಗವಾಗಿರುವಂತೆ ಕಾಣುತ್ತದೆ.

ಬೌದ್ಧ ಮತಗಳು ಮತ್ತು ಪಾಳೆಯಗಾರಿ ಪದ್ಧತಿ

ಇಲ್ಲಿ ಬುದ್ಧಧರ್ಮ ಟಿಬೇಟ್‌ನಲ್ಲಿ ಬೆಳೆದು ಬಂದ ರೀತಿ, ಅಲ್ಲಿನ ಸಾಮಾಜಿಕ-ಆರ್ಥಿಕ ಬೆಳವಣಿಗೆಯಲ್ಲಿ ವೈದಿಕ ಕಂದಾಚಾರಗಳ ವಿರುದ್ಧ, ಆಗ ಇದ್ದ ಗುಲಾಮ ಪದ್ಧತಿ ವಿರುದ್ಧ ಬಂಡಾಯದ ಧರ್ಮ(ಕ್ರಿಶ್ಚಿಯನ್ ಧರ್ಮದಂತೆ)ವಾಗಿತ್ತು. ಆದರೆ ಕ್ರಿಶ್ಚಿಯನ್ ಧರ್ಮದಂತೆ ಮುಂದಿನ ಕಾಲಘಟ್ಟದಲ್ಲಿ ಪಾಳೆಯಗಾರಿ ಪದ್ಧತಿಯನ್ನು ಎತ್ತಿಹಿಡಿಯುವ ನಡೆಸುವ ಧರ್ಮವಾಯಿತು. ಅದರಲ್ಲೂ ಟಿಬೆಟ್‌ನಲ್ಲಿ ಮಧ್ಯಯುಗದ ಕ್ರಿಶ್ಚಿಯನ್ ಧರ್ಮದಂತೆ ಬುದ್ಧದರ್ಮಗುರುಗಳೇ ರಾಜಕೀಯ ಅಧಿಕಾರ ಹೊಂದಿದ್ದರು. ಬುದ್ಧಮಠಗಳು ಭಾರಿ ಆಸ್ತಿ ಹೊಂದಿದ್ದು, ರೈತ ಕೂಲಿಕಾರರನ್ನು ನೇರವಾಗಿ ಶೋಷಿಸುತ್ತಿತ್ತು. ಬೌದ್ಧಮಠಗಳು, ಧರ್ಮಗುರುಗಳು ಸಾಮಾನ್ಯ ಜನರ ಮೇಲೆ ನಡೆಸಿದ ಕ್ರೌರ್ಯ, ದಬ್ಬಾಳಿಕೆ, ದಮನಚಕ್ರ ಚರಿತ್ರೆಯಲ್ಲಿ ದಾಖಲಾಗಿದೆ. ಇದರ ವಿರುದ್ಧ ನಡೆದ ಜನರ ದಂಗೆಗೆ ಚೀನಾ ಸಹಾಯಮಾಡಿ ಅಲ್ಲಿ ಜನತಾ ಪ್ರಜಾಸತ್ತಾತ್ಮಕ ಕ್ರಾಂತಿ ಆಗಿದ್ದು. ಸ್ವಾಭಾವಿಕವಾಗಿಯೇ ಇದು ದಲೈಲಾಮ ಮತ್ತು ಅದರ ನಿಕಟವರ್ತಿಯವರ ಹಿತಾಸಕ್ತಿಗೆ ವಿರುದ್ಧವಾದುದು. ಅಂಥವರು ಭಾರತಕ್ಕೆ ಓಡಿ ಬಂದಿದ್ದು. ಅವರನ್ನು ಯಾರು ಓಡಿಸಿಲ್ಲ. ಈಗಲೂ ಚೀನಾ ಸರ್ಕಾರ ಅವರನ್ನು ಮರಳುವಂತೆ ಕೇಳುತ್ತಿದೆ. ಅವರ ಮಧ್ಯಯುಗೀನ ಪಾಳೆಯಗಾರಿ, ಧಾರ್ಮಿಕ ಪ್ರಭುತ್ವ ಮಾತ್ರ ವಾಪಸು ಸಿಗುವುದಿಲ್ಲ ಎಂಬುದಂತು ಸ್ಪಷ್ಟ.

ಸಮಾಜವಾದಿ ಕ್ರಾಂತಿಯ ನಂತರ ಬುದ್ಧಧರ್ಮದ ಪಂಥದ ಮತಗಳು ರಾಜಕೀಯ-ಆರ್ಥಿಕ ಪ್ರಾಬಲ್ಯ ವ್ಯವಸ್ಥೆಯ ಬದಲಾವಣೆಯಿಂದ ಹೋಗಿದೆ. ಆದರೆ ಅವರ ಧಾರ್ಮಿಕ ಚಟುವಟಿಕೆಗಳಿಗೆ ಯಾವುದೇ ಕಡಿವಾಣ ಹಾಕಿಲ್ಲ. ಆದರೆ ಧರ್ಮವನ್ನು ಬಳಸಿ ರಾಜಕೀಯ ಚಟುವಟಿಕೆ, ನಡೆಸುವುದರ ಮೇಲೆ ಬಿಗಿ ಕ್ರಮ ಕೈಗೊಳ್ಳಲಾಗಿದೆ. ಇದು ಸಮಾಜವಾದಿ ದೇಶಗಳ ಬಗ್ಗೆ ವಿಶಿಷ್ಟವಾದದ್ದೂ ಏನಲ್ಲ. ಭಾರತದಲ್ಲೂ ಹಲವು ಕಡೆ (ಕರ್ನಾಟಕದ ಉಡುಪಿ ಮಠಗಳು ಸೇರಿದಂತೆ) ಆ ಪ್ರದೇಶದ ಅತ್ಯಂತ ದೊಡ್ಡ 'ಭೂಮಾಲಕ'ರಾಗಿದ್ದವು. ಭೂಸುಧಾರಣೆ ಸರಿಯಾಗಿ ಜಾರಿಯಾದೆಡೆ ಧಾರ್ಮಿಕ ಸಂಸ್ಥೆಗಳು ಭೂಮಿ, ಅದರ ಜತೆಗೆ ಹಲವು ಸವಲತ್ತುಗಳ ಪ್ರಾಬಲ್ಯವನ್ನು ಕಳೆದುಕೊಂಡಿವೆ. ಅದೇ ರೀತಿ ಧರ್ಮವನ್ನು ಬಳಸಿ ರಾಜಕೀಯ ಚಟುವಟಿಕೆ ನಡೆಸುವುದು, ಧಾರ್ಮಿಕ ಸಂಸ್ಥೆಗಳನ್ನು ರಾಜಕೀಯ ಚಟುವಟಿಕೆಗಳಿಗೆ ಬಳಸುವ ನೀತಿಯನ್ನು ಬಿಜೆಪಿಯೇತರ ಎಲ್ಲಾ ರಾಜಕೀಯ ಪಕ್ಷಗಳು ವಿರೋಧಿಸುತ್ತಿವೆ. ಅದು ಆಧುನಿಕ ಪ್ರಜಾಪ್ರಭುತ್ವದ ಗುರುತುಗಳಲ್ಲೊಂದು. ಆದ್ದರಿಂದ ಟಿಬೇಟನ್ನು ಮಧ್ಯಯುಗೀನ ಪಾಳೆಯಗಾರಿ-ಧಾರ್ಮಿಕ ದಮನಚಕ್ರಕ್ಕೆ ತಳ್ಳಬೇಕೆಂದಿರುವವರು ಬಿಟ್ಟರೆ ಚೀನಾದ ನೀತಿಗಳನ್ನು ಯಾರೂ ವಿರೋಧಿಸುವುದು ಸಾಧ್ಯವಿಲ್ಲ. ಅಮೆರಿಕ ಇದನ್ನೇ ಮಾಡಬಯಸುತ್ತದೆ ಎಂದು ಅಫಘಾನಿಸ್ತಾನದಲ್ಲಿ ಅದರ ನೀತಿಗಳು ಹಾಗೂ ಅದರ ಪರಿಣಾಮದಿಂದ ಸ್ಪಷ್ಟವಾಗುವುದಿಲ್ಲವೇ?


ಇತರ ಮಗ್ಗಲುಗಳು

ಈ ವಿವಾದಕ್ಕೆ ಇನ್ನು ಹಲವು ಮಗ್ಗಲುಗಳಿವೆ. ಟಿಬೇಟ್ ವಿಷಯ ಬಳಸಿ ಭಾರತ-ಚೀನಾದ ನಡುವೆ ಉತ್ತಮಗೊಳ್ಳುತ್ತಿರುವ ಮೈತ್ರಿಗೆ ಹುಳಿ ಹಿಂಡುವ ಅಮೆರಿಕದ ಪ್ರಯತ್ನವೂ ಇದರ ಭಾಗ. ಅಣುಸ್ಫೋಟ ನಡೆಸುವ ಸಮಯದಲ್ಲಿ ಜಾರ್ಜ್ ಫರ್ನಾಂಡೀಸ್‌ರ ಚೀನಾ-ವಿರೋಧಿ ಹುಚ್ಚು ಆರ್ಭಟಗಳನ್ನು ನೆನಸಿಕೊಂಡರೆ, ಅದಕ್ಕೆ ಕುಮ್ಮಕ್ಕು ಕೊಡುವವರಿಗೆ ವಾಜಪೇಯಿ ಸರ್ಕಾರದಲ್ಲಿ ಏನೂ ಕೊರತೆಯಿಲ್ಲ. ಹಳೆ ಸೋಷಲಿಸ್ಟ್ ಪಕ್ಷ ಟಿಬೆಟ್ ಭಾರತಕ್ಕೆ ಸೇರಬೇಕಾದ ವಿವಾದಿತ ಪ್ರದೇಶ. ಅದನ್ನು 'ವಿಮೋಚನೆ' ಮಾಡಬೇಕೆಂಬ ತಿಕ್ಕಲು ಕೂಗು ಹಾಕುತ್ತಿತ್ತು. ಇದು ನೇರ ಸಾಮ್ರಾಜ್ಯಶಾಹಿಯ ಹುನ್ನಾರಗಳಿಗೆ ಕುಮ್ಮಕ್ಕು ಕೊಡುವಂಥದು ಎಂದು ಗೊತ್ತಿದ್ದೂ, ಅಂತಹ ಪ್ರಯತ್ನಗಳ ಪುನರುತ್ಥಾನ ಸಹ ಸಾಧ್ಯ.

ಇದಲ್ಲದೆ ಈಗಿನ ಈ ವಿವಾದಕ್ಕೆ ಧಾರ್ಮಿಕ ವಿವಾದದ ಆಯಾಮವು ಇದೆ. ಬೌದ್ಧ ಮಠಗಳು ಭಾರಿ ಆಸ್ತಿ ಪಾಸ್ತಿ(ಕೋಟ್ಯಾಂತರ ರೂ.ಗಳು ಇರುವ ಸಂಸ್ಥೆಗಳು ಇದರಲ್ಲಿ ಸಾಮ್ರಾಜ್ಯಶಾಹಿ ಅದರದ್ದೇ, ರಾಜಕೀಯಕ್ಕೆ ಸುರಿಯುವ ಹಣ ಸಹ ಸೇರಿದೆ.) ಹೊಂದಿದೆ. ಈ ಆಸ್ತಿಯ ನಿಯಂತ್ರಣಕ್ಕೆ ಹಲವು ಬಣಗಳು ಹೋರಾಡುವುದು ಸ್ವಾಭಾವಿಕ. ನಮ್ಮ ಮಠಗಳಲ್ಲೇ ಇದನ್ನು ನೋಡಿಲ್ಲವೇ? ಈ ವಿವಾದದ ಒಳಗೆ ಕಗ್ಯೂ ಪಂಥದ(ಸುಮಾರು 50 ಲಕ್ಷ ಅನುಯಾಯಿಗಳಿರುವ) ಒಳಗೆ ಇಂತಹ ತಿಕ್ಕಾಟ ಸಹ ಪಾತ್ರವಹಿಸಿರುವ ಸಾಧ್ಯತೆ ಇದೆ.

ಅಮೆರಿಕನ್ ಸಾಮ್ರಾಜ್ಯಶಾಹಿಗಳ ಮಸಲತ್ತುಗಳಿಗೆ ಶರಣಾಗುತ್ತಿರುವ ಮತ್ತು ಅದರಿಂದ ದೇಶದ ಹಿತಾಸಕ್ತಿಗಳ ವಿರುದ್ಧ ಕ್ರಮಕೈಗೊಳ್ಳುತ್ತಿರುವ ವಾಜಪೇಯಿ ಸರ್ಕಾರ ಅಧಿಕಾರದಲ್ಲಿರುವ ಹಿನ್ನೆಲೆಯಲ್ಲಿ ಇದು ಇನ್ನೊಂದು ಅಪಾಯಕಾರಿ ಬೆಳವಣಿಗೆ.

ಬಿಡುಗಡೆಯಾಗಿದೆ 'ಕೊಂಕಣಿ ಸೌರಭ'



ಕೊಂಕಣಿ ಭಾಷೆಯಲ್ಲಿ ಸಾಹಿತ್ಯ-ಸಾಂಸ್ಕೃತಿಕ ಮತ್ತು ಸಾಮಾಜಿಕ ವಿಚಾರಗಳಿಗೆ ಸಂಬಂಧಿಸಿದ ಪತ್ರಿಕೆಯೊಂದು ಆರಂಭವಾಗಿರುವುದು ಸಂತಸದ ವಿಚಾರವಾಗಿದೆ. ಪತ್ರಿಕೆಯ ಹೆಸರು 'ಕೊಂಕಣಿ ಸೌರಭ' ತ್ರೈಮಾಸಿಕ. ಪತ್ರಿಕೆಯ ಚೌಕಟ್ಟು, ಆದ್ಯತೆ, ದೃಷ್ಟಿಕೋನ ಇವುಗಳನ್ನು ಗಮನಿಸಿದಾಗ ಕೊಂಕಣಿ ಭಾಷೆಯ ಪತ್ರಿಕೋದ್ಯಮಕ್ಕೆ - ನಾಡಿಗೆ ಮಹತ್ವದ ಕೊಡುಗೆಯನ್ನು ನೀಡುವ ನಿರೀಕ್ಷೆ ಮೂಡುವಂತಿದೆ.

ಸಂವಿಧಾನದ 8ನೇ ಪರಿಚ್ಛೇದದಲ್ಲಿ ಸೇರ್ಪಡೆಯಾಗಿರುವ ಕೊಂಕಣಿ ಭಾಷೆಗೆ ಪ್ರಮುಖವಾಗಿ ಕರ್ನಾಟಕದ ಕರಾವಳಿ - ಗೋವಾ - ಮುಂತಾದೆಡೆ ಹಂಚಿಕೊಂಡಿರುವ 50 ಲಕ್ಷಕ್ಕೂ ಅದಿಕ ಮಾತೃ-ಭಾಷಿಕರಿದ್ದಾರೆ. ಅತ್ಯಂತ ವೈವಿಧ್ಯಮಯವಾದ ಭಾಷೆ-ಸಂಸ್ಕೃತಿಗಳನ್ನು ಹೊಂದಿರುವ ಭಾರತದಲ್ಲಿ ತನ್ನದೇ ಆದ ವೈಶಿಷ್ಟತೆಯನ್ನು ಜಾನಪದ, ಸಾಂಸ್ಕೃತಿಕ ಶ್ರೀಮಂತಿಕೆಯನ್ನುಳ್ಳ ಭಾಷೆಗಳಲ್ಲಿ ಕೊಂಕಣಿ ಸಹ ಒಂದು.

ಈಗ ಜಾಗತೀಕರಣದ ಗಾಳಿ ಎಲ್ಲೆಡೆ ಬೀಸುತ್ತಿದೆ. ಕನ್ನಡ, ತೆಲುಗು, ತಮಿಳಿನಂತಹ ಭಾಷೆಗಳೇ ಜಾಗತೀಕರಣದ ಭರದಲ್ಲಿ ಮೂಲೆ ಗುಂಪಾಗಿಬಿಡುವ ಅಪಾಯ ಎದುರಿಸುತ್ತಿವೆ. ಜನ ಸಾಮಾನ್ಯರ ಸಾಮಾಜಿಕ-ಸಾಂಸ್ಕೃತಿಕ ಬದುಕಿನ ಜೀವನಸೆಲೆಯಾದ ಇಂತಹ ಭಾಷೆಗಳನ್ನು ದುರ್ಬಲಗೊಳಿಸಿ ಇಂಗ್ಲೀಷ್-ಹಿಂದಿ-ಸಂಸ್ಕೃತಗಳಂತಹ ಭಾಷೆಗಳೇ ವಿಜೃಂಬಿಸುತ್ತಿರುವ ಈ ಸಂದರ್ಭದಲ್ಲಿ ಕೊಂಕಣಿ ಭಾಷೆಯಲ್ಲಿ ಇಂತಹ ಪತ್ರಿಕೆಯೊಂದನ್ನು ತರುವ ಪ್ರಯತ್ನ ನಿಜಕ್ಕೂ ಶ್ಲಾಘನೀಯವಾದದ್ದು.

ಕೊಂಕಣಿ ಭಾಷೆಯಲ್ಲಿ ಈಗ ಹಲವು ಪತ್ರಿಕೆಗಳು ಪ್ರಕಟವಾಗುತ್ತಿವೆ. ಆದರೆ ಬಹುತೇಕ ಇ... ಕೋಮುವಾದಿ-ಪ್ರತಿಗಾಮಿ ಶಕ್ತಿಗಳ ಸಂಕುಚಿ... ವಿಚಾರಗಳನ್ನು ಹರಡುವ ಮಾಧ್ಯಮವಾಗಿವೆ. ಜನ... ಮನಸ್ಸನ್ನು ಮಲೀನಗೊಳಿಸುವ, ಸಮಾಜ... ಚಿಂತನೆಯನ್ನು ಕಲುಷಿತಗೊಳಿಸುವ ಪರಿಸರದ... 'ಕೊಂಕಣಿ ಸೌರಭ' ಪ್ರಗತಿಪರ ಚಿಂತನೆಯೊಂದ... ಹೊರಬರುತ್ತಿರುವುದು ಆಶಾದಾಯಕವಾಗಿದೆ.

ಈ ಪತ್ರಿಕೆಯ ಬಿಡುಗಡೆ ಸಮಾರಂಭ... ಇತ್ತೀಚೆಗೆ ನಡೆಯಿತು. ಕೊಂಕಣಿ ಸಾಹಿ... ಅಕಾಡೆಮಿಯ ಅಧ್ಯಕ್ಷ ಬಸ್ತಿವಾಮನ ಶೆ... ಪತ್ರಿಕೆಯನ್ನು ಬಿಡುಗಡೆಗೊಳಿಸಿದರು. ಮು... ಅತಿಥಿಗಳಾಗಿ ಇತಿಹಾಸಕಾರ ಡಾ॥ ಸೂರ್ಯನಾ... ಕಾಮತ್ ಮುಂತಾದವರು ಭಾಗವಹಿಸಿದ್ದರು ಈ... ಪತ್ರಿಕೆಯ ಸಂಪಾದಕಿ ಮಮತಾ ಹೊನ್ನಾವರ.

ಗಲಭೆಗ್ರಸ್ತ ಚಿಕ್ಕಮಗಳೂರು ಮತ್ತು ಬಾಬಾಬುಡನ್‌ಗಿರಿಗೆ ಸಿಪಿಐ(ಎಂ) ನಿಯೋಗದ ಭೇಟಿ

ಇತ್ತೀಚೆಗೆ ಕೋಮುಗಲಭೆ ನಡೆದ ಚಿಕ್ಕಮಗಳೂರು ಹಾಗೂ ವಿವಾದ ತಲೆಎತ್ತಿರುವ ಬಾಬಾ ಬುಡನ್‌ಗಿರಿಗೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ರಾಜ್ಯಸಮಿತಿಯ ನಿಯೋಗವು ಜನವರಿ 12 ಮತ್ತು 13, 2000 ರಂದು ಭೇಟಿ ನೀಡಿತು. ಈ ನಿಯೋಗವು ಪಕ್ಷದ ರಾಜ್ಯ ಕಾರ್ಯದರ್ಶಿ ಎಸ್.ಸೂರ್ಯನಾರಾಯಣ ರಾವ್, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ, ಎಸ.ವೈ.ಗುರುಶಾಂತ್, ರಾಜ್ಯ ಸಮಿತಿ ಸದಸ್ಯರೂ ಮಲೆನಾಡು ಪ್ರದೇಶ ಸಮಿತಿಯ ಕಾರ್ಯದರ್ಶಿ ವಿ.ಸುಕುಮಾರ್, ಸಮಿತಿಯ ಸದಸ್ಯರಾದ ವಿಶ್ವನಾಥ್ ರವರನ್ನು ಒಳಗೊಂಡಿತ್ತು.

ಜನವರಿ 12 ರಂದು ನಿಯೋಗವು ಬಾಬಾ ಬುಡನ್ ಸ್ವಾಮಿ ದತ್ತಾತ್ರೇಯ ಪೀಠವನ್ನು ಹಾಗೂ ಸುತ್ತಲನ ಪ್ರದೇಶಗಳಲ್ಲಿರುವ ಹಲವಾರು ಸಮಾಧಿಗಳನ್ನು ವೀಕ್ಷಿಸಿತು. ಅಲ್ಲಿಯ ಮುಖ್ಯಸ್ಥರಾಗಿರುವ ಸೆಯ್ಯದ್ ಗೌಸ್ ಮೋಹಿಯುದ್ದಿನ್ ಶಾಖಾದ್ರಿಯವರೊಂದಿಗೆ ವಿವರಗಳನ್ನು ಸಂಗ್ರಹಿಸಿತು. ಈ ನಿಯೋಗವನ್ನು ಸಿಪಿಐ ನ ಜಿಲ್ಲಾ ಮಂಡಳಿಯು ಸ್ವಾಗತಿಸಿತು.

ಜನವರಿ 13 ರಂದು ನಿಯೋಗವು ಗಲಭೆಗ್ರಸ್ತ ಚಿಕ್ಕಮಗಳೂರಿನ ವಿವಿಧ ಪ್ರದೇಶಗಳನ್ನು ಸಂದರ್ಶಿಸಿತು. ಈ ಗಲಭೆಗೆ ಕಾರಣವಾಗಿದ್ದ ವೀರಾಂಜನೇಯ ಮಂದಿರವನ್ನು, ದೇವಸ್ಥಾನದ ಸಮಿತಿಯ ಅಧ್ಯಕ್ಷರನ್ನು ಭೇಟಿ ಮಾಡಿ ಮಾತನಾಡಲಾಯಿತು. ನಾಗರೀಕರೊಂದಿಗೆ ಮಾಹಿತಿ ಪಡೆಯಲಾಯಿತು.

ಮುಸ್ಲಿಂರ ಪ್ರಾರ್ಥನಾ ಸ್ಥಳವನ್ನು ನಾಶಗೊಳಿಸಲಾಗಿದೆಯೆನ್ನಲಾಗಿದ್ದ ಬಸವನಹಳ್ಳಿ ಬಡಾವಣೆಯ ಪ್ರದೇಶಕ್ಕೆ ನಿಯೋಗವು ತೆರಳಿತು. ಭಗ್ನಗೊಂಡಿದ್ದ ತಗಡಿನ ಹೊದಿಕೆಯ ಪ್ರಾರ್ಥನಾ ಸ್ಥಳವನ್ನು ವೀಕ್ಷಿಸಿ, ಆ ಜಾಗದ ಮಾಲೀಕರು, ಸುತ್ತಲಿನ ನಾಗರೀಕರನ್ನು ಅವರ ಮನೆಗಳಿಗೂ ತೆರಳಿ ಅಭಿಪ್ರಾಯಗಳನ್ನು ಆಲಿಸಲಾಯಿತು. ಅಲ್ಲದೆ ಗಲಭೆ ನಡೆಸಲಾಗಿದೆಯೆನ್ನಲಾದ ಸ್ಥಳಗಳಿಗೂ ನಿಯೋಗವು ತೆರಳಿ ವೀಕ್ಷಿಸಿತು.

ಶಾಂತಿ-ಸುವ್ಯವಸ್ಥೆ ಮುಂತಾದ ವಿಷಯಗಳ ಬಗ್ಗೆ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಡಾ॥ ಪರಮಶಿವ ಮೂರ್ತಿ ಅವರೊಂದಿಗೆ ನಿಯೋಗವು ಚರ್ಚಿಸಿತು. ಅಲ್ಲದೇ ವಿವಿಧ ವಿಭಾಗಗಳ ಪ್ರಮುಖರೊಂದಿಗೆ ವಿಚಾರ ವಿನಿಮಯ ಮಾಡಿಕೊಳ್ಳಲಾಯಿತು.

ಕೋಮುಸೌಹಾರ್ದತೆ-ಶಾಂತಿ, ಸಾಮರಸ್ಯವನ್ನು ಹಾಳುಗೆಡವಲು ವಿಶ್ವ ಹಿಂದು ಪರಿಷತ್, ಭಜರಂಗದಳ ಹಾಗೂ ಸಂಘಪರಿವಾರವು ಪ್ರಯತ್ನಿಸುತ್ತಿವೆ, ಹಲವಾರು ಪ್ರಚೋದಾತ್ಮಕ ಕೃತ್ಯಗಳನ್ನು ನಡೆಸಿವೆ. ಕೋಮುವಾದಿ ಶಕ್ತಿಗಳು ಹಬ್ಬಿಸುವ ಸುಳ್ಳು ವದಂತಿಗಳಿಗೆ ಕಿವಿಗೊಡಬಾರದು. ಇಂತಹ ಯಾವುದೇ ಕೃತ್ಯಗಳಿಂದ ಪ್ರಚೋದನೆಗೊಳಗ್ಾಗಬಾರದು, ಶಾಂತಿ-ಸೌಹಾರ್ದತೆ ಕಾಪಾಡಿಕೊಳ್ಳಬೇಕೆಂದು ನಿಯೋಗವು ಮನವಿ ಮಾಡಿತು. ಈ ನಿಯೋಗಕ್ಕೆ ಡಿವೈಎಫ್‌ಐ ನ ಸಂಚಾಲಕ ನದೀಂ, ರವಿ, ನಾಗರಾಜ್, ಎಸ್‌ಎಫ್‌ಐ ನ ನಾಯಕಿ ತನುಜಾ ಜೊತೆಗಿದ್ದು ಸಹಕರಿಸಿದರು.

ವಿವರ ವರದಿ ಮುಂದಿನವಾರ



ಬಾಬಾ ಬುಡನ್‌ಗಿರಿಯಲ್ಲಿ ನಿಯೋಗ ಮತ್ತು ಸ್ವಾಗತಿಸಿ ಸಿಪಿಐ ಗೆಳೆಯರು

ಇ.ಎಂ.ಎಸ್. ಭವನ ನಿಧಿ

ಹಿಂದಿನ ಮೊತ್ತ	ರೂ. 17,74,316.50
ದೇವದಾಸ್ - ಮಾಜಿ ಮೈಕೋ ನೌಕರರು, ಬೆಂಗಳೂರು	ರೂ.100-00
ರಾಯಚೂರು ಜಿಲ್ಲಾ ಸಮಿತಿ ಮೂಲಕ ಸಿಐಟಿಯು ಗಂಗಾವತಿ ತಾಲೂಕುಸಮಿತಿ	4800-00
ಅಕ್ಬರ್ ಸಾಬ್ ಗಂಗಾವತಿ	1000-00
ಎಸ್.ಎಫ್.ಐ ಗುಲ್ಬರ್ಗ ಜಿಲ್ಲಾ ಸಮಿತಿ	60-00
ಎಸ್.ಎಫ್.ಐ. ಕಲಘಟಗಿ. ತಾಲೂಕು ಸಮಿತಿ	55-00
ಎಸ್‌ಎಫ್‌ಐ ಬಳ್ಳಾರಿ ಜಿಲ್ಲಾ ಸಮಿತಿ	55-00
ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ	67000-00
ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ	1100-00
ಎನ್.ಕೆ.ಉಪಾಧ್ಯಾಯರವರ ಮೂಲಕ ಸಂಗ್ರಹ	2500-00
ಮಯೂರಿ ರೆಡ್ಡಿ, ಸಿಯಾಟಲ್, ಯು.ಎಸ್.ಎ.	10,000-00
ಒಟ್ಟು ಮೊತ್ತ	18,60,986.50

Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ